ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಮ ಸಮಾಜದ ಕನಸುಗಾರ ಪುರುಷೋತ್ತಮ ಕಲಾಲ್ಬಂಡಿ ಲಾಲ್ ಸಲಾಂ




ಸಂಪುಟ 14 | ಸಂಚಿಕೆ 35 | ಆಗಸ್ಟ್ 24–30, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com



ವಿಪತ್ಕಾಲದಲ್ಲೂ ಟೊಳ್ಳು ಪ್ರಚಾರ




ಚುನಾವಣಾ ಬಾಂಡ್ ಮತ್ತು ಈಗ ಡಿಜಿಟಲ್ ಪ್ರಚಾರ




ದಿಲ್ಲಿ ಗಲಭೆಗಳು: ಪಿತೂರಿ ಯಾರದ್ದು?

ಟಿಕ್‌ಟಾಕ್ ಹೋಯ್ತು! ಮೈಕ್ರೋಸಾಫ್ಟ್ ಬಂತು!!





ಎತ್ತ ಸಾಗಿದೆ ನ್ಯಾಯಾಂಗ?



ಫೇಸ್‌ಬುಕ್-ಬಿಜೆಪಿ ನಂಟಿನ ತನಿಖೆಗೆ ಜೆ.ಪಿ.ಸಿ. ರಚಿಸಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಹಗೆತನ ಉತ್ತೇಜನೆಯ ವಿರುದ್ಧ ತನ್ನದೇ ನೀತಿಯನ್ನು ಭಾರತದಲ್ಲಿ ಅನುಸರಿಸದ ಫೇಸ್‌ಬುಕ್

ಅಮೆರಿಕಾದ 'ವಾಲ್‌ಸ್ಟ್ರೀಟ್ ಜರ್ನಲ್' ಪತ್ರಿಕೆ ಜಗತ್ತಿನ ಸಾಮಾಜಿಕ ಮಾಧ್ಯಮ ಕ್ಷೇತ್ರದಲ್ಲಿನ ದೈತ್ಯ ಕಂಪನಿ 'ಫೇಸ್‌ಬುಕ್'ನ ಪಾತ್ರವನ್ನು, ನಿರ್ದಿಷ್ಟವಾಗಿ ಅದರ ಭಾರತದಲ್ಲಿನ ಧೋರಣೆ ಕುರಿತ ವಿಭಾಗದ ಪಾತ್ರವನ್ನು ಬಯಲಿಗೆಳೆದಿದೆ. ಭಾರತದಲ್ಲಿ ಅದು ಕೋಮುವಾದಿ ಹಗೆತನದಿಂದ ಕೂಡಿದ ವಿಷಯಗಳ ಬಗ್ಗೆ ತಾನೇ ಹಾಕಿಕೊಂಡ ನೀತಿಯನ್ನು ಕೂಡ ಅನುಸರಿಸುತ್ತಿಲ್ಲ ಎಂಬುದು ಈ ಮೂಲಕ ಬಯಲಾಗಿದೆ. 'ಫೇಸ್‌ಬುಕ್'ನ ಈ ವರ್ತನೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಇದು ಫೇಸ್‌ಬುಕ್ ಮತ್ತು ಅದರ ಇತರ ವೇದಿಕೆಗಳಾದ ವಾಟ್ಸ್ ಆಪ್ ಮತ್ತು ಇನ್ಸ್ಟಾಗ್ರಾಮ್‌ನ ಚಟುವಟಿಕೆಗಳ ಬಗ್ಗೆ ಇರುವ ಒಟ್ಟಾರೆ ಸಂದೇಹಗಳನ್ನು ದೃಢ ಪಡಿಸುತ್ತದೆ. 2018ರಲ್ಲಿ ನ್ಯೂಯಾರ್ಕ್ ಟೈಮ್ಸ್ ನಲ್ಲಿ ಪ್ರಕಟವಾದ ಒಂದು ಲೇಖನ ಅದರ ಪ್ರಶ್ನಾರ್ಹ ಆಚರಣೆಗಳನ್ನು ಕಟುವಾಗಿ ಬಯಲಿಗೆ ತಂದಿತ್ತು. ಈಗ ಬಯಲಾಗಿರುವ ಸಂಗತಿ ಬಿಜೆಪಿಯ ಅಗಾಧ ಸಾಮಾಜಿಕ ಮಾಧ್ಯಮ ಹೂಡಿಕೆ ಮತ್ತು ಕಾರ್ಯಾಚರಣೆಗಳು ಹಾಗೂ ಸಮುದಾಯಗಳ ನಡುವೆ ಹಗೆತನವನವನ್ನು ಉತ್ತೇಜಿಸುವಲ್ಲಿ ಅದರ ಪಾತ್ರದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತುತ್ತದೆ. ಇತ್ತೀಚೆಗೆ ರಿಲಯನ್ಸ್‌ನಲ್ಲಿ ಫೇಸ್‌ಬುಕ್ ಹಣಹೂಡಿಕೆ ಮಾಡಿರುವುದು ಗುತ್ತೇದಾರಿ ಹತೋಟಿಯ ಸಂದೇಹಗಳನ್ನು ಬಲಪಡಿಸುತ್ತದೆ. ಭಾರತದಲ್ಲಿ ಸಾಮಾಜಿಕ ಮಾಧ್ಯಮಗಳನ್ನು ಕುರಿತಂತೆ ಒಂದು ಪರಿಣಾಮಕಾರೀ ನಿಯಂತ್ರಣದ ಮೇಲುಸ್ತುವಾರಿ ಇರದಿರುವಾಗ ಇದು ಇನ್ನಷ್ಟು ಗಂಭೀರ ಸಂಗತಿ.

ಬಿಜೆಪಿಯ ಕೈಗಳಲ್ಲಿರುವ ಅಗಾಧ ಹಣಕಾಸು ಸಂಪನ್ಮೂಲಗಳು, ಜತೆಗೆ ಅಪಾರದರ್ಶಕವಾದ ಚುನಾವಣಾ ಬಾಂಡ್ ಸ್ಕೀಮ್ ಸಾಮಾಜಿಕ ಮಾಧ್ಯಮಗಳ ಮೇಲೆ ಅದರ ಹತೋಟಿಯನ್ನು ಖಾತ್ರಿಗೊಳಿಸಿವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಫೇಸ್‌ಬುಕ್-ವಾಟ್ಸ್ ಆಪ್-ಇನ್ಸ್ಟಾಗ್ರಾಮ್ ಹಾಗೂ ಬಿಜೆಪಿ ನಡುವಿನ ನಂಟಿನ ಕುರಿತು ಒಂದು ತುರ್ತು ಮತ್ತು ಆಮೂಲಾಗ್ರ ತನಿಖೆ ನಡೆಸಬೇಕು, ಹೊಣೆಗಾರಿಕೆಯನ್ನು ನಿಗದಿಗೊಳಿಸಬೇಕು ಹಾಗೂ ಈ ವೇದಿಕೆಗಳು ಕೋಮು ದ್ವೇಷವನ್ನು ಉತ್ತೇಜಿಸದಂತೆ ನಿಷೇಧಿಸಲು ಪರಿಣಾಮಕಾರಿ ಕ್ರಮಗಳನ್ನು ಶಿಫಾರಸು ಮಾಡಬೇಕು ಎಂದು ಕರೆ ನೀಡಿದೆ.

ಈ ನಂಟಿನ ಬಗ್ಗೆ ತನಿಖೆ ನಡೆಸಲು ಒಂದು ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯನ್ನು ತಕ್ಷಣವೇ ರಚಿಸಬೇಕು. ಜೆಪಿಸಿ ಯ ವರದಿ ಬರುವ ವರೆಗೆ ಫೇಸ್‌ಬುಕ್ ಭಾರತದ ಚುನಾವಣಾ ಆಯೋಗ ಮುಂತಾದ ಸಂವಿಧಾನಿಕ ಸಂಸ್ಥೆಗಳು ಮತ್ತು ಯಾವುದೇ ಸರಕಾರೀ ಇಲಾಖೆಯಿಂದ ಕಾರ್ಯಾಚರಣೆ ನಡೆಸದಂತೆ ನಿಷೇಧಿಸಬೇಕು ಎಂದೂ ಸಿಪಿಐ(ಎಂ) ಆಗ್ರಹಿಸಿದೆ.

ಪ್ರಶಾಂತ ಭೂಷಣ ಕುರಿತ ತೀರ್ಪು: ಅಸಹಿಷ್ಣುತೆಯ ಪ್ರದರ್ಶನ -ಸಿಪಿಐ(ಎಂ) ಪೊಲಿಟ್‌ಬ್ಯುರೊ

"ತೀರ್ಪನ್ನು ಮರುಪರಿಶೀಲಿಸುವುದು, ಶಿಕ್ಷೆ ವಿಧಿಸದಿರುವುದು ಒಳ್ಳೆಯದು"

ಹಿರಿಯ ವಕೀಲ ಪ್ರಶಾಂತ ಭೂಷಣ ಅವರು ನ್ಯಾಯಾಲಯದ ನಿಂದನೆ ಮಾಡಿದ್ದಾರೆ ಎಂದು ಸುಪ್ರಿಂ ಕೋರ್ಟಿನ ಮೂವರು ನ್ಯಾಯಾಧೀಶರ ಪೀಠ ಕೊಟ್ಟಿರುವ ತೀರ್ಪು ದುರದೃಷ್ಟಕರ, ಇದು ಅನಗತ್ಯವಾಗಿತ್ತು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಪ್ರಶಾಂತ ಭೂಷಣ ಅವರ ಎರಡು ಟ್ವೀಟ್‌ಗಳು ನ್ಯಾಯಾಲಯಕ್ಕೆ ಅಪಖ್ಯಾತಿ ತರುವಂತದ್ದು ಎಂದು ಕಾಣುವ ಮೂಲಕ ನ್ಯಾಯಾಲಯ ವಿಮರ್ಶೆಯ ಬಗ್ಗೆ ಅಸಹಿಷ್ಣುತೆಯನ್ನು ಮತ್ತು ಒಂದು ಅನುದಾರ ನಿಲುವನ್ನು ಪ್ರದರ್ಶಿಸಿದೆ, ಇದು ನಾಡಿನ ಅತ್ಯುನ್ನತ ನ್ಯಾಯಾಲಯಕ್ಕೆ ತಕ್ಕುದಲ್ಲ.

ಈ ತೀರ್ಪು ಕಾರ್ಯಾಂಗವು ಭಿನ್ನ ಮತವನ್ನು ಮತ್ತು ಪತ್ರಿಕಾ ಸ್ವಾತಂತ್ರ್ಯವನ್ನು ದಮನ ಮಾಡುವ ರಾಜದ್ರೋಹದ ಅಂಶ ಮುಂತಾದ ಕರಾಳ ಕಾಯ್ದೆಯಗಳನ್ನು ಬಳಸುತ್ತಿರುವ ಪ್ರಸಕ್ತ ಅಸಹಿಷ್ಣುತೆ ಮತ್ತು ದಮನದ ವಾತಾವಾರಣವನ್ನು ಇನ್ನಷ್ಟು ದಟ್ಟಗೊಳಿಸುತ್ತದಷ್ಟೇ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ನ್ಯಾಯಾಲಯ ಈ ತೀರ್ಪನ್ನು ಮರು ಪರಿಶೀಲಿಸುವುದು ಮತ್ತು ಈ ಪ್ರಕರಣದಲ್ಲಿ ಯಾವುದೇ ಶಿಕ್ಷೆಯನ್ನು ಪ್ರಕಟಿಸದೇ ಇರುವುದು ಒಳ್ಳೆಯದು ಎಂದು ಅಭಿಪ್ರಾಯ ಪಟ್ಟಿದೆ.

"ಇದು ಸುಪ್ರಿಂ ಕೋರ್ಟಿನ ಇಂದಿನ ಕಾರ್ಯನಿರ್ವಹಣೆ ಮತ್ತು ನಿಲುವಿನ ನೈಜ ಟೀಕೆಯನ್ನು ನ್ಯಾಯಾಂಗ ನಿಂದನೆಯ ವ್ಯಾಪ್ತಿಯೊಳಕ್ಕೆ ತರುತ್ತದೆ. ಇದುವರೆಗೆ ಇಂತಹ ಹೇಳಿಕೆಗಳು ಸಂವಿಧಾನದ ಕಲಮು 19(1)(ಎ) ಯ ಅಡಿಯಲ್ಲಿ ರಕ್ಷಣೆ ಪಡೆದಿದ್ದವು, ನಿಂದನೆ ಎಂದು ಪರಿಗಣಿಸಲ್ಪಡುತ್ತಿರಲಿಲ್ಲ ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ,

"ಈ ತೀರ್ಪು ಭಾರತದ ಪ್ರಜಾಪ್ರಭುತ್ವದಲ್ಲಿ ಸುಪ್ರಿಂ ಕೋರ್ಟಿನ ಪಾತ್ರದ ಬಗ್ಗೆ ಬಹಿರಂಗ ಮತ್ತು ಮುಕ್ತ ಚರ್ಚೆಯನ್ನು ತಡೆಯುತ್ತದೆ. ಇದು ಭಾರತದ ಸಂವಿಧಾನಿಕ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ" ಎಂದಿದ್ದಾರೆ.

ಗಾಬರಿ ಹುಟ್ಟಿಸುವ ತೀರ್ಪು-ಎಐಎಲ್‌ಯು

ಇದು ವಾಕ್ ಸ್ವಾತಂತ್ರ್ಯಕ್ಕೆ ಮತ್ತು ನ್ಯಾಯಾಂಗದ ಸರಿಯಾದ ವಿಮರ್ಶೆಗೆ, ಭಾರತದಲ್ಲಿ ಪ್ರಜಾಪ್ರಭುತ್ವದಲ್ಲಿ ಸುಪ್ರಿಂ ಕೋರ್ಟಿನ ಪಾತ್ರಕ್ಕೆ ಅಡ್ಡಿಯುಂಟು ಮಾಡುವ ಕೆಟ್ಟ ವಾಡಿಕೆಯನ್ನು ಹಾಕಿಕೊಟ್ಟಿದೆ ಎಂದು ಅಖಿಲ ಭಾರತ ವಕೀಲರ ಸಂಘ(ಎಐಎಲ್‌ಯು) ಖೇದ ವ್ಯಕ್ತಪಡಿಸಿದೆ.

"ತುರ್ತು ಪರಿಸ್ಥಿತಿ ಭಾರತೀಯ ಇತಿಹಾಸದ ಚರಿತ್ರೆಯಲ್ಲಿ ಅತ್ಯಂತ ಕರಾಳ ಯುಗ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿ' ಎಂದು ತೀರ್ಪು ಹೇಳುತ್ತದೆ. ಆದರೆ ಸುಪ್ರಿಂ ಕೋರ್ಟ್ ಈ ಕುರಿತ ಎಡಿಎಂ ಜಬಲ್ಪುರ ಕೇಸಿನಲ್ಲಿ ಹಾಗೆ ಹೇಳಲೇ ಇಲ್ಲ. ಅದು ಬಹುಮತದಿಂದ ಕಾರ್ಯಾಂಗವು ಮಾಡಿದ ಪ್ರಜಾಪ್ರಭುತ್ವ, ಜೀವದ ಹಕ್ಕು ಮತ್ತು ವಾಕ್ ಸ್ವಾತಂತ್ರ್ಯ ಸೇರಿದಂತೆ ವೈಯಕ್ತಿಕ ಸ್ವಾತಂತ್ರ್ಯದ ಉಲ್ಲಂಘನೆಯನ್ನು ರಕ್ಷಿಸಿತು. ಸುಮಾರು 40 ವರ್ಷಗಳ ಮೇಲಷ್ಟೇ 'ಖಾಸಗಿತ್ವದ ತೀರ್ಪಿ'ನಲ್ಲಿ ಅದನ್ನು ಬದಲಿಸಿತು ಎಂದು ನೆನಪಿಸಿದೆ. ತುರ್ತು ಪರಿಸ್ಥಿತಿ ಭಾರತೀಯ ಚರಿತ್ರೆಯಲ್ಲಿ ಅತ್ಯಂತ ಕರಾಳ ಯುಗ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿ' ಎಂದು ಹೇಳಿರುವುದು ಸುಪ್ರಿಂ ಕೋರ್ಟಿನ ಅಭಿಪ್ರಾಯವಾಗಿರುವಂತೆ "ಭವಿಷ್ಯದಲ್ಲಿ ಇತಿಹಾಸಕಾರರು ಕಳೆದ ಆರು ವರ್ಷಗಳತ್ತ ಹಿಂದಿರುಗಿ ನೋಡಿದಾಗ ಹೇಗೆ ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಒಂದು ಔಪಚಾರಿಕ ತುರ್ತು ಪರಿಸ್ಥಿತಿ ಇಲ್ಲದೆಯೆ ನಾಶ ಪಡಿಸಲಾಯಿತು ಎಂದು ನೋಡುವಾಗ, ಈ ವಿನಾಶದಲ್ಲಿ ಸುಪ್ರಿಂ ಕೋರ್ಟಿನ ಪಾತ್ರವನ್ನು, ನಿರ್ದಿಷ್ಟವಾಗಿ ಹಿಂದಿನ ನಾಲ್ಕು ಮುಖ್ಯ ನ್ಯಾಯಾಧೀಶರುಗಳ ಪಾತ್ರವನ್ನು ಗುರುತಿಸುತ್ತಾರೆ" ಎಂದು ಪ್ರಶಾಂತ್ ಭೂಷಣ್

ಪುಟ 14 ನೋಡಿ

ಅದಾನಿ ಗುಂಪಿಗೆ ತಿರುವನಂತಪುರ ವಿಮಾನ ನಿಲ್ದಾಣ:

ಮರುಪರಿಶೀಲಿಸುವಂತೆ ಕೇಂದ್ರಕ್ಕೆ ಕೇರಳ ಮುಖ್ಯಮಂತ್ರಿ ಆಗ್ರಹ

ತಿರುವನಂತಪುರ ವಿಮಾನ ನಿಲ್ದಾಣವನ್ನು ಅದಾನಿ ಗುಂಪಿಗೆ ವಹಿಸಿಕೊಡುವ ಕೇಂದ್ರ ಸರಕಾರದ ನಿರ್ಧಾರವನ್ನು ಮರುಪರಿಶೀಲಿಸಬೇಕು ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಪತ್ರ ಬರೆದಿದ್ದಾರೆ. ಕೇಂದ್ರದ ನಿರ್ಧಾರ ಏಕಪಕ್ಷೀಯ ಮತ್ತು ಇದರ ಬಗ್ಗೆ ಮರುಪರಿಶೀಲನೆ ಅಗತ್ಯವಾಗಿದೆ ಎಂದು ಅವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಕೇರಳ ಸರಕಾರ ಈ ಕುರಿತು ಕೇಂದ್ರಕ್ಕೆ ಹಲವು ಕೋರಿಕೆಗಳನ್ನು ಸಲ್ಲಿಸಿತ್ತು. ಅಲ್ಲದೆ ಇದರ ವಿರುದ್ಧ ಒಂದು ಅರ್ಜಿ ಸುಪ್ರಿಂ ಕೋರ್ಟ್ ನಿರ್ದೇಶನದಂತೆ ಈಗ ಕೇರಳ ಹೈಕೋರ್ಟ್ ಮುಂದೆ ಇದೆ. ಇದರ ವಿಚಾರಣೆ ಬಾಕಿಯಿದೆ. ಇದರ ನಡುವೆಯೇ ಈ ನಿರ್ಧಾರ ಮಾಡಲಾಗಿದೆ.

ಈ ವಿಮಾನ ನಿಲ್ದಾಣದ ನಿರ್ವಹಣೆಯನ್ನು ಪಿಪಿಪಿ (ಖಾಸಗಿ-ಸಾರ್ವಜನಿಕ ಭಾಗೀದಾರಿಕೆ) ಮಾದರಿಯೊಂದಿಗೆ ತಳಕು ಹಾಕಬಾರದು ಅಥವ ರಾಜ್ಯ ಸರಕಾರ ಹೆಚ್ಚಿನ ಪಾಲು ಹೊಂದಿರುವ ಒಂದು ಎಸ್.ಪಿ.ವಿ. (ವಿಶೇಷ ಉದ್ದೇಶದ ವಾಹಕ) ಗೆ ಕೊಡಬೇಕು ಎಂದೂ ಕೇಳಲಾಗಿತ್ತು. ರಾಜ್ಯ ಸರಕಾರಕ್ಕೆ ನೆಡುಂಬಶೇರಿ ಮತ್ತು ಕಣ್ಣೂರು ನಿಲ್ದಾಣಗಳನ್ನು ಉತ್ತಮವಾಗಿ ನಿರ್ವಹಿಸುತ್ತಿರುವ ಅನುಭವ ಇದೆ. ಹರಾಜಿನಲ್ಲಿ ಭಾಗವಹಿಸಿದ್ದ ಖಾಸಗಿ ಗುಂಪಿಗೆ ಇಂತಹ ಅನುಭವ ಇಲ್ಲ ಎಂಬುದನ್ನು ಮುಖ್ಯಮಂತ್ರಿಗಳ ಪತ್ರ ಮತ್ತೊಮ್ಮೆ ಪ್ರಧಾನ ಮಂತ್ರಿಗಳಿಗೆ ನೆನಪಿಸಿದೆ.

ಈ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಪಡಿಸಲು ರಾಜ್ಯ ಸರಕಾರ ಬಹಳಷ್ಟು ಹಣವನ್ನು ಹೂಡಿದೆ. 23.57 ಎಕ್ರೆ ಭೂಮಿಯನ್ನು ಭಾರತ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ಕೊಡಲಾಗಿದೆ. ಒಟ್ಟು ಅಭಿವೃದ್ಧಿಗೆ ನೀಡಲಾಗಿರುವ ಸಾರ್ವಜನಿಕ ನಿಧಿಗಳ ವಿವರಗಳನ್ನು ನೀತಿ ಆಯೋಗ ಕರೆದಿದ್ದ ಸಭೆಯಲ್ಲಿ ನೀಡಲಾಗಿದೆ ಎಂಬುದನ್ನೂ ಮುಖ್ಯಮಂತ್ರಿಗಳ ಪತ್ರ ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದೆ.

ಭಾರತ ಸರಕಾರದ ಈ ನಿರ್ಧಾರ ಕೇರಳದ ಜನತೆಯ ಆಶಯಗಳಿಗೆ ವಿರುದ್ಧವಾಗಿದೆ. ರಾಜ್ಯ ಸರಕಾರದ ಬಲವತ್ತಾದ ತರ್ಕಗಳನ್ನು ಪರಿಗಣಿಸದೆ ಈ ಏಕಪಕ್ಷೀಯ ನಿರ್ಧಾರವನ್ನು ಕೈಗೊಂಡಿರುವುದರಿಂದಾಗಿ ಈ ನಿರ್ಧಾರದ ಜಾರಿಯಲ್ಲಿ ಸಹಕರಿಸುವುದು ಕಷ್ಟವಾಗಬಹುದು ಎಂದೂ ಈ ಪತ್ರದಲ್ಲಿ ಹೇಳಿರುವ ಮುಖ್ಯಮಂತ್ರಿಗಳು ಈ ಹಂತದಲ್ಲಿ ಮಧ್ಯಪ್ರವೇಶಿಸಬೇಕು ಎಂದು ಪ್ರಧಾನ ಮಂತ್ರಿಗಳನ್ನು ಕೋರಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಈ ಕುರಿತು ಟಿಪ್ಪಣಿ ಮಾಡುತ್ತ "ವಿಮಾನ ನಿಲ್ದಾಣಗಳ ಖಾಸಗೀಕರಣ ತಮ್ಮ ಬಂಟರನ್ನು ಕೊಬ್ಬಿಸಲು ರಾಷ್ಟ್ರೀಯ ಆಸ್ತಿಗಳ ಲೂಟಿ. ನಂತರ ಪಾರ್ಟಿ ಫಂ??? ಎತ್ತಲು ಚುನಾವಣಾ ಬಾಂಡುಗಳನ್ನು ಕೊಡಿ. ಕೇರಳ ಮುಖ್ಯಮಂತ್ರಿಗಳ ಪತ್ರ, ರಾಜ್ಯ ಸರಕಾರದ ಪ್ರಸ್ತಾವಕ್ಕೆ ಪ್ರಧಾನಿ ಮೋದಿಯವರ ಆಶ್ವಾಸನೆಗಳಿಗೆ ವಿಶ್ವಾಸಘಾತ ಬಗೆದು ಇದನ್ನು ಮಾಡಲಾಗುತ್ತಿದೆ ಎಂಬುದನ್ನು ಸ್ಪಷ್ಟಗೊಳಿಸುತ್ತದೆ. ಒಂದು ಮೆಗಾ ಹಗರಣ" ಎಂದಿದ್ದಾರೆ.

ಈ ನಡುವೆ ತಿರುವನಂತಪುರ ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿರುವ ಕಾಂಗ್ರೆಸ್ ಮುಖಂಡ ಶಶಿ ತರೂರ್ ಬಿಜೆಪಿ ಕೇಂದ್ರ ಸರಕಾರದ ಈ ನಿರ್ಧಾರವನ್ನು ಬೆಂಬಲಿಸುವ ದನಿಯಿರುವ ಟ್ವೀಟ್ ಮಾಡಿರುವುದನ್ನು ಅವರ ಪಕ್ಷದ ರಾಜ್ಯ ಅಧ್ಯಕ್ಷರೇ ಪರೋಕ್ಷವಾಗಿ ಟೀಕಿಸಿದ್ದಾರೆ. "ಯಾವ ಕಾಂಗ್ರೆಸ್ ಸದಸ್ಯರೂ ಅದಾನಿಯ ಅಥವ ಯಾವುದೇ ಕಾರ್ಪೊರೇಟ್‌ನ ಸಂಬಳ ಪಟ್ಟಿಯಲ್ಲಿ ಇರಬಾರದು" ಎಂದು ಹೇಳಿರುವುದಾಗಿ ವರದಿಯಾಗಿದೆ.

'ಭಾರತ ರಕ್ಷಿಸಿ'ಕಾರ್ಯಕ್ರಮದಲ್ಲಿ ಭಾಗವಹಿಸಿದವರ ಮೇಲೆ ಎಫ್.ಐ.ಆರ್ -ಗೃಹಮಂತ್ರಿಗಳಿಗೆ ಕೇಂದ್ರ ಕಾರ್ಮಿಕ ಸಂಘಟನೆಗಳ ಪತ್ರ

ಆಗಸ್ಟ್ 9 ರಂದು 'ಕ್ವಿಟ್ ಇಂಡಿಯಾ' ದಿನದಂದು ದುಡಿಯುವ ಜನರ ಸಂಘಟನೆಗಳ ಕರೆಯಂತೆ ದೇಶಾದ್ಯಂತ ನಡೆದ 'ಭಾರತ ರಕ್ಷಿಸಿ' ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಾಂತಿಯುತ ಪ್ರತಿಭಟನಾಕಾರರ ವಿರುದ್ಧ ಹಲವೆಡೆಗಳಲ್ಲಿ ಎಫ್.ಐ.ಆರ್. ಹಾಕಲಾಗಿದೆ. ಇದಕ್ಕೆ ತನ್ನ ನೋವು ವ್ಯಕ್ತಪಡಿಸುತ್ತ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಕೇಂದ್ರ ಗೃಹಮಂತ್ರಿ ಅಮಿತ್ ಷಾ ರವರಿಗೆ ಬರೆದಿರುವ ಪತ್ರದಲ್ಲಿ ಇದು ಖಂಡನೀಯ ಕ್ರಮ ಎಂದಿದೆ.

ಈ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಕಾರ್ಮಿಕರು, ನೌಕರರು ಮತ್ತು ಇತರರು ತಮಗೆ ಸಂಕಟ ತರುತ್ತಿರುವ ಸರಕಾರದ ಕಾರ್ಮಿಕ ಧೋರಣೆಗಳು, ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟ ಮತ್ತು ಖಾಸಗೀಕರಣವನ್ನು ಪ್ರತಿಭಟಿಸುತ್ತಿದ್ದರು, ಮತ್ತು ಕೊವಿಡ್ ವಿರುದ್ಧ ಮುಂಚೂಣಿಯ ಹೋರಾಟದಲ್ಲಿ ತೊಡಗಿರುವ ವೈದ್ಯರುಗಳು, ನರ್ಸ್‌ಗಳು, ತಾಂತ್ರಿಕ ಸಿಬ್ಬಂದಿ, ಸಫಾಯಿ ಕರ್ಮಚಾರಿಗಳು, ಮುನಿಸಿಪಲ್ ಕಾರ್ಮಿಕರು, ಆಶಾ, ಅಂಗನವಾಡಿ, ಬಿಸಿಯೂಟ ಮುಂತಾದ ಸ್ಕೀಮ್ ನೌಕರರ ನೈಜ ಸಮಸ್ಯೆಗಳಿಗೆ ದನಿ ನೀಡುತ್ತಿದ್ದರು.

ಸರಕಾರ ಸತತವಾಗಿ ದುಡಿಯುವ ಜನಗಳ ಮೇಲೆ ಸಂಕಟಗಳನ್ನು ರಾಶಿ ಹಾಕುತ್ತಿರುವುದರಿಂದ ನಿರ್ವಾಹವಿಲ್ಲದೆ ಈ ಮಹಾಸೋಂಕಿನ ಕಾಲದಲ್ಲೂ ಬೀದಿಗಿಳಿಯಬೇಕಾಗಿ ಬಂದಿದೆ. ಆದರೂ ಮುಖಗವಸುಗಳನ್ನು ಕಟ್ಟಿಕೊಂಡು, ದೈಹಿಕ ಅಂತರವನ್ನು ಕಾಯ್ದುಕೊಂಡೇ ಅವರು ಈ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಆದರೆ ಅವರ ಮೇಲೆ ಇದೇ ಕಾರಣವನ್ನೊಡ್ಡಿ ಎಫ್‌ಐಆರ್‌ಗಳನ್ನು ಹಾಕಲಾಗಿದೆ. ಇದರಲ್ಲಿ ಈ ಕಾರ್ಮಿಕರು, ಸಂಪತ್ತನ್ನು ಉತ್ಪಾದಿಸುವವರು ಮತ್ತು ಸೇವೆಗಳನ್ನು ಒದಗಿಸುತ್ತಿರುವವರನ್ನು ಪ್ರತಿನಿಧಿಸುವ ಸಂಘಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ಹತ್ತಿಕ್ಕುವ ದ್ವೇಷಸಾಧನೆಯ ವಾಸನೆ ಬರುತ್ತಿದೆ, ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದಿರುವ ಈ ಕೇಂದ್ರ ಕಾರ್ಮಿಕ ಸಂಘಟನೆಗಳು ದೇಶಾದ್ಯಂತ ಕಾರ್ಮಿಕ ಸಂಘಗಳ ಮುಖಂಡರು ಮತ್ತು ಕಾರ್ಯಕರ್ತರ ಮೇಲೆ ಹಾಕಿರುವ ಎಫ್‌ಐಆರ್.ಗಳನ್ನು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿವೆ.

ಐ.ಎನ್.ಟಿ.ಯು.ಸಿ., ಎ.ಐ.ಟಿ.ಯು.ಸಿ, ಸಿ.ಐ.ಟಿ.ಯು, ಹೆಚ್‌ಎಂ.ಎಸ್. ಎ.ಐ.ಯು.ಟಿ.ಯು.ಸಿ., ಟಿ.ಯು.ಸಿ.ಸಿ, ಎಸ್.ಇ.ಡಬ್ಲ್ಯು.ಎ., ಎ.ಐ.ಸಿ.ಸಿ.ಟಿ.ಯು., ಯು.ಟಿ.ಯು.ಸಿ. ಮತ್ತು ಎಲ್.ಪಿ.ಎಫ್ ಮುಖಂಡರುಗಳು ಈ ಜಂಟಿ ಪತ್ರಕ್ಕೆ ಸಹಿ ಹಾಕಿದ್ದಾರೆ.

ಸಂಪಾದಕೀಯ

ನ್ಯಾಯಾಂಗ ಸರ್ಕಾರದ ಕೈಯಲ್ಲಿ ದಮನಕಾರಿ ಅಸ್ತ್ರವಾಗದಿರಲಿ

ಭಾರತದ ನ್ಯಾಯಾಂಗ ವಿಶ್ವದ ಅತ್ಯಂತ ಶಕ್ತಿಯುತ ನ್ಯಾಯಾಂಗಗಳಲ್ಲಿ ಒಂದು ಎಂಬ ಖ್ಯಾತಿ ಇದೆ. ಈ ಖ್ಯಾತಿಗೆ ನಮ್ಮ ಘನವೆತ್ತ ನ್ಯಾಯಾಂಗ ನಿರ್ವಹಿಸುತ್ತಾ ಬಂದಿರುವ ಹೊಣೆಗಾರಿಕೆಯೇ ಕಾರಣವಾಗಿದೆ ಎಂದರೆ ತಪ್ಪಾಗದು. ನಮ್ಮ ಗೌರವಾನ್ವಿತ ನ್ಯಾಯಾಂಗವು ಮುಂದೆ ನಿಂತು ದೇಶದ ಪ್ರಜೆಗಳ ಹಕ್ಕುಗಳನ್ನು ರಕ್ಷಿಸಿದ್ದರಿಂದಾಗಿ, ಕಾರ್ಯಾಂಗವು ತನ್ನ ಮಿತಿಯನ್ನು ಮೀರಿ ವರ್ತಿಸಿದಾಗ ನಾಗರಿಕರ ಸ್ವಾತಂತ್ರ್ಯವನ್ನು ಕಾಪಾಡಿದ್ದರಿಂದಾಗಿ, ಸಂಸತ್ತಿನ ಅಧಿಕಾರ ವ್ಯಾಪ್ತಿಗೂ ಒಂದು ಲಕ್ಷ್ಮಣ ರೇಖೆಯನ್ನು ಎಳೆದು ದೇಶದ ಸಂವಿಧಾನಕ್ಕೊಂದು ರಕ್ಷಣಾ ಕವಚವನ್ನು ಕೊಟ್ಟದ್ದರಿಂದಾಗಿ ನಮ್ಮ ನ್ಯಾಯಾಂಗಕ್ಕೆ ಆ ಕೀರ್ತಿ ಪ್ರಾಪ್ತವಾಗಿದೆ. ಈ ಖ್ಯಾತಿಯನ್ನು ನಮಗೆ ಉಳಿಸಿಕೊಳ್ಳಲು ಹಾಗೂ ಬೆಳೆಸಿಕೊಳ್ಳಲು ಸಾಧ್ಯವಾಗಬೇಕಾಗಿದೆ.

ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಇತ್ತೀಚೆಗೆ ಸಂಭವಿಸಿದ ಕೆಲವು ಬೆಳವಣಿಗೆಗಳು ಕಳವಳಕಾರಿಯಾಗಿವೆ. ನ್ಯಾಯಾಂಗವು ಕಾರ್ಯಾಂಗದ ಕೈಗೊಂಬೆಯಾಗಿ ಪರಿವರ್ತನೆಯಾಗುತ್ತಿರುವಂತೆ ಭಾಸವಾಗುತ್ತಿದೆ. ಇತ್ತೀಚಿಗೆ ಸುಗ್ರೀವಾಜ್ಞೆಗಳ ಮೂಲಕ ಕೆಲವು ಕಾನೂನು ಪಾಸಾಗಿವೆ. ನೀವು ಪ್ರಧಾನ ಮಂತ್ರಿಗಳನ್ನು ಟೀಕಿಸಿದರೆ ನಿಮ್ಮನ್ನು ರಾಷ್ಟ್ರ ದ್ರೋಹಿ ಎಂದು ಪರಿಗಣಿಸಬಹುದು. ನೀವು ಶಾಸಕರನ್ನು ಟೀಕಿಸಿದರೆ ನಿಮ್ಮನ್ನು ಹಕ್ಕುಚ್ಯುತಿ ಅಡಿಯಲ್ಲಿ ದಂಡಿಸಬಹುದು. ನೀವು ಒಬ್ಬ ನ್ಯಾಯಾಧೀಶರನ್ನು ಅಪ್ಪಿತಪ್ಪಿ ಟೀಕಿಸಿದರೆ ಅದು ನ್ಯಾಯಾಂಗ ನಿಂದನೆಯಾಗಲಿದೆ. ಖ್ಯಾತ ನ್ಯಾಯವಾದಿ ಹಾಗೂ ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಭೂಷಣ್ ಅವರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ನಡೆದಿರುವುದು ಇದೇ.

ಪ್ರಶಾಂತ್ ಭೂಷಣ್‌ರವರು ಮಾಡಿದ್ದ ಎರಡು ಟ್ವೀಟ್‌ಗಳನ್ನು ಕ್ರಿಮಿನಲ್ ನ್ಯಾಯಾಂಗ ನಿಂದನೆಗೆ ಸಮ ಎಂದು ಮಾನ್ಯ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠವು ತೀರ್ಪು ನೀಡಿದ್ದು ದುರದೃಷ್ಟಕರವಾಗಿದೆ. ಸದರಿ ಟ್ವೀಟ್‌ಗಳಲ್ಲಿ ಕೆಲವು ಆಕ್ಷೇಪಾರ್ಹ ಅಂಶಗಳು ಇದ್ದರೂ ಇರಬಹುದು. ಆದರೆ ಪ್ರಶಾಂತ ಬೂಷಣ್ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡ ಸುಪ್ರೀಂ ಕೋರ್ಟ್ ಅವರ ಎರಡು ಟ್ವೀಟ್‌ಗಳನ್ನು ನ್ಯಾಯಾಂಗ ನಿಂದನೆ ವ್ಯಾಪ್ತಿಗೊಳಪಡಿಸಿದ್ದು ಖೇದಕರವಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಧ್ವನಿ ಎತ್ತುವ ಮನಸ್ಸುಗಳಿಗೆ ತೀರಾ ನಿರಾಸೆಯಾಗಿರುತ್ತದೆ. ಪ್ರಶಾಂತ್ ಭೂಷಣ್ ಹಿರಿಯ ವಕೀಲರು. ಸಂವಿಧಾನ ತಜ್ಞರು. ಹಲವು ಪ್ರಕರಣಗಳಲ್ಲಿ ಸಾರ್ವಜನಿಕ ಹಿತ್ತಾಸಕ್ತಿಯ ಪರವಾಗಿ ದನಿ ಎತ್ತಿರುವವರು. ಕೆಲವು ಪ್ರಕರಣಗಳಲ್ಲಿ ಅಮಿಕಸ್ ಕ್ಯೂರಿಯಾಗಿಯೂ ಕರ್ತವ್ಯ ನಿಭಾಯಿಸಿದವರು. ಆದರೆ, ಅವರು ಆಡಿದ ಮಾತುಗಳ ವಿಚಾರವಾಗಿ ಕೋರ್ಟ್ ಕಠಿಣ ನಿಲುವು ತಾಳಿರುವುದು ದುರದೃಷ್ಟಕರವಾಗಿದೆ. ಇಂತವು ನಿಲುವುಗಳು ನ್ಯಾಯಾಂಗದ ಅಡಿಪಾಯವನ್ನೇ ಅಲುಗಾಡಿಸುತ್ತವೆ.



"ನ್ಯಾಯಾಂಗ ನಿಂದನೆಯ ಕಾನೂನು ನ್ಯಾಯಾಲಯದ ಘನತೆಯನ್ನು ಎತ್ತಿ ಹಿಡಿಯಲು ಬಳಕೆಯಾಗಬೇಕಿಲ್ಲ. ಈ ಕಾನೂನನ್ನು ಅಪರೂಪಕ್ಕೆ ಬಳಸಿಕೊಳ್ಳಬೇಕು. ವಾಕ್ ಸ್ವಾತಂತ್ರವನ್ನು ರಕ್ಷಿಸಬೇಕಿರುವುದೇ ಬಹುಮುಖ್ಯವಾದದ್ದು" ಎಂದು ಖ್ಯಾತ ನ್ಯಾಯ ಶಾಸ್ತ್ರಜ್ಞಾ ನ್ಯಾಯಮೂರ್ತಿ ಲಾರ್ಡ್ ಡೆನಿಂಗ್ ಹೇಳಿದ್ದಾರೆ. ಇದೇ ರೀತಿಯ ಮಾತುಗಳನ್ನು ನಮ್ಮ ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಎಸ್. ಮಳಗಾಂವಕರ್ ಪ್ರಕರಣದಲ್ಲಿ ನ್ಯಾಯಾಂಗ ನಿಂದನೆ ವಿಚಾರವಾಗಿ ಸುಪ್ರೀಂ ಕೋರ್ಟ್ ಆಡಿದ ಮಾತುಗಳು ಅವಿಸ್ಮರಣೀಯ. "ಅತ್ಯಂತ ಕಟುವಾದ, ತರವಲ್ಲದ ಟೀಕೆಗಳನ್ನೂ ಒಳ್ಳೆಯ ಉದ್ದೇಶದಿಂದ ಮಾಡಿದಾಗ ಅವುಗಳ ವಿಷಯದಲ್ಲಿ ಮಾನವೀಯವಾದ ನಿಲುವು ತಾಳುವುದು ಒಳಿತು" ಎಂದು ಆಗ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿದ್ದು ಪ್ರಸಿದ್ಧರಾದ ಮಾನ್ಯ ಶ್ರೀ ವಿ.ಆರ್. ಕೃಷ್ಣ ಅಯ್ಯರ್ ಹೇಳಿದ್ದವು. ನ್ಯಾಯಾಂಗ ನಿಂದನೆಯ ಕಾನೂನಿನ ಭೀತಿಯ ಸದಾಶಯದ ಟೀಕೆಗಳೂ ವ್ಯಕ್ತವಾಗದಂತೆ ತಡೆಯುತ್ತವೆ. ಟೀಕೆಗಳನ್ನು ಸ್ವೀಕರಿಸುವ ಸಂಸ್ಥೆಗಳು ಗಟ್ಟಿಯಾಗುತ್ತವೆಯೇ ವಿನಾ ದುರ್ಬಲವಾಗುವುದಿಲ್ಲ.

ಆನತೆ ನ್ಯಾಯಾಂಗದ ಮೇಲಿನ ವಿಶ್ವಾಸ ಕಳೆದು ಕೊಳ್ಳುತ್ತಿರುವುದಕ್ಕೆ ಕಾರಣವಾಗಬಹುದಾದ ಇನ್ನೊಂದು ವರದಿಯಾಗಿದೆ. ಪ್ರಧಾನ ಮಂತ್ರಿ ಹೆಸರಿನಲ್ಲಿ ರಚನೆಯಾಗಿರುವ ಒಂದು ಟ್ರಸ್ಟ್ ನಿಧಿಯಲ್ಲಿ ಸಂಗ್ರಹವಾಗಿರುವ ನಿಧಿಯನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಗೆ ವರ್ಗಾಯಿಸಲು ನಿರ್ದೇಶನ ನೀಡಬೇಕೆಂದು ಸಲಿಸಲಾದ ಸಾರ್ವಜನಿಕ ಹಿತ್ತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಪಿ.ಎಂ. ಕೇರ್ಸ್ ಎಂಬ ಈ ಖಾಸಗಿ ಟ್ರಸ್ಟ್ ಬಾರಿ ಮೊತ್ತದ ಹಣವನ್ನು ಸಂಗ್ರಹಿಸುತ್ತಿರುತ್ತದೆ. ಇದೊಂದು ಸೇವಾ ಸಂಸ್ಥೆಯಾಗಿ ನೋಂದಣಿ ಆಗಿರುವುದರಿಂದ ಅದಕ್ಕೆ ಯಾವುದೇ ನಿರ್ದೇಶನ ನೀಡಲು ಬರುವುದಿಲ್ಲ ಎಂಬುದು ಕೋರ್ಟಿನ ನಿಲುಮೆಯಾಗಿದೆ. ದೇಣಿಗೆಯಾಗಿ ಬರುವ ಕೋಟ್ಯಾಂತರ ರೂಪಾಯಿಗಳನ್ನು ಹೇಗೆ ವೆಚ್ಚ ಮಾಡಲಾಗುತ್ತದೆ ಎಂಬ ಮಾಹಿತಿಯನ್ನು ಕೇಂದ್ರ ಸರ್ಕಾರ ಬಹಿರಂಗ ಪಡಿಸುವುದಿಲ್ಲ. ಸರ್ಕಾರವು ಜನರಿಗೆ ತೋರಬೇಕಾದ ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕೆ ಸುಪ್ರೀಂ ಕೋರ್ಟಿನ ಈ ತೀರ್ಪು ಬಹುದೊಡ್ಡ ಹೊಡೆತ ಕೊಟ್ಟಿದೆ. ಸಾರ್ವಜನಿಕರಿಂದ ಪಡೆದ ಹಣದ ವಿಷಯದಲ್ಲಿ ಅಪಾರದರ್ಶಕವಾಗಿ ವರ್ತಿಸುತ್ತಿರುವ ಪ್ರಧಾನ ಮಂತ್ರಿ ಹೆಸರಿನ ಟ್ರಸ್ಟ್‌ನ ತನಿಖೆ ಮಾಡಲು ದೊರೆತ ಅವಕಾಶವನ್ನು ಕೈಬಿಟ್ಟಂತಾಗಿದೆ. "ರೋಗಿ ಬಯಸಿದ್ದೇ ಹಾಲು, ಮೋದಿ ಪಡೆದದ್ದೇ ಹಾಲು" ಎಂಬಂತಾಗಿದೆ. ನಮ್ಮ ನ್ಯಾಯಾಂಗ ಎತ್ತ ಸಾಗುತ್ತಿದೆ. ಸರ್ವಾಧಿಕಾರಿ ಪ್ರವೃತ್ತಿಗಳು ಬಹುವೇಗದಿಂದ ಬೆಳೆಯುತ್ತಿರುವಾಗ ಜನತೆ ಯಾರ ಮೇಲೆ ನಂಬಿಕೆ ಇಟ್ಟುಕೊಳ್ಳುವುದು?

ಬೆಂಗಳೂರು ನಗರದ ಡಿಜೆ ಹಳ್ಳಿ ಹಾಗೂ ಕೆಜೆ ಹಳ್ಳಿ ಧಾಳಿಗಳ ಒಟ್ಟು ಪ್ರಕರಣಗಳನ್ನು ಸ್ವತಂತ್ರ ನ್ಯಾಯಾಂಗ ತನಿಖೆಗೆ ಒಳಪಡಿಸಲು ಒತ್ತಾಯ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಈಚೆಗೆ, ಸಾಮಾಜಿಕ ಜಾಲತಾಣದಲ್ಲಿ ಪ್ರವಾದಿ ಮಹಮದ್ ಕುರಿತ ಕೋಮು ಪ್ರಚೋದಕ ಮತ್ತು ಅವಹೇಳನಕಾರಿ ಪೋಸ್ಟಿಂಗ್ ಮತ್ತು ಆ ವಿಚಾರಕ್ಕೆ ಸಂಬಂಧಿಸಿ ದೂರು ದಾಖಲೆಯಲ್ಲಾದ ವಿಳಂಬವು, ಹಿಂಸಾಚಾರಕ್ಕೆ ತಿರುಗಿ, ಬೆಂಗಳೂರಿನ ಪುಲಕೇಸಿ ನಗರದ ಶಾಸಕರ ಮನೆ ಹಾಗೂ ಡಿಜೆ ಹಳ್ಳಿ ಹಾಗೂ ಕೆಜೆ ಹಳ್ಳಿ ಪೋಲೀಸ್ ಠಾಣೆಗಳ ಮೇಲೆ ದಾಳಿ ನಡೆದು ಕೋಟ್ಯಾಂತರ ರೂಗಳ ಆಸ್ತಿ– ಪಾಸ್ತಿಗೆ ಹಾನಿಯಾಗಿದೆ. ಅದೇ ರೀತಿ, ಗೋಲಿಬಾರ್ ನಲ್ಲಿ ಮುವ್ವರು ಕೊಲ್ಲಲ್ಪಟ್ಟಿದ್ದಾರೆ.

ಇದೊಂದು, ಮುಂಬರುವ ದಿನಗಳ ರಾಜಕೀಯ ದುರ್ಲಾಭಕ್ಕಾಗಿ ಉಂಟು ಮಾಡಲಾಗಿರುವ ದುಷ್ಕೃತ್ಯವಾಗಿದೆ. ಈ ಒಟ್ಟು ಅಹಿತಕರ ಘಟನೆಗಳನ್ನು ಮತ್ತು ಈ ದುರ್ಘಟನೆಗಳಿಗೆ ಕಾರಣವಾದ ಎಲ್ಲ ಶಕ್ತಿಗಳನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ. ಅವರ ಮೇಲೆ ಕಠಿಣ ಕಾನೂನಿನ ಕ್ರಮಗಳನ್ನು ಜರುಗಿಸುವ ಬೇಕು ಹಾಗೂ ಆ ಪ್ರದೇಶದಲ್ಲಿ ಶಾಂತಿ ಹಾಗೂ ಸುವ್ಯವಸ್ಥೆಗೆ ಅಗತ್ಯ ಕ್ರಮ ವಹಿಸಬೇಕೆಂದು ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ.

ಮೇಲ್ನೋಟಕ್ಕೆ ಈ ಘಟನೆಗಳ ಹಿಂದೆ ಬಲಪಂಥೀಯ ಕೋಮುವಾದಿ ಹಿಂದೂ ಹಾಗೂ ಮುಸ್ಲಿಂ ಮೂಲ ಭೂತವಾದಿ ಶಕ್ತಿಗಳ ಕೈವಾಡವಿರುವುದು ಹಾಗೂ ಅವುಗಳ ರಾಜಕೀಯ ದುರ್ಲಾಭದ ದುರ್ಗಂಧವಿರುವುದು ಕಂಡು ಬರುತ್ತದೆ.

ಅದೇ ರೀತಿ, ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಸರಕಾರದ ಯಾವುದೇ ನಿಯಂತ್ರಣವಿಲ್ಲದೇ ಇರುವುದರಿಂದ,

ಕೋಮು ಪ್ರಚೋಧಕ ಅವಹೇಳನಕಾರಿ ಪೋಸ್ಟಿಂಗ್‌ಗಳು, ದೂಷಣೆಗಳು, ಸ್ವೇಚ್ಛಾಚಾರಗಳು, ಈ ದಿನಗಳಲ್ಲಿ ನಿರಂತರವಾಗಿ ಕಂಡು ಬರುತ್ತಲೇ ಇವೆ. ಇದರಿಂದ ಧಾರ್ಮಿಕ ಮುಖಂಡರು, ಪ್ರವಾಧಿಗಳು, ರಾಜಕೀಯ ನಾಯಕರು, ಪ್ರಗತಿಪರ ಸಾಹಿತಿಗಳು ಗಂಭೀರವಾಗಿ ನಿಂದನೆಗೊಳಗಾಗುತ್ತಿದ್ದಾರೆ. ಬೆದರಿಸಲ್ಪಡುತ್ತಿದ್ದಾರೆ.

ಇಂತಹ ಆತಂಕಕಾರಿ ದುಷ್ಕೃತ್ಯಗಳು ಮಾಧ್ಯಮಗಳಲ್ಲಿ ನಡೆಯುತ್ತಿರುವಾಗ, ರಾಜಕೀಯ ಲೆಕ್ಕಾಚಾರದೊಂದಿಗೆ ತಮ್ಮ ಸರಕಾರ ಗಂಭೀರವಾಗಿ ಮೌನ ವಹಿಸುತ್ತಿರುವುದರಿಂದ ಗೌರವಾನ್ವಿತರು ನಿರಂತರವಾಗಿ ಅಪಮಾನಕ್ಕೊಳಗಾಗುವುದು ಮತ್ತು ಈಗಿನ ಇಂತಹ ದುರ್ಘಟನೆಗಳು ಸಂಭವಿಸುತ್ತಿರುವುದು ಮುಂದುವರೆದಿದೆ.

ಆದ್ದರಿಂದ, ದೃಶ್ಯ ಮತ್ತಿತರೆ ಸಾಮಾಜಿಕ ಜಾಲ ತಾಣವೂ ಸೇರಿದಂತೆ ಎಲ್ಲಾ ಮಾಧ್ಯಮಗಳಲ್ಲಿನ ಅವಹೇಳನಕಾರಿ ಹಾಗೂ ಕೋಮು ಪ್ರಚೋದಕ ದೂಷಣೆಗಳು ಮತ್ತು ಪೋಸ್ಟಿಂಗ್ ಗಳ ಮೇಲೆ ತಕ್ಷಣ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಅದೇ ರೀತಿ, ಈ ದಾಳಿಗಳ ಒಟ್ಟು ಪ್ರಕರಣಗಳನ್ನು ಒಂದು ಸ್ವತಂತ್ರ ನ್ಯಾಯಾಂಗ ತನಿಖೆಗೊಳಪಡಿಸಬೇಕು. ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಲು, ಜನತೆಯ ಆತಂಕವನ್ನು ನಿವಾರಿಸಲು, ಅಗತ್ಯ ಕ್ರಮವಹಿಸುವಂತೆ ಹಾಗೂ ಕೊಲ್ಲಲ್ಪಟ್ಟವರ ಕುಟುಂಬಗಳಿಗೆ ತಕ್ಷಣ ಪರಿಹಾರಗಳನ್ನು ಘೋಷಿಸುವಂತೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಯು. ಬಸವರಾಜ
ಕಾರ್ಯದರ್ಶಿ (17–08–2020)

ಕರ್ನಾಟಕ ರಾಜ್ಯ ಅಕ್ಷರ ದಾಸೋಹ ಕೆಲಸಗಾರರ ಬಾಕಿ ವೇತನವನ್ನು ತಕ್ಷಣವೇ ಬಿಡುಗಡೆ ಮಾಡಲು ಒತ್ತಾಯ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಕಳೆದ ಹಲವಾರು ದಿನಗಳಿಂದ ರಾಜ್ಯದಾದ್ಯಂತ ಅಕ್ಷರ ದಾಸೋಹದ ಕಾರ್ಮಿಕರು ಏಪ್ರಿಲ್ ತಿಂಗಳಿಂದ ಬಿಡುಗಡೆಯಾಗದ ತಮ್ಮ ವೇತನಕ್ಕಾಗಿ, ರಾಜ್ಯ ಸರಕಾರ ಕೂಡಲೆ ಬಾಕಿ ವೇತನ ನೀಡುವಂತೆ ಒತ್ತಾಯಿಸಿ ಚಳುವಳಿಯಲ್ಲಿ ತೊಡಗಿದ್ದರೂ ರಾಜ್ಯ ಸರಕಾರ ಈ ಕುರಿತು ಕ್ರಮ ವಹಿಸದಿರುವುದು ಖಂಡನೀಯವಾಗಿದೆ.

ಅತ್ಯಂತ ಕಡಿಮೆ ವೇತನಕ್ಕೆ (ಕೇವಲ ಮಾಸಿಕ 2,000 ರೂಗಳು ಮಾತ್ರ ಅಂದರೇ ದಿನಕ್ಕೆ ಕೇವಲ 66 ರೂಗಳು ಮಾತ್ರ) ದುಡಿಯುತ್ತಿರುವ ರಾಜ್ಯದ ಲಕ್ಷಾಂತರ ಕಾರ್ಮಿಕರು ಕಳೆದ 4–5 ತಿಂಗಳಿನಿಂದ ಕೋವಿಡ್– 19 ರ ಸಂಕಷ್ಠದಲ್ಲು ವೇತನವಿಲ್ಲದೇ ತೀವ್ರ ಬಳಲಿದ್ದಾರೆ. ಸರಕಾರದ ಉದಾಸೀನತೆಯಿಂದ ಬೇಸತ್ತ ಕಾರ್ಮಿಕರು ಈ ದಿನ ಸಚಿವರ ಮನೆ ಮುಂದೆ ಪ್ರತಿಭಟನೆ ಮಾಡಲು ಮುಂದಾದಾಗ, ಸಂಬಂಧಿಸಿದ ಸಚಿವರು ಅದರ ನಾಯಕರನ್ನು ಮಾತುಕತೆಗೆ ಕರೆದು ಶಾಂತ ರೀತಿಯಿಂದ ಸಮಸ್ಯೆ ಇತ್ಯರ್ಥ ಮಾಡುವ ಬದಲು, ಪ್ರತಿಭಟನಾಕಾರರನ್ನು ಬಂಧಿಸಿ ಬೆದರಿಸಿಲು ಮುಂದಾಗಿದೆ. ಬಂಧನಕ್ಕೊಳಗಾದವರಲ್ಲಿ ಸಿಪಿಐಎಂ ರಾಜ್ಯ ಮುಖಂಡರಾದ ಕಾಂ. ವರಲಕ್ಷ್ಮಿ, ಕಾಂ. ಮಾಲಿನಿಮೇಸ್ತಾ ಇದ್ದಾರೆ. ಸರಕಾರದ ಈ ಅಹಿತಕರ ಕ್ರಮವನ್ನು ಸಿಪಿಐಎಂ ತೀವ್ರವಾಗಿ ಖಂಡಿಸುತ್ತದೆ.

ತಕ್ಷಣವೇ, ಬಂಧಿಸಲ್ಪಟ್ಟವರನ್ನು ಯಾವುದೇ ಕೇಸುಗಳನ್ನು ದಾಖಲಿಸದೇ, ಬೇಷರತ್ತಾಗಿ ಬಿಡುಗಡೆ ಮಾಡಬೇಕು ಮತ್ತು ಕೂಡಲೇ, ಹೋರಾಟ ನಿರತ ಸಂಘದ ಮುಖಂಡರ ಜೊತೆ ರಾಜ್ಯ ಸರಕಾರ ಮಾತುಕತೆ ನಡೆಸ ಬೇಕು ಹಾಗೂ ಕಾರ್ಮಿಕರ ಬಾಕಿ ವೇತನವನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ರಾಜ್ಯ ಸರಕಾರವನ್ನು ಬಲವಾಗಿ ಆಗ್ರಹಿಸುತ್ತದೆ.

ಯು. ಬಸವರಾಜ
ಕಾರ್ಯದರ್ಶಿ (17–08–2020)

ಕಾಮ್ರೇಡ್ ಪುರುಷೋತ್ತಮ ಕಲಾಲ್‌ಬಂಡಿ



ಕಟ್ಟಡ ಕಾರ್ಮಿಕರ ಸಂಘದ ಬೆಂಗಳೂರು ದಕ್ಷಿಣ ಜಿಲ್ಲಾ ಅಧ್ಯಕ್ಷರು ಮತ್ತು ವಿಜ್ಞಾನ ಚಳುವಳಿಯ ಸಕ್ರಿಯ ಕಾರ್ಯಕರ್ತರಾಗಿದ್ದ ಕಾಮ್ರೇಡ್ ಪುರುಷೋತ್ತಮ ಕಲಾಲಬಂಡಿ ಅವರಿಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ಶ್ರದ್ಧಾಂಜಲಿ ಸಲ್ಲಿಸುತ್ತದೆ.

ರಾಯಚೂರು ಜಿಲ್ಲೆಯಲ್ಲಿ CPIM ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ ಕಾಮ್ರೇಡ್ ಪುರುಷೋತ್ತಮ ಕಲಾಲಬಂಡಿ ಅವರು ಇಂದು ದಿನಾಂಕ 20–8–20 ರಂದು ಮಧ್ಯಾಹ್ನ 4.30 ಬೆಂಗಳೂರಿನಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಅವರು ರಾಯಚೂರು ಜಿಲ್ಲೆಯಲ್ಲಿ ಪಕ್ಷದ ಬೆಳವಣಿಗೆಗೆ ಮತ್ತು 1980–85 ಕಾಲಘಟ್ಟದಲ್ಲಿ CPIM ಪಕ್ಷದ ನೇತೃತ್ವದಲ್ಲಿ ಜಿಲ್ಲೆಯ ಜ್ವಲಂತ ಸಮಸ್ಯೆ ಗಳ ವಿರುದ್ಧ ಮತ್ತು ಸ್ಥಳಿಯರಿಗೆ KPC ಯಲ್ಲಿ ಉದೋಗ ನೀಡುವಂತೆ ಅಂದು DYFI ಯುವಜನ ಸಂಘಟನೆ ನೇತೃತ್ವದಲ್ಲಿ ಚಳುವಳಿಯ ನಡೆಸಿದರ ಭಾಗವಾಗಿ ಜಿಲ್ಲೆಯ ನೂರಾರು ಜನರಿಗೆ ಉದ್ಯೋಗ ಕಲ್ಪಿಸುವಲ್ಲಿ ಪ್ರಮುಖ ಹೋರಾಟಗಾರರಾಗಿದ್ದರು. ಜೋತೆಗೆ ಅಗಿನ ಕಾಲದಲ್ಲಿ ಸೈಕಲ್ ರೀಕ್ಷಾ, ಆಟೋ ಚಾಲಕರ ಕಾರ್ಮಿಕರ ಸಂಘಗಳನ್ನು ಕಟ್ಟಿ ಮತ್ತು ರಾಯಚೂರು ನಗರದ ಜಲಾಲ್ ನಗರ, ಐಃಖ ನಗರ, ಮಡ್ಡಿಪೇಟ್, ಸಿಯಾತಲಾಬ್, ಹರಿಜನವಾಡ ಹೀಗೆ ಹಲವಾರು ವಾರ್ಡಗಳ ಜನರ ಮೂಲಭೂತ ಸೌಕರ್ಯ ಗಳಿಗೆ ಮತ್ತು ವಸತಿ ಹೀನರಿಗೆ ವಸತಿಗಾಗಿ ಮತ್ತು ಹಕ್ಕು ಪತ್ರಗಳಿಗಾಗಿ ಅಂದು ಪಕ್ಷ ನಡೆಸಿದ ಚಳುವಳಿಯಲ್ಲಿ ಪ್ರಮುಖವಾಗಿ ತೋಡಗಿಸಿಕೂಂಡು ಜಿಲ್ಲೆಯಲ್ಲಿ ಪಕ್ಷದ ಬೆಳವಣಿಗೆಗೆ ಕ್ರಮವಹಿಸಿದ್ದರು.

ಇತ್ತೀಚೆಗೆ ಅವರು ಕುಟುಂಬದ ಸಮೇತ ಬೆಂಗಳೂರುನಲ್ಲಿ ನೆಲ್ಲೆಸಿದ್ದರು. ಬೆಂಗಳೂರಿನಲ್ಲಿ ಕೂಡ ಅವರು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯಡಿ ಕಟ್ಟಡ ನಿರ್ಮಾಣ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಮತ್ತು ವಿಜ್ಞಾನ ತಂತ್ರಜ್ಞಾನಗಳ ಸಂಘಟನೆಯಲ್ಲಿ ತೊಡಗಿಸಿಕೊಂಡು ಅತ್ಯಂತ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದರು ಮತ್ತು ನಿರಂತರವಾಗಿ ಚುಳುವಳಿಯಲ್ಲಿ ತೂಡಗಿದ್ದರು.

ಲಾಕ್ಡೌನ್ ಕಾಲಾವಧಿಯಲ್ಲಿ ಜ್ಞಾನ ಭಾರತಿ ವಾರ್ಡ್‌ನಲ್ಲಿ ಸಿಐಟಿಯು ಪರವಾಗಿ ಕರೋನ ವಾರಿಯರ್ ಆಗಿ ಕಾರ್ಮಿಕ ಇಲಾಖೆಯ ಸಿದ್ದ ಆಹಾರವನ್ನು ಕಟ್ಟಡ ಕಾರ್ಮಿಕರಿಗೆ ಒದಗಿಸುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದರು. ಕಾರ್ಮಿಕ ಇಲಾಖೆಯು ನೀಡಿದ್ದ ಫುಡ್ ಕಿಟ್ಗಳನ್ನು ಸಾವಿರಾರು ಕಟ್ಟಡ ಕಾರ್ಮಿಕರಿಗೆ ವಿತರಿಸಲು ಶ್ರಮಿಸಿದ್ದರು. ಹಲವು ಯುವಕರಿಗೆ ಸ್ಪೂರ್ತಿಯಾಗಿದ್ದರು. ಅವರು ಇದ್ದಕ್ಕಿದ್ದಂತೆ ನಿಧನರಾದದ್ದು ಅತ್ಯಂತ ದು:ಖಕರ ಮತ್ತು ಅವರ ಅಗಲ್ಲಿಕೆಯಿಂದ ರಾಜ್ಯದ ದುಡಿಯುವ ವರ್ಗದ ಚಳುವಳಿಗೆ ತುಂಬ ನಷ್ಟವಾಗಿದೆ ಎಂದು ಸಿಪಿಐ(ಎಂ) ಕಂಬನಿ ಮಿಡಿದಿದೆ.

ಸಮ ಸಮಾಜದ ಕನಸುಗಾರ, ಛಲಗಾರ

'ಕಾಮ್ರೇಡ್! ನಾನೊಬ್ಬ ಮಾರ್ಕ್ಸ್ ವಾದಿ ಹಾಗೂ ಒಬ್ಬ ವಿಜ್ಞಾನ ಚಳವಳಿಯ ಕಾರ್ಯಕರ್ತ ನನ್ನಂತ ಒಬ್ಬ ಸಾಮಾಜಿಕ ಕಾರ್ಯಕರ್ತ ಈ ಕೊವೀಡ್ ನಂತಹ ಸಮಯದಲ್ಲಿ ಜನರಿಗಾಗಿ ಕೆಲಸ ಮಾಡುತ್ತಾ ಸಾವನಪ್ಪುವುದರಲ್ಲಿ ತುಂಬಾ ಸಂತೋಷಪಡುತ್ತೇನೆ. ಸಾವಿಗಾಗಿ ಹೆದರುವಂತಹದ್ದು ಏನಿದೆ?'

ಇಂದು ಸ್ವತಃ ಸಾವನ್ನು ಸಂತೊಷದಿಂದಲೇ ಸ್ವೀಕರಿಸಿದ ಕಾಮ್ರೇಡ್ ಪುರುಷೋತ್ತಮ ಕಲಾಲಬಂಡಿಯ ನೇರ ಹಾಗೂ ಸಮಕಾಲೀನ ಜಗತ್ತಿನಲ್ಲಿಯೇ ವಿರಳಾತಿ ವಿರಳ ಎನಿಸುವ ನುಡಿ.

ಹೌದು ಅವರಿಗೆ ಹುಟ್ಟು ಮತ್ತು ಸಾವಿನ ಕುರಿತಾಗಿ ಸ್ಪಷ್ಟ ತಿಳುವಳಿಕೆ ಇತ್ತು. ಅವರಿಗೆ ನಾಳೆ ಬಗೆಗಿನ ನಂಬಿಕೆಗಿಂತ ಇವತ್ತು ಏನು ಮಾಡುತ್ತೇವೆ ಮತ್ತು ಮಾಡಬೇಕು ಎನ್ನುವುದರ ಮೇಲೆಯೇ ಅಪಾರವಾದ ನಂಬಿಕೆ. ಹಾಗಾಗಿ ನನಗೆ ನಾಳೆ ಸಿಗುತ್ತವೋ ಇಲ್ಲವೋ ನಾಳೆ ಎನ್ನುವುದು ಭವಿಷ್ಯ ಇವತ್ತು ಮತ್ತು ಈಗ ನಾವು ಮಾಡುವುದಷ್ಟೇ ವಾಸ್ತವ ಎನ್ನುತ್ತಲೇ ಯಾವ ಬಡಜನರಲ್ಲಿ ಅಕ್ಷರ, ಅರಿವು, ವಿಜ್ಞಾನ, ವೈಜ್ಞಾನಿಕ ವಿಚಾರಧಾರೆ ಬೆಳೆಸಬೇಕೆಂದು ಹಗಲು ರಾತ್ರಿಗಳನ್ನು ಒಂದಾಗಿಸಿ ಜನರ ನಡುವೆಯೇ ಅವಿರತವಾಗಿ ಮತ್ತು ಅವಿಶ್ರಾಂತ ಕೆಲಸ ಮಾಡುತ್ತಲೇ ನಿರ್ಗಮಿಸಿದ ಅಪರೂಪದ ಸಂಗಾತಿ ಪುರುಷೋತ್ತಮ ಕಲಾಲಬಂಡಿ.

ಅವರ ಬಗ್ಗೆ ಏನು ಹೇಳುವುದು? ಕಳೆದು ಐವತ್ತಕ್ಕಿಂತ ಹೆಚ್ಚಿನ ವರ್ಷಗಳನ್ನು ಅವರು ಒಬ್ಬ ಕಮ್ಯುನಿಸ್ಟ್ ಕಾರ್ಯಕರ್ತ ಹಾಗೂ ನಾಯಕನಾಗಿ ಜನರ ನಡುವೆ ಕಳೆದಿದ್ದಾರೆ. ಆ ಬಗ್ಗೆ ಅವರನ್ನು ತೀರ ಹತ್ತಿರದಿಂದ ಬಲ್ಲ ಅವರೊಂದಿಗೆ ಒಡನಾಡಿದ ಅನೇಕ ಸಾಂಸ್ಕೃತಿಕ ಹಾಗೂ ವಿಜ್ಞಾನ ಮತ್ತು ಜನಪರ ಚಳವಳಿಗಳ ಹಿರಿಯ ಗಣ್ಯರು ಈಗಾಗಲೇ ಸರಣಿ ರೂಪದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಬರೆದು ತಮ್ಮ ನುಡಿ ನಮನ ಸಲ್ಲಿಸಿದ್ದಾರೆ. ಅವರ ಬದುಕೊಂದು ತೆರೆದ ಪುಟ.

ನನಗಾದರೂ ಮುವತ್ತು ವರ್ಷಗಳಿಂದ ಅವರ ಹೆಸರು ಚಿರಪರಿಚಯವಾಗಿತ್ತು. ಆದರೆ ಅವರೊಂದಿಗೆ ನೇರ ಸಂಪರ್ಕವಿರಲಿಲ್ಲ. ಆದರೆ ಕಳೆದ ಒಂದು ವರ್ಷದಿಂದ ಬೆಂಗಳೂರಿಲ್ಲಿರುವ ವಿಶೇಷವಾಗಿ ಹೈದರಾಬಾದ್ ಕರ್ನಾಟಕದ ಕಲುಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮೊದಲಾದ ಜಿಲ್ಲೆಗಳಿಂದ ಕೂಲಿಗಾಗಿ ವಲಸೆ ಬಂದು ನಾಯಂಡಳ್ಳಿ, ನಾಗರಬಾವಿ, ಜ್ಞಾನಭಾರತಿ, ಕೆಂಗೇರಿ, ಮೊದಲಾದ ಪ್ರದೇಶಗಳಲ್ಲಿ ವಾಸವಿರುವ ಅಸಂಖ್ಯಾತ ಬಡಜನರು, ಅವರ ಕುಟುಂಬ ಹಾಗೂ ವಿಶೇಷವಾಗಿ ಅವರ ಮಕ್ಕಳ ನಡುವೆ ಅವರು ಪ್ರತಿದಿನ ಕೆಲ ಕಾರ್ಯಕರ್ತರನ್ನು ಜೊತೆಗೂಡಿಸಿಕೊಂಡು ಅವರು ವಾಸಿಸುವ ಶೆಡ್‌ಗಳ ಮುಂದೆಯೇ ನಡೆಸುತ್ತಿದ್ದ ಅರಿವಿನ ಚಟುವಟಿಕೆಗಳಂತೂ ಎಲ್ಲರ ಗಮನ ಸೆಳೆದಂತೆ ನನ್ನನ್ನೂ ಸೆಳೆದವು.

ಇದೇ ಸಂಧರ್ಭದಲ್ಲಿ ಜಾಗತಿಕ ಮಟ್ಟದಲ್ಲಿ ದಾಳಿ ಇಟ್ಟ ಕೊವೀಡ್ ವೈರಸ್ ಮತ್ತು ಇದರಿಂದ ಕೆಲಸ ವಿಲ್ಲದೆ ಕಂಗಾಲಾದ ಬಡಜನರು ಅದರಲ್ಲೂ ವಲಸೆ ಕಾರ್ಮಿಕರ ಪರಿಸ್ಥಿತಿಯಂತೂ ಕಲಾಲಬಂಡಿಯಂತಹ ಎಪ್ಪತ್ತು ವರ್ಷದ ಮನುಷ್ಯನ ನಿದ್ದೆಗೆಡಿಸಿತು. ಅದರಲ್ಲೂ ನಾನೊಬ್ಬ ಮಾರ್ಕ್ಸವಾದಿಯಾಗಿ ,ವಿಜ್ಞಾನ ಚಳವಳಿಯ ಕಾರ್ಯಕರ್ತನಾಗಿ ಈ ಸಮಯದಲ್ಲಿ ಸುಮ್ಮನೆ ಕುಳಿತುಕೊಳ್ಳುವುದು ಅದೊಂದು ನನಗೆ ನಾನೇ ಮಾಡಿಕೊಳ್ಳುವ ಅವಮಾನವೇ ಸರಿ ಎಂದು ಭಾವಿಸಿಕೊಂಡು ಹೆಗಲಿಗೆ ಬ್ಯಾಗ್ ಹೇರಿಸಿಕೊಂಡು ಬೀದಿಗೆ ಇಳಿದೇ ಬಿಟ್ಟರು.! ಅವರ ಆ ಉತ್ಸಾಹಕ್ಕೆ ಮತ್ತೆ ನೀರು ಎರೆದಿದ್ದು ಸಿಐಟಿಯು ರಾಜ್ಯ ಸಮಿತಿ ಇತರೆ ಕಾರ್ಮಿಕ ಸಂಘಟನೆಗಳೊಂದಿಗೆ ಮತ್ತು ಕಾರ್ಮಿಕ ಇಲಾಖೆ ಮೂಲಕ ಜಾರಿಗೊಳಿಸಿದ "ಕೊವೀಡ್ ವಾರಿಯರ್" ಎನ್ನುವ ಒಂದು ಪರವಾನಗಿ ಕಾರ್ಡು!

ಅಷ್ಟು ಸಿಕ್ಕಿದ್ದೆ ತಡ ಅಕ್ಷರಶಃ ಮನೆಯನ್ನೇ ಮರೆತರು. ಪುರುಷೋತ್ತಮ್ ಕಲಾಲಬಂಡಿ. ಕೊವೀಡ್ ವಾರಿಯರ್ ಎನ್ನುವ ಬ್ಯಾಡ್ಜ್ ಅನ್ನು ಒಲಂಪಿಕ್ಸ್ ನಲ್ಲಿ ಗೆದ್ದ ಚಿನ್ನದ ಮೆಡಲ್ ಎನ್ನುವಂತೆ ಸದಾ ಕೊರಳಿಗೆ ಹಾಕಿಕೊಂಡೇ ಹಗಲು ರಾತ್ರಿಗಳನ್ನೆನ್ನದೆ ಹಲವಾರು ವಲಸೆ ಕಾರ್ಮಿಕರು ವಾಸಿಸುವ ಪ್ರದೇಶಗಳಲ್ಲಿ ಅವರಿವರ ಕೈಕಾಲುಗಳ ಹಿಡಿದು, ಕೆಲವರನ್ನು ಮನವೂಲಿಸಿ ಜೊತೆಗೆ ಕಾರ್ಮಿಕ ಇಲಾಖೆಯಿಂದ ದೊರೆತ ಸಿದ್ದ ಆಹಾರ ಪಟ್ಟಣ, ನಂತರ ರೇಷನ್ ಕಿಟ್ ಗಳನ್ನು ಬಡಜನರ ಗುಡಿಸಲುಗಳಿಗೆ ತಲುಪಿಸಿ ಕೊವೀಡ್ ಎನ್ನುವ ವೈರಸ್ ನಿಂದ ಆರಿಹೋಗಿದ್ದ ಸಾವಿರಾರು ಕುಟುಂಬಗಳ ಬದುಕಿನಲ್ಲಿ ಬೆಳಕನ್ನು ಹೊತ್ತಿಸಿದರು.

ಲಾಕ್ ಡೌನ್ ಅವಧಿಮುಗಿದು ಪರಿಹಾರ ಸಾಮಾಗ್ರಿಗಳನ್ನು ನೀಡುವ ಕೆಲಸ ನಿಲ್ಲುತ್ತಿದ್ದಂತೆ, ಬಹುಪಾಲು ಕಟ್ಟಡ ನಿರ್ಮಾಣ ಕಾರ್ಮಿಕರಾಗಿಯೇ ಬೆಂಗಳೂರಿಗೆ ಬಂದು ಕಂಗಾಲಾದ ಜನರಿಗೆ ಕೊವೀಡ್ 5000 ಪರಿಹಾರ, ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಗೆ ಸದಸ್ಯರನ್ನಾಗಿಸುವುದು ಅದಕ್ಕಾಗಿ ಆ ಬಡಜನರಲ್ಲಿ ಅರಿವು ಮೂಡಿಸುವ ಕೆಲಸದಲ್ಲಿ ಸಂಪೂರ್ಣವಾಗಿ ಗಮನ ಕೇಂದ್ರೀಕರಿಸಿದರು. ಜೊತೆ ಜೊತೆಗೆ ಅವರಲ್ಲಿ ಮೌಢ್ಯದ ವಿರುದ್ದ ಮತ್ತು ವೈಜ್ಞಾನಿಕ ತಿಳುವಳಿಕೆ ಮೂಡಿಸುತ್ತಲೇ ಮತ್ತು ಅವರ ಮಕ್ಕಳಿಗೆ ಶಿಕ್ಷಣದ ಅನಿವಾರ್ಯತೆ ಬಗ್ಗೆ ಜಾಗೃತಿ ಮೂಡಿಸುವ ನಿರಂತರ ಮತ್ತು ಪ್ರತಿ ನಿತ್ಯ ಎಂಬಂತೆ ನಡೆಸುತ್ತಲೇ ಬಂದರು. ಅವರ ಆ ನಿರಂತರವಾದ ಕೆಲಸದಿಂದಾಗಿಯೇ ಬೆಂಗಳೂರು ದಕ್ಷಿಣ ಜಿಲ್ಲೆಯ ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆ ಕೂಡ ಆದರು. ಆ ಬಳಿಕವಂತೂ ಅವರ ಕ್ರಿಯಾಶೀಲತೆ ಮತಷ್ಟು ಹೆಚ್ಚಾಯಿತು.

ನಿನ್ನೆ ದಾಬೋಲ್ಕರ್ ಹತ್ಯೆಯಾದ ದಿನ ಇಡೀ ದೇಶದ ವಿಜ್ಞಾನ ಕಾರ್ಯಕರ್ತರು ವೈಜ್ಞಾನಿಕ ಮನೋವೃತ್ತಿ ದಿನ ಆಚರಣೆ ಮಾಡಿದರು. ಬೆಂಗಳೂರಿನ ಬನಶಂಕರಿ ಯಲ್ಲಿರುವ ಕರಾವಿಪ ಕಚೇರಿಯಲ್ಲಿ ವಿಜ್ಞಾನ ಚಳವಳಿಯ ಹತ್ತಾರು ಗೆಳೆಯರು ಸೇರಿದ್ದರು. ಸ್ವತಃ ಬೆಂಗಳೂರು ಸೈನ್ಸ್ ಕಲೆಕ್ಟಿವ್ ಕಾರ್ಯದರ್ಶಿಯಾದ ಪುರುಷೋತ್ತಮ್ ಖಂಡಿತ ಅಲ್ಲಿರಬೇಕಿತ್ತು!

ಏನೇ ಆಗಲಿ, ನೀವು ಇಷ್ಟೊಂದು ಅವಸರ ಮಾಡಬಾರದಿತ್ತು, ಸಂಗಾತಿ.

ನಿಮ್ಮ ಜೊತೆ ಮಾತನಾಡುವುದು ಬಹಳವಿತ್ತು. ಹೋಗಿ ಬನ್ನಿ ನಿಮ್ಮ ಕೆಲಸ ನಾವು ಮುಂದುವರೆಸುತ್ತೇವೆ.

ಕೆ.ಮಹಾಂತೇಶ

ಪಾರ್ಟನರ್ ಗೆ ವಿದಾಯ

ನಾವಿಬ್ಬರೂ ಬಿ.ಎಸ್ಸಿ ಯಲ್ಲಿ ಕ್ಲಾಸ್‌ಮೇಟ್‌ಗಳಾಗಿದ್ದವರು. ರೂಮ್‌ಮೇಟ್‌ಗಳಾಗಿ ರಾಯಚೂರಿನ ಕನ್ನಿಕಾ ಪರಮೇಶ್ವರಿ

ಹಾಸ್ಟೆಲಿನಲ್ಲಿ ನಮ್ಮ ಗೆಳೆತನ ಪ್ರಾರಂಭವಾಯಿತು. ಮುಂದೆ ಬಡತನದ ವಿರುದ್ಧ ಹೋರಾಟ ಮಾಡಲು, ಐ.ಎ.ಎಸ್. ಮಾಡಿ

ಜಿಲ್ಲಾಧಿಕಾರಿ ಆಗಬೇಕೆಂದು ಬಯಸಿ ಹುಬ್ಬಳ್ಳಿಗೆ ಹೋದೆವು. ಲಾ ಕಾಲೇಜಿಗೆ ದಾಖಲಾಗಿ ವಕಾಲತ್ತು ಮುಗಿಸುವಷ್ಟರಲ್ಲಿ

ವಿ.ಎನ್.ಹಳಕಟ್ಟಿಯವರ ಸಂಪರ್ಕವೇರ್ಪಟ್ಟು ವಿದ್ಯಾರ್ಥಿ ಚಳುವಳಿಯಲ್ಲಿ ಧುಮುಕಿದೆವು. .. ಎಸ್.ಎಫ್.ಐ. ಸಂಘಟನೆಯನ್ನು ರಾಯಚೂರಿನಲ್ಲಿ ಬಲಿಷ್ಠ ಚಳುವಳಿಯನ್ನಾಗಿಸಿದ್ದೆವು.

ರಾಜ್ಯದಲ್ಲಿ ಡಿ.ವೈ.ಎಫ್.ಐ. ಕ್ಕಿಂತ ಮುಂಚೆ ಪ್ರಗತಿಪರ ಯುವ ಫೆಡರೇಶನ್ನಿನ ಮೊದಲ ಸಮಾವೇಶವನ್ನು ಹಟ್ಟಿ

ಚಿನ್ನದ ಗಣಿಯಲ್ಲಿ ನಡೆಸಲಾಗಿತ್ತು. ಪುರುಷೋತ್ತಮ ಜವಾಬ್ದಾರಿ ಹೊತ್ತಿದ್ದರು. ನರಗುಂದ ರೈತರ ಬಂಡಾಯದ ಸಮಯಕ್ಕೆ

ನರಗುಂದಕ್ಕೆ ಭೇಟಿ ನೀಡಿ ಬಂದ ಮೇಲೆ ನಾನು ರೈತರ ಮಧ್ಯೆ ಕೆಲಸ ಮಾಡಲು ತೀರ್ಮಾನಿಸಿ ಪ್ರಾಂತ ರೈತ ಸಂಘ ಪ್ರಾರಂಭಿಸಿದೆ. ಆಗ ಟ್ರೇಡ್ ಯೂನಿಯನ್‌ನ ಜವಾಬ್ದಾರಿಯನ್ನು ಪುರುಷೋತ್ತಮರು ನಿರ್ವಹಿಸಿದರು.

1978ರಲ್ಲಿ ಸಿ.ಪಿ.ಐ.(ಎಂ) ಘಟಕ ಅಸ್ತಿತ್ವಕ್ಕೆ ಬಂದಿತ್ತು. ನಾನು ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದೆ. 1988ರಲ್ಲಿ ನಾನು

ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಹೊಂದಿ ರಾಜ್ಯ ಕೇಂದ್ರಕ್ಕೆ ಬರಬೇಕಾಯಿತು. ಅವರು ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ ಜವಾಬ್ದಾರಿ ಹೊತ್ತುಕೊಂಡರು.

ಹೀಗೆ ನಿರಂತರವಾಗಿ ನಾವಿಬ್ಬರೂ ಪರಸ್ಪರ ಪಾರ್ಟನರ್ ಆಗಿದ್ದೆವು ಮತ್ತು ಹಾಗೆ ಸಂಬೋಧಿಸುತ್ತಿದ್ದೆವು. ಅದು ಎಷ್ಟು ಅತಿಯಾಗಿತ್ತೆಂದರೆ ಅವರ ಮದುವೆಯಲ್ಲಿ ನನ್ನ ಪಾರ್ಟನರ್‌ಗೆ ಇನ್ನೊಬ್ಬ ಲೈಫ್ ಪಾರ್ಟನರ್ ಶ್ಯಾಮಲಾರವರು ಬಂದಿದ್ದಾರೆಂದು ಮಾತನಾಡಿದ್ದೆ.

ಪುರುಷೋತ್ತಮ ಒಬ್ಬ ಮಾಸ್ ಲೀಡರ್ ಆಗಿದ್ದರು. ಜನರ ಮಧ್ಯೆ ಬೆರೆಯುವುದು ಅವರಿಗೆ ನೀರು ಕುಡಿದಷ್ಟು ಸುಲಭವಾಗಿತ್ತು.

ದ್ವಂದ್ವವೇನೆಂದರೆ ತುರ್ತುಪರಿಸ್ಥಿತಿಯಲ್ಲಿ ನಾವಿಬ್ಬರೂ ಅದರ ವಿರುದ್ಧ ಹೋರಾಟದಲ್ಲಿ ಸಾಮಾಜಿಕ ಜೀವನಕ್ಕೆ ಕಾಲಿಟ್ಟವರು.

ಅಂಥದ್ದೇ ಪರಿಸ್ಥಿತಿಯಲ್ಲಿ ಇಂದು ಪುರುಷೋತ್ತಮ ಇಹಲೋಕ ತ್ಯಜಿಸಿದ್ದಾರೆ.

ಸಂಗಾತಿ ಪುರುಷೋತ್ತಮರಿಗೆ ಕೆಂಪು ವಂದನೆಗಳು

ಚಂದ್ರಶೇಖರ ಬಾಳೆ

ಸಂಪಾದಕರು, ಕೃಷಿಭಾರತ ಮಾಸಪತ್ರಿಕೆ

ಬಗರ್ ಹುಕುಂ ಸಾಗುವಳಿದಾರರ ಒಕ್ಕಲೆಬ್ಬಿಸುವಿಕೆ ಹಾಗೂ ಕಾಳಸಂತೆಯಲ್ಲಿ ರಾಸಾಯನಿಕ ಗೊಬ್ಬರಗಳ ಮಾರಾಟ ತಡೆಯಲು ಮತ್ತು ಅತೀವೃಷ್ಠಿ ಪರಿಹಾರ ಘೋಷಿಸಲು ಒತ್ತಾಯ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

1) ಫಾರಂ. 57 ಸಲ್ಲಿಸಿದ ಬಡ ಬಗರ್ ಹುಕುಂ ಸಾಗುವಳಿದಾರರ ಒಕ್ಕಲೆಬ್ಬಿಸುವಿಕೆಯನ್ನು ತಡೆಯಿರಿ:

ರಾಜ್ಯದ ಲಕ್ಷಾಂತರ ಬಗರ್ ಹುಕುಂ ಸಾಗುವಳಿದಾರರು ಹಿಂದಿನ ಸರಕಾರದ ನಿರ್ಣಯದಂತೆ ಫಾರಂ ನಂ. 57 ನ್ನು ಭರ್ತಿ ಮಾಡಿ ಸಾಗುವಳಿಯ ಹಕ್ಕಿಗಾಗಿ ಅರ್ಜಿ ಸಲ್ಲಿಸಿರುವುದು ಸರಿಯಷ್ಟೇ! ತಮ್ಮ ಸರಕಾರದ ಮೇಲೆ ಸದರಿ ಸಾಗುವಳಿದಾರರ ಅರ್ಜಿಗಳನ್ನು ಪರಿಶೀಲಿಸಿ, ಹಕ್ಕುಪತ್ರ ನೀಡುವ ಅಥವಾ ಅರ್ಜಿಗಳನ್ನು ವಿಲೇ ಮಾಡುವ ಹೊಣೆಗಾರಿಕೆ ಇದೆ. ಆದರೇ, ತಮ್ಮ ಸರಕಾರ ರಾಜ್ಯದಾದ್ಯಂತ ಅರ್ಜಿ ಸಲ್ಲಿಸಿದ ಈ ಬಡ ಸಾಗುವಳಿದಾರರ ಅರ್ಜಿಗಳನ್ನು ವಿಲೇ ಮಾಡಲು ಯಾವುದೇ ಕ್ರಮ ಕೈಗೊಳ್ಳದಿರುವುದು ಖೇದಕರವಾಗಿದೆ. ಪರಿಣಾಮವಾಗಿ ಅರ್ಜಿಗಳು ಪೆಂಡಿಂಗ್ ಅಥವಾ ಕಾಯ್ದಿರಿಸಲ್ಪಟ್ಟಿವೆ.

ಕೆಳಗಡೆ, ತಮ್ಮ ಸರಕಾರದ ತಹಸಿಲ್ದಾರರುಗಳು, ಸರಕಾರದ 2010 ರ ಸುತ್ತೋಲೆ KPLC L no/ 120/09–10 ನ್ನು ತೋರಿಸಿ ಬಡ ರೈತರು– ಕೂಲಿಕಾರರುಗಳಿಗೆ ನೋಟೀಸ್ ನೀಡಿ ಒಕ್ಕಲೆಬ್ಬಿಸಲು ಕ್ರಮ ವಹಿಸುತ್ತಿದ್ದಾರೆ. ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಇದೊಂದು ಅಕ್ರಮ ನಡೆಯಾಗಿದೆ.

ಆದ್ದರಿಂದ ಸದರಿ ಸರಕಾರದ ಅಧಿಕಾರಿಗಳಿಂದ ಬಡರೈತರಿಗಾಗುವ ತೊಂದರೆ ಹಾಗೂ ಕಿರಿಕಿರಿ ಗಳನ್ನು ತಡೆಯಲು, ಅಗತ್ಯ ಸೂಚನೆ ಹಾಗೂ ನಿರ್ಧೇಶನಗಳನ್ನು ನೀಡಬೇಕು ಮತ್ತು ಫಾರಂ.– 57 ಅರ್ಜಿಗಳನ್ನು ವಿಲೇ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸುತ್ತದೆ.

ಕೆರ್ಗಾಲ್: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕೂಲಿಕಾರರ ಸಮಾವೇಶ



ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ (AIAWU) ನೇತೃತ್ವದಲ್ಲಿ ಕೆರ್ಗಾಲ್ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೃಷಿಕೂಲಿಕಾರರ ಬೃಹತ್ ಸಮಾವೇಶವು 14 ಆಗಸ್ಟ್ 2020 ರಂದು ನಾಯ್ಕನ ಕಟ್ಟೆ ಮಹಾಗಣಪತಿ ದೇವಸ್ಥಾನದ ಬಳಿ ಯಶಸ್ವಿಯಾಗಿ ಜರುಗಿತು. ಸಿಐಟಿಯು ಬೈಂದೂರ ತಾಲೂಕು ಸಂಚಾಲಕ ಉದಯ ಗಾಣಿಗ ಮೊಗೇರಿ ಕೂಲಿಕಾರರ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ, ಕೊರೊನ ಸೋಂಕಿನ ಸಂಕಷ್ಟದಲ್ಲಿರುವ ಕೂಲಿಕಾರರಿಗೆ ಉದ್ಯೋಗ ಇಲ್ಲದೆ ಕುಟುಂಬ ಜೀವನ ನಿರ್ವಹಣೆಗೆ ಕಷ್ಟವಾಗಿರುವ ಈ ಸಂದರ್ಭದಲ್ಲಿ ಪ್ರತೀ ಕುಟುಂಬಕ್ಕೆ ಮಾಸಿಕ ರೂಪಾಯಿ 7500 ರಂತೆ ಮೂರು ತಿಂಗಳವರೆಗೆ ನಗದು ಪರಿಹಾರ ಕೊಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕೆರ್ಗಾಲ್ ಗ್ರಾಮದಲ್ಲಿ ನಾಲ್ಕೂ ಕಾಯಕ ಸಂಘದ ಮಹಿಳಾ ಕೃಷಿಕೂಲಿಕಾರರಿಗೆ ನರೇಗಾ ಯೋಜನೆಯಡಿ ವಾರ್ಷಿಕ 200 ದಿನಗಳ ಕೆಲಸ, ದಿನ ಒಂದರ ರೂಪಾಯಿ 600 ಕೂಲಿ ವೇತನ ಕೊಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಲು ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಲಾಯಿತು.

ಪರೀಕ್ಷೆಗಳನ್ನು ರದ್ದುಗೊಳಿಸವಂತೆ ಭಾರತ ವಿಧ್ಯಾರ್ಥಿ ಫೆಡರೇಶನ್ ನಿಂದ ಪ್ರತಿಭಟನೆ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ರದ್ದುಗೊಳಿಸವಂತೆ ಒತ್ತಾಯಿಸಿ ಶುಕ್ರವಾರ ಭಾರತ ವಿಧ್ಯಾರ್ಥಿ ಫೆಡರೇಶನ್ ಎಸ್ ಎಫ್ ಐ ನಿಂದ ನಗರದ ಹೊರವಲಯದ ಜಿಲ್ಲಾಧಿಕಾರಿ ಕಛೇರಿಯ ಮುಂದೆ ಪ್ರತಿಭಟನೆ ನಡೆಸಿದರು.

ಈ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಕೆ. ವಾಸುದೇವರೆಡ್ಡಿ ಕೊವಿಡ್ –19 ಸಂಧರ್ಭದಲ್ಲಿ ದಿನೇದಿನೇ ಹರಡುತ್ತಿರುವ ಕಾಲದಲ್ಲಿ ಕೆಎಸ್‌ಎಲ್‌ಯು UGC ನಿರ್ದೇಶನಗಳನ್ನು ಧಿಕ್ಕರಿಸಿ ಕಾನೂನು ವಿಧ್ಯಾರ್ಥಿಗಳ ಪ್ರಥಮ, ದ್ವಿತೀಯ ವರ್ಷದ ಐಐಃ ವಿದ್ಯಾರ್ಥಿಗಳ ಪರಿಕ್ಷೆಗಳನ್ನು ನಡೆಸಲು ಮುಂದಾಗಿದ್ದಾರೆ ಇಂತಹ ಕ್ರಮವನ್ನು ಎಸ್‌ಎಫ್‌ಐ ಜಿಲ್ಲಾ ಸಮಿತಿ ತೀವ್ರವಾಗಿ ವಿರೋಧಿಸುತ್ತದೆ ಯಾವುದೇ ಕಾರಣಕ್ಕೂ ಪರೀಕ್ಷೆಗಳನ್ನು ನಡೆಸಬಾರದು ಜೊತೆಗೆ ವಿಧ್ಯಾರ್ಥಿಗಳಿಗೆ ಹೊರಡಿಸಿರುವ ಪರೀಕ್ಷಾ ಶುಲ್ಕ ಆದೇಶವನ್ನು ಈ ಕೂಡಲೇ ವಾಪಸ್ ಪಡೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಕೋವಿಡ್ ಸಂದರ್ಭದ ಲಾಕ್ ಡೌನ್ ಸಮಯದಲ್ಲಿ ತೀವ್ರ ಆರ್ಥಿಕ ಸಂಕಷ್ಟದಿಂದ ನರಳುತ್ತಿರುವ ವಿದ್ಯಾರ್ಥಿ, ಪೋಷಕರನ್ನು ಬಲವಂತವಾಗಿ ದುಬಾರಿ ಪರೀಕ್ಷಾ ಶುಲ್ಕ ಪಾವತಿಸಲು ಅವಧಿ ನಿಗದಿ ಮಾಡಿ ಇಕ್ಕಟ್ಟಿಗೆ ಸಿಲುಕಿಸಿರುವ ವಿಧ್ಯಾರ್ಥಿಗಳಿಗೆ ಈ ಆದೇಶವು ಮತ್ತಷ್ಟು ಬರೆ ತಂದಂತೆ ಆಗಿದೆ ಈ ಆದೇಶವನ್ನು ವಾಪಸ್ ಪಡೆದುಕೊಳ್ಳುವುದು ಸೂಕ್ತವಾಗಿದೆ ಎಂದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ LLB ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಪ್ರಥಮ ಮೌಲ್ಯ ಮಾಪನದಲ್ಲೇ ಉತ್ತಮ ಫಲಿತಾಂಶಗಳು ನೀಡದೆ ಕಡಿಮೆ ಅಂಕಗಳ ಅಂತರದಲ್ಲಿ ವಿಷಯಗಳನ್ನು ಅನುತ್ತೀರ್ಣಗೊಳಿಸಿ ನಂತರ ಮರುಮೌಲ್ಯಮಾಪನ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ ಮೇಲೆ ದುಬಾರಿ ಶುಲ್ಕಗಳ ಹೊರೆ ವಿಧಿಸಿ ಕೋಟ್ಯಂತರ ರೂಪಾಯಿ ಹಣ ದರೋಡೆ ಮಾಡುತ್ತಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಿದ್ಯಾರ್ಥಿ ವಿರೋಧಿ ನೀತಿಯಾಗಿದೆ ಎಂದರು.

ರಾಜ್ಯದಲ್ಲಿ ಕಾನೂನು ವಿಧ್ಯಾರ್ಥಿಗಳ ಬಾಕಿವಿರುವ ವಿಧ್ಯಾರ್ಥಿ ವೇತನಗಳನ್ನು ಬಿಡುಗಡೆ ಮಾಡಲು ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಬೇಕು ವಿಧ್ಯಾರ್ಥಿಗಳ ಬಳಿ ಮರು ಮೌಲ್ಯ ಮಾಪನ ಹೆಸರಿನಲ್ಲಿ ಪಾಸಾದವರು ಕಟ್ಟಿರುವ ಪೂರ್ವ ಶುಲ್ಕವನ್ನು ಈ ಕೂಡಲೇ ವಾಪಸು ನೀಡಬೇಕು ಎಂದು ಒತ್ತಾಯಿಸಿದರು..

ಇದೇ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಾಸುದೇವರೆಡ್ಡಿ, ಜಿಲ್ಲಾ ಅಧ್ಯಕ್ಷ ಶಿವಪ್ಪ, ತಾಲ್ಲೂಕು ಅಧ್ಯಕ್ಷ ಜೆ.ಶ್ರೀಕಾಂತ್ ತಾಲೂಕು ಕಾರ್ಯದರ್ಶಿ ಅಂಕಿತಾ, ಜಿಲ್ಲಾ ಸಹ ಕಾರ್ಯದರ್ಶಿ ಆನಂದ್ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಆರ್.ವಿಜಯಕುಮಾರಿ ಕಾನೂನು ವಿಧ್ಯಾರ್ಥಿಗಳಾದ ವೀಣಾ, ಉಮಾಗೌಡ, ಮುರಳಿ, ಶ್ರೀಹರಿ ಮುಂತಾದವರಿದ್ದರು



ಸರಕಾರದ ಆರೋಗ್ಯ ಇಲಾಖೆಯ ವೈಫಲ್ಯತೆ ಮೈಸೂರು ವೈದ್ಯಾಧಿಕಾರಿಯನ್ನು ಬಲಿ ಪಡೆದಿದೆ

ಕೊರೊನಾ ಸೋಂಕಿತರಿಗೆ ಗುಣಮಟ್ಟದ ಚಿಕಿತ್ಸೆ ನೀಡುವಲ್ಲಿ ರಾಜ್ಯ ಸರಕಾರ ಸಂಪೂರ್ಣ ಎಡವಿದೆ. ರಾಜ್ಯದಲ್ಲಿ ಸರಕಾರಿ ಆಸ್ಪತ್ರೆಗಳಿಗೆ ಕೊರೊನಾ ಪ್ರಕರಣ ನಿಭಾಯಿಸಲು ವೈದ್ಯರು ಸಹಿತ ನುರಿತ ಸಿಬ್ಬಂಧಿಗಳ ವ್ಯವಸ್ಥೆ ಮಾಡದೆ ಬರೇ ಇರುವ ವೈದ್ಯರುಗಳಿಂದಲೇ ವಿಪರೀತ ಕೆಲಸಗಳನ್ನು ನಿರ್ವಹಿಸಿದ ಕಾರಣ ಒತ್ತಡಕ್ಕೆ ಸಿಲುಕಿದ ವೈದ್ಯರು ಖಿನ್ನತೆಗೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿಯ ನಿರ್ಮಾಣ ಇದು ಸರಕಾರದ ಆರೋಗ್ಯ ಇಲಾಖೆಯ ವೈಫಲ್ಯತೆ ಮೈಸೂರಿನ ತಾಲೂಕು ವೈದ್ಯಾಧಿಕಾರಿ ಡಾ ನಾಗೇಂದ್ರ ಅವರನ್ನು ಬಲಿಪಡೆದಿದೆ ಎಂದು ಡಿವೈಎಫ್‌ಐ ದ.ಕ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಇಂದು ಉರ್ವಸ್ಟೋರ್ ನಲ್ಲಿ ಡಿವೈಎಫ್‌ಐ ನೇತೃತ್ವದಲ್ಲಿ ನಡೆದ ಸರಕಾರಿ ಆಸ್ಪತ್ರೆ ಬಲಪಡಿಸಿರಿ ಖಾಸಗೀ ಆಸ್ಪತ್ರೆಗಳನ್ನು ನಿಯಂತ್ರಿಸಿರಿ ಜಿಲ್ಲೆಗೊಂದು ಸರಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಗಾಗಿ ಮತ್ತು ಎಲ್ಲ ಕೊರೊನಾ ಸೋಂಕಿತರಿಗೆ ಸಮಾನ ಗುಣಮಟ್ಟದ ಉಚಿತ ಚಿಕಿತ್ಸೆಗೆ ಒತ್ತಾಯಿಸಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು.

ಸರಕಾರ ಕೊರೊನಾ ರೋಗ ಎದುರಿಸಲು ಬೇಕಾದ ಸಲಕರಣೆಗಳ ಖರೀದಿಯಲ್ಲಿ ಭ್ರಷ್ಟಾಚಾರ ನಡೆಸಿದೆ. ಸರಕಾರದ ಆಸ್ಪತ್ರೆಗಳಿಗೆ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವ ಖಾಲಿ ಇರುವ ಹುದ್ದೆ ಗಳನ್ನು ಭರ್ತಿಗೊಳಿಸುವ ಹಾಗು ಹೆಚ್ಚುವರಿ ಸಿಬ್ಬಂಧಿಗಳನ್ನು ನೇಮಿಸುವ ಯಾವುದೇ ಕೆಲಸಗಳು ಈವರೆಗೂ ನಡೆದಿಲ್ಲ. ಸರಕಾರಿ ಆಸ್ಪತ್ರೆಗಳ ವೈಫಲ್ಯತೆ ಖಾಸಗೀ ಆಸ್ಪತ್ರೆಗಳು ಕೊರೊನಾ ಹೆಸರಲಿ ಲೂಟಿ ಮಾಡುವ ಸ್ಥಿತಿಗೆ ತಲುಪುವಂತೆ ಮಾಡಿದೆ. ಖಾಸಗೀ ಆಸ್ಪತ್ರೆಗಳು ಯಾವುದೇ ಮುಲಾಜಿಲ್ಲದೇ ಚಿಕಿತ್ಸೆ ಹೆಸರಲ್ಲಿ ರೋಗಿಗಳನ್ನು ವಂಚಿಸುವ ಪ್ರಕರಣ ದಿನ ನಿತ್ಯ ವರದಿಯಾದರೂ ಖಾಸಗೀ ಆಸ್ಪತ್ರೆಯ ವಿರುದ್ದ ಈವರೆಗೆ ಒಂದೇ ಒಂದು ಕ್ರಮಕೈಗೊಳ್ಳಲು ಸಾದ್ಯವಾಗಿಲ್ಲ. ಈಗಾಗಲೇ ಜನ ಸಾಮಾನ್ಯರು ಉದ್ಯೋಗವಿಲ್ಲದೆ, ಬಿಡಿಗಾಸು ಇಲ್ಲದೇ ಕಂಗಾಲಾಗಿದ್ದು ಒಂದೊತ್ತಿನ ಊಟಕ್ಕೆ ಪರದಾಡುವ ಸ್ಥಿತಿ ನಿರ್ಮಾಣಗೊಂಡಿದೆ. ಇನ್ನು ಆರೋಗ್ಯ ಕಾಳಜಿ ವಹಿಸೋದು ಅವರಿಂದ ಸಾದ್ಯವಾಗದ ಮಾತು. ಆರೋಗ್ಯ ಕಾಳಜಿ ವಹಿಸೋದು ಸರಕಾರದ ಕರ್ತವ್ಯ. ಸರಕಾರ ಎಲ್ಲ ಕೊರೊನಾ ಸೊಂಕಿತರಿಗೂ ಸಮಾನ ಗುಣಮಟ್ಟದ ಉಚಿತ ಚಿಕಿತ್ಸೆ ನೀಡಬೇಕೆಂದು ಒತ್ತಾಯಿಸಿ ಡಿವೈಎಫ್‌ಐ ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಂಡಿದೆ.



ಈ ವೇಳೆ ಡಿವೈಎಫ್‌ಐ ಉರ್ವಸ್ಟೋರ್ ಘಟಕದ ಅದ್ಯಕ್ಷ ಪ್ರಶಾಂತ್ ಎಂ.ಬಿ, ಮನೋಜ್ ಉರ್ವಸ್ಟೋರ್, ಕಿಶೋರ್, ನಾಗೇಂದ್ರ, ರಘುವೀರ್, ತಿಲಕ್, ತೇಜಸ್ವಿನಿ, ಹರಿಣಾಕ್ಷಿ ಮುಂತಾದವರು ಉಪಸ್ಥಿತರಿದ್ದರು.

ಸಹನೆಯಿಂದ ವರ್ತಿಸಿ, ಗಲಭೆಯ ಹಿಂದಿರುವ ಶಕ್ತಿಗಳನ್ನು ಬಯಲಿಗೆ ತನ್ನಿ: ಡಿವೈಎಫ್‌ಐ ಆಗ್ರಹ

ಸಾಮಾಜಿಕ ಜಾಲತಾಣದಲ್ಲಿ ಪೈಗಂಬರರನ್ನು ನಿಂದಿಸಲಾಗಿದೆ ಎಂಬ ಆರೋಪದ ಹಿನ್ನಲೆಯಲ್ಲಿ ಬೆಂಗಳೂರಿನ ಕೆ ಜಿ ಹಳ್ಳಿ, ಡಿ ಜೆ ಹಳ್ಳಿ ಪ್ರದೇಶದಲ್ಲಿ ನಡೆದಿರುವ ಹಿಂಸಾಚಾರ ಖಂಡನೀಯ. ಜನತೆ ಈ ಸಂದರ್ಭದಲ್ಲಿ ತಾಳ್ಮೆ ಕಳೆದು ಕೊಳ್ಳದೆ ಸಹನೆಯಿಂದ ವರ್ತಿಸಬೇಕಿದೆ. ಪ್ರಧಾನವಾಗಿ ಇಂತಹ ಆಪತ್ಕಾಲದಲ್ಲಿ ತಮ್ಮನ್ನು ಪ್ರಚೋದಿಸುವ ಶಕ್ತಿಗಳ ಕುರಿತು ಮುಸ್ಲಿಂ ಸಮುದಾಯ ಎಚ್ಚರಿಕೆಯಿಂದ ಇರಬೇಕಿದೆ. ಇಷ್ಟು ದೊಡ್ಡ ಪ್ರಮಾಣದ ಹಿಂಸಾಚಾರ ದಿಢೀರ್ ಆಗಿ ನಡೆಯುವುದರ ಹಿಂದೆ ಕಾಣದ ಕೈಗಳ ವ್ಯವಸ್ಥಿತ ಪಿತೂರಿಯ ಸಾಧ್ಯತೆಗಳು ಕಂಡು ಬರುತ್ತಿವೆ. ಜನರ ಬದುಕಿನ ಜೊತೆ ಚೆಲ್ಲಾಟವಾಡುವ ಇಂತಹ ಶಕ್ತಿಗಳನ್ನು ನ್ಯಾಯಯುತ ತನಿಖೆಯ ಮೂಲಕ ಬಯಲಿಗೆ ತರಬೇಕು ಎಂದು ಡಿವೈಎಫ್‌ಐ ಕರ್ನಾಟಕ ರಾಜ್ಯ ಸಮಿತಿ ರಾಜ್ಯ ಸರಕಾರವನ್ನು ಆಗ್ರಹಿಸಿದೆ. ಹಿಂಸಾಚಾರದಲ್ಲಿ ಆಸ್ತಿಪಾಸ್ತಿ ನಷ್ಟಗೊಂಡವರಿಗೆ, ಗೋಲಿಬಾರ್ ಗೆ ಬಲಿಯಾದವರಿಗೆ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದೆ.

ಕಾಂಗ್ರೆಸ್ ಶಾಸಕರೊಬ್ಬರ ಸಂಬಂಧಿ ಪೈಗಂಬರರನ್ನು ಅವಹೇಳನ ಮಾಡಿ ಹಾಕಿರುವ ಪೋಸ್ಟ್ ಕುರಿತು ಪೊಲೀಸರು ಕ್ಷಿಪ್ರ ಕ್ರಮಗಳನ್ನು ಕೈಗೊಳ್ಳಬೇಕಿತ್ತು. ಆದರೆ ಅದಷ್ಟನ್ನೇ ಮುಂದಿಟ್ಟು ದೊಡ್ಡ ಪ್ರಮಾಣದಲ್ಲಿ ಮುಗ್ಧ ಜನರನ್ನು ಪ್ರಚೋದಿಸಿ ಗುಂಪು ಸೇರಿಸಿರುವುದು, ಏಕಕಾಲದಲ್ಲಿ ಪೊಲೀಸ್ ಠಾಣೆ ಹಾಗೂ ಶಾಸಕರ ಮನೆ ಮೇಲೆ ದಾಳಿ ನಡೆಸಿರುವುದರ ಹಿಂದೆ ವ್ಯವಸ್ಥಿತ ಪಿತೂರಿಯ ಸಾಧ್ಯತೆ ದಟ್ಟವಾಗುತ್ತದೆ. ಅದರಲ್ಲೂ ಸಂಬಂಧಿಯ ತಪ್ಪಿಗೆ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸ ಮೂರ್ತಿಯವರ ಮನೆಗೆ ಬೆಂಕಿ ಹಚ್ಚಿರುವುದರ ಹಿಂದೆ ರಾಜಕೀಯ ತಂತ್ರಗಾರಿಕೆಯ ಅನುಮಾನ ಮೂಡಿಸುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉದ್ರಿಕ್ತ ಗುಂಪನ್ನು ಹಿಂಸೆಗಿಳಿಸುವ ಹಿಂದೆ ನಕಾರಾತ್ಮಕ ಶಕ್ತಿಗಳ ಪ್ರಬಲ ಒತ್ತಾಸೆ ಇರುವಂತಿದೆ. ಈ ಕುರಿತು ಸಮಗ್ರ ತನಿಖೆ ನಡೆದು ಅಂತಹ ಶಕ್ತಿಗಳನ್ನು ಬಯಲಿಗೆ ತರಬೇಕಿದೆ. ಇದಲ್ಲದೆ ರಾಜಧಾನಿಯ ಹೃದಯ ಭಾಗದಲ್ಲಿ ನಡೆದ ಬಹು ದೊಡ್ಡ ಹಿಂಸಾಚಾರದ ಕುರಿತು ಗುಪ್ತಚರ ವರದಿ ಸರಕಾರಕ್ಕೆ ತಲುಪದಿರುವುದು ಅನುಮಾನಕ್ಕೆ ಎಡೆ ಮಾಡಿದೆ.

ಬಲಪಂಥೀಯ ಶಕ್ತಿಗಳ ನಿರಂತರ ದಾಳಿಗಳಿಂದ ಬಸವಳಿದಿರುವ, ಅವಹೇಳನ, ನಿಂದನೆಗೆ ಗುರಿಯಾಗಿ ಮುಖ್ಯವಾಹಿನಿಯಿಂದ ಅಂಚಿಗೆ ತಳ್ಳಲ್ಪಡುತ್ತಿರುವ ಮುಸ್ಲಿಂ ಸಮುದಾಯ ಇಂತಹ ಪ್ರಚೋದಿಸುವ ಶಕ್ತಿಗಳ ಷಡ್ಯಂತ್ರಗಳ ಕುರಿತು ಅತೀವ ಜಾಗ್ರತೆ ವಹಿಸಬೇಕಿದೆ. ತಮ್ಮೊಳಗೆ ನೆಲಯೂರಲು ಯತ್ನಿಸುತ್ತಿರುವ ಮತೀಯವಾದಿ ಶಕ್ತಿಗಳನ್ನು ತಿರಸ್ಕರಿಸಿ ಜಾತ್ಯಾತೀತತೆ, ಪ್ರಜಾಪ್ರಭುತ್ವವಾದಿ ಆಶಯಗಳನ್ನು ಎತ್ತಿ ಹಿಡಿಯುವ ಮೂಲಕ ತಮ್ಮನ್ನು ಬಲಿಪಶು ಮಾಡುವ ಎಲ್ಲಾ ರೀತಿಯ ಕೋಮುವಾದವನ್ನು ಹಿಮ್ಮೆಟ್ಟಿಸಲು ಮುಂದಡಿಯಿಡಬೇಕು ಎಂದು ಡಿವೈಎಫ್‌ಐ ಕರ್ನಾಟಕ ರಾಜ್ಯ ಸಮಿತಿ ಮನವಿ ಮಾಡಿದೆ.

ಮುನೀರ್ ಕಾಟಿಪಳ್ಳ, ರಾಜ್ಯಾಧ್ಯಕ್ಷರು

---

2) ರಾಸಾಯನಿಕ ಗೊಬ್ಬರಗಳ ಕಾಳಸಂತೆ ತಡೆಯಿರಿ:

ಮುಂಗಾರು ಮಳೆಯ ಕಾರಣದಿಂದ ರಾಜ್ಯದಾದ್ಯಂತ ವ್ಯಾಪಕ ಬಿತ್ತನೆಯಲ್ಲಿ ರೈತರು ತೊಡಗಿರುವುದು ತಮಗೆ ತಿಳಿದಿದೆ. ಈ ಸಂದರ್ಭದಲ್ಲಿ ಬೀಜ ಹಾಗೂ ರಾಸಾಯನಿಕ ಗೊಬ್ಬರಗಳಿಗಾಗಿ ರೈತರು ಮಾರಾಟಗಾರ ಅಂಗಡಿಗಳ ಬಳಿ ಮುಗಿ ಬೀಳುವಂತಾಗಿದೆ. ವ್ಯಾಪಾರಿಗಳು ಸದರಿ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು, ರಾಜ್ಯದಾದ್ಯಂತ ಕೃತಕವಾದ ಅಭಾವಗಳನ್ನು ಸೃಷ್ಟಿ ಮಾಡಿ, ಒಂದಕ್ಕೆ ಎರಡಷ್ಟು ಬೆಲೆ ಏರಿಕೆ ಮಾಡಿ ಕಾಳಸಂತೆಯಲ್ಲಿ ಅಕ್ರಮ ವ್ಯವಹಾರದಲ್ಲಿ ತೊಡಗಿ, ರೈತರನ್ನು ಲೂಟಿ ಮಾಡುತ್ತಿದ್ದಾರೆ. ಈ ಕುರಿತು ರಾಜ್ಯದಾದ್ಯಂತ ರೈತರು ಪ್ರತಿಭಟಿಸಿದರೂ, ಮಾದ್ಯಮಗಳಲ್ಲಿ ಈ ಕುರಿತು ವರದಿಯಾಗುತ್ತಿದ್ದರೂ ಯಾವುದೇ ಗಂಭೀರ ಕ್ರಮ ಕೈಗೊಳ್ಳದೇ ತಮ್ಮ ಸರಕಾರ ಇನ್ನು ನಿದ್ರೆಯಲ್ಲಿರುವುದು ಖಂಡನೀಯವಾಗಿದೆ. ಜಿಲ್ಲೆಗಳ ಆಡಳಿತವಾಗಲೀ, ಸಂಬಂಧಿಸಿದ ಕೃಷಿ ಅಧಿಕಾರಿಗಳಾಗಲೀ, ತಮ್ಮ ಕರ್ತವ್ಯ ನಿರ್ವಹಿಸದೇ ರೈತರ ಲೂಟಿಗೆ ಸಹಾಯ ಮಾಡುತ್ತಿದ್ದಾರೆ. ಇದುವರೆಗೆ, ಕಾಳ ಸಂತೆಯ ದಾಸ್ತಾನುಗಳ ಮೇಲೆ ದಾಳಿ ಮಾಡಲಿಲ್ಲ ಒಬ್ಬರ ಮೇಲೂ ಕ್ರಿಮಿನಲ್ ಕೇಸು ದಾಖಲಿಸಲಿಲ್ಲ. ಇದರಿಂದ ರಾಜ್ಯದ ರೈತರ ನೂರಾರು ಕೋಟಿ ರೂಗಳ ಮೊತ್ತ ಲೂಟಿಗೊಳಗಾಗುತ್ತಿದೆ. ಇದೊಂದು ನಾಚಿಕೆಗೇಡಿನ ವಿಚಾರವಾಗಿದೆ. ತಕ್ಷಣವೇ ಸರಕಾರ ಮಧ್ಯ ಪ್ರವೇಶಿಸಿ ರೈತರ ಲೂಟಿ ತಡೆಯಲು ಅಗತ್ಯ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

3) ಅತೀವೃಷ್ಠಿ ಹಾನಿಗೆ ಪರಿಹಾರ:

ತಮಗೆ ತಿಳಿದಂತೆ ರಾಜ್ಯದಲ್ಲಿ ಕಳೆದ ಹತ್ತಾರು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಯಿಂದ ಹಾಗೂ ಅದರಿಂದುಂಟಾದ ಪ್ರವಾಹಗಳಿಂದ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ರೈತ – ಕೂಲಿಕಾರರ, ಕಸುಬುದಾರರ ಕಾರ್ಮಿಕರ ಮತ್ತು ಸಾರ್ವಜನಿಕ ಆಸ್ತಿ– ಪಾಸ್ತಿಗಳು, ಬೆಳೆಗಳಿಗೆ ಅಪಾರ ಹಾನಿ ಸಂಭವಿಸಿವೆ. ಸದರಿ ಹಾನಿಗಳನ್ನು ಕೂಡಲೇ ಗಣತಿ ಮಾಡಿ, ಲೆಕ್ಕಿಸಿ ಹಾನಿಗೊಳಗಾದ ಕುಟುಂಬಗಳಿಗೆ ಸೂಕ್ತ ಪರಿಹಾರಗಳನ್ನು ರಾಜ್ಯ ಸರಕಾರ ಘೋಷಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ (AIKS) ದ ರಾಜ್ಯ ಸಮಿತಿ ವಿನಂತಿಸುತ್ತದೆ.

ಜಿ.ಸಿ. ಬಯ್ಯಾರೆಡ್ಡಿ, ಅಧ್ಯಕ್ಷರು
ಯು. ಬಸವರಾಜ, ಪ್ರಧಾನ ಕಾರ್ಯದರ್ಶಿ (21–8–2020)

ಅತಿಥಿ ಅಂಕಣ




ಪ್ರೊ. ಟಿ.ಆರ್. ಚಂದ್ರಶೇಖರ್

ಇಂದು ಕೇಂದ್ರವು ತನ್ನ ಸಂಪನ್ಮೂಲವನ್ನು ರಾಜ್ಯದ ಜೊತೆ ಹಂಚಿಕೊಳ್ಳುವಲ್ಲಿ ಅನ್ಯಾಯ ಮತ್ತು ತಾರತಮ್ಯ ಮಾಡುತ್ತಿರುವುದರಿಂದ ರಾಜ್ಯದ ಹಣಕಾಸು ಸ್ಥಿತಿಯು ಹದಗೆಡುತ್ತಾ ನಡೆದಿದೆ. ಕೋವಿಡ್ ದುರಂತದಿಂದ ಇದು ಮತ್ತಷ್ಟು ಉಲ್ಬಣಗೊಳ್ಳುತ್ತಿದೆ.2020-21ರ ರಾಜ್ಯ ಬಜೆಟಿನಲ್ಲಿ ದಾಖಲಿಸಿರುವಂತೆ ಕೇಂದ್ರದ ತೆರಿಗೆಗಳಲ್ಲಿನ ರಾಜ್ಯದ ಪಾಲು 2019-20ರಲ್ಲಿ ರೂ. 8,887 ಕೋಟಿ ಕಡಿತವಾಗಿದೆ. 2020-21ರಲ್ಲಿನ ಕಡಿತ ರೂ. 11,215 ಕೋಟಿಯಾಗಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಕುಸಿತವಾಗಿರುವುದರಿಂದ ಅದರ ಪರಿಹಾರದಲ್ಲಿ ರೂ. 3000 ಕೋಟಿ ಕಡಿತವಾಗಿದೆ. ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳಲ್ಲಿನ ವೆಚ್ಚ ಭರಿಸುವುದರಲ್ಲಿ ಕೇಂದ್ರವು ರಾಜ್ಯ ಸರ್ಕಾರಗಳ ಪಾಲನ್ನು ಹೆಚ್ಚು ಮಾಡಿದೆ. ರಾಜ್ಯವು 2019-20ರಲ್ಲಿ ಜಲ ಪ್ರಳಯ ವಿಕೋಪದಿಂದ ಅನುಭವಿಸಿದ ಹಾನಿ ರೂ. 35,160 ಕೋಟಿ. ಇದಕ್ಕೆ ಕೇಂದ್ರವು ನೀಡಿದ ನೆರವು ರೂ. 1869 ಕೋಟಿ (ಶೇ.5.32).ರಾಜ್ಯವು 2019-20ರಲ್ಲಿ ಜಲ ಪ್ರಳಯ ವಿಕೋಪದಿಂದ ಅನುಭವಿಸಿದ ಹಾನಿ ರೂ. 35,160 ಕೋಟಿ. ಇದಕ್ಕೆ ಕೇಂದ್ರವು ನೀಡಿದ ನೆರವು ರೂ. 1869 ಕೋಟಿ (ಶೇ.5.32).

ರಾಜ್ಯದ ಹಣಕಾಸು ಸ್ಥಿತಿಗತಿ: ಕೇಂದ್ರದಿಂದ ಅನ್ಯಾಯ

ದೇಶದಲ್ಲಿ ಸಾರ್ವಜನಿಕ ಹಣಕಾಸನ್ನು ಉತ್ತಮವಾಗಿ ನಿರ್ವಹಿಸಿಕೊಂಡು ಬರುತ್ತಿರುವ ರಾಜ್ಯಗಳಲ್ಲಿ ಕರ್ನಾಟಕ ಒಂದಾಗಿದೆ. ರಾಜ್ಯವು 2004-05ರಿಂದಲೂ ರೆವಿನ್ಯೂ ಖಾತೆಯಲ್ಲಿ ಕೊರತೆಗೆ ಪ್ರತಿಯಾಗಿ ಅಧಿಕ್ಯವನ್ನು ಸಾಧಿಸಿಕೊಂಡು ಬರುತ್ತಿದೆ. ಅದರ ವಿತ್ತೀಯ ಕೊರತೆಯ ಪ್ರಮಾಣವೂ ಕೂಡ ಶಾಸನಾತ್ಮಕ ಮಿತಿಯನ್ನು ಮೀರಿಲ್ಲ. ಭಾರತದ ಜನಸಂಖ್ಯೆ ಮತ್ತು ಭೂ ವಿಸ್ತೀರ್ಣದಲ್ಲಿ ಕರ್ನಾಟಕ ಪಾಲು ಎರಡೂ ಅಂಶಗಳಲ್ಲಿ ಶೇ. 5.5. ಆದರೆ ದೇಶದ ಚಾಲ್ತಿ ಬೆಲೆಗಳ ನಿವ್ವಳ ಆಂತರಿಕ ಉತ್ಪನ್ನದಲ್ಲಿ(ರೂ.170.3 ಲಕ್ಷ ಕೋಟಿ)ರಾಜ್ಯದ ಪಾಲು 2019-20ರಲ್ಲಿ(ರೂ.13.99 ಲಕ್ಷ ಕೋಟಿ) ಶೇ. 8.2 ರಷ್ಟಿದೆ. ಕರ್ನಾಟಕದ ಆರ್ಥಿಕ ಬೆಳವಣಿಗೆಯು ದೇಶದ ಆರ್ಥಿಕ ಬೆಳವಣಿಗೆಯನ್ನು ನಿರ್ಣಯಿಸುವ ಪ್ರಮುಖ ಸಂಗತಿಯಾಗಿದೆ.

ಆದರೆ ಇಂದು ಕೇಂದ್ರವು ತನ್ನ ಸಂಪನ್ಮೂಲವನ್ನು ರಾಜ್ಯದ ಜೊತೆ ಹಂಚಿಕೊಳ್ಳುವಲ್ಲಿ ಅನ್ಯಾಯ ಮತ್ತು ತಾರತಮ್ಯ ಮಾಡುತ್ತಿರುವುದರಿಂದ ರಾಜ್ಯದ ಹಣಕಾಸು ಸ್ಥಿತಿಯು ಹದಗೆಡುತ್ತಾ ನಡೆದಿದೆ. ಕೋವಿಡ್ ದುರಂತದಿಂದ ಇದು ಮತ್ತಷ್ಟು ಉಲ್ಬಣಗೊಳ್ಳುತ್ತಿದೆ. ನಮ್ಮದು ಒಕ್ಕೂಟ ವ್ಯವಸ್ಥೆ. ಒಕ್ಕೂಟ ವ್ಯವಸ್ಥೆಯಲ್ಲಿ ಅತ್ಯಂತ ಸಮಸ್ಯಾತ್ಮಕ ಸಂಗತಿಯೆಂದರೆ ರಾಜ್ಯ-ಕೇಂದ್ರಗಳ ನಡುವಿನ ಹಣಕಾಸು ಸಂಬಂಧ. ಇಂದಿನ ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ಒಕ್ಕೂಟ ವಿರೋಧಿ ನೀತಿಗಳಿಂದಾಗಿ ರಾಜ್ಯ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದೆ. ಕೇಂದ್ರವು ಸಂವಿಧಾನಾತ್ಮಕ ಒಕ್ಕೂಟ ತತ್ವಕ್ಕೆ ವ್ಯವಸ್ಥಿತವಾಗಿ ಎಳ್ಳುನೀರು ಬಿಡುತ್ತಿದೆ. ನಮ್ಮ ಸಂವಿಧಾನದ ಮೂಲತತ್ವಗಳಲ್ಲಿ ಒಂದಾಗಿರುವ ಒಕ್ಕೂಟ ನಿಯಮಕ್ಕೆ ಇದು ಯಾವ ಗೌರವವನ್ನು ನೀಡುತ್ತಿಲ್ಲ. ಶಿಕ್ಷಣ, ಆರೋಗ್ಯ, ಕೃಷಿ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಅದು ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸಿ ಎಲ್ಲ ಅಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಳ್ಳುತ್ತಿದೆ. ಸಂವಿಧಾನದಲ್ಲಿ ರಾಜ್ಯಗಳ ಮತ್ತು ಕೇಂದ್ರದ ನಡುವಿನ ಕರ್ತವ್ಯಗಳನ್ನು ಹಂಚಿಕೆ ಮಾಡಿದೆ. ಆದರೆ ಕೇಂದ್ರವು ಇದನ್ನು ಒಂದಲ್ಲ ಒಂದು ನೆಪ ಮಾಡಿಕೊಂಡು ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸಲಾಗುತ್ತಿದೆ. ಆರೋಗ್ಯ ಕ್ಷೇತ್ರವು ಸಂವಿಧಾನದಲ್ಲಿ ರಾಜ್ಯ ಪಟ್ಟಿಯಲ್ಲಿದೆ. ಕೋವಿಡ್ 19 ಸಂದರ್ಭದಲ್ಲಿ ರಾಜ್ಯಗಳ ಜೊತೆ ಸಮಾಲೋಚನೆ ನಡೆಸದೆ ಮತ್ತು ರಾಜ್ಯಗಳ ಸಿದ್ಧತೆಯ ಬಗ್ಗೆ ಚರ್ಚೆ ಮಾಡದೆ ಕೇಂದ್ರವು ಮಾರ್ಚ್ ತಿಂಗಳಲ್ಲಿ ಲಾಕ್ ಡೌನ್ ಹೇರಿತು. ಆದರೆ ಅದರಿಂದ ಉಂಟಾದ ವಲಸೆ ಕಾರ್ಮಿಕರ ದುರಂತವನ್ನು ಮಾತ್ರ ಕೇಂದ್ರವು ರಾಜ್ಯ ಸರಕಾರಗಳ ನಿರ್ವಹಣೆಗೆ ಬಿಟ್ಟುಬಿಟ್ಟಿತು. ಒಂದು ದೇಶ: ಒಂದು ತೆರಿಗೆ(ಜಿ.ಎಸ್.ಟಿ), ಒಂದು ಬ್ಯಾಂಕು(ಬ್ಯಾಂಕುಗಳ ವಿಲೀನ), ಒಂದು ರೇಷನ್ ಕಾರ್ಡು, ಒಂದು ಮಾರುಕಟ್ಟೆ(ಎ.ಪಿ.ಎಮ್.ಸಿ ಗಳ ಖಾಸಗೀಕಣ), ಒಂದು ಭಾಷೆ(ಹಿಂದೆ ಭಾಷೆಯ ಹೇರಿಕೆ), ಒಂದು ಉದ್ಯೋಗ ಆಯ್ಕೆ(ರಾಷ್ಟ್ರೀಯಮಟ್ಟದಲ್ಲಿ ಉದ್ಯೋಗಿಗಳ ನೇಮಕಾತಿಗೆ ಒಂದು ವ್ಯವಸ್ಥೆ) ಮುಂತಾದ ಜನಪ್ರಿಯ ಶೀರ್ಷಿಕೆಗಳಲ್ಲಿ ರಾಜ್ಯಗಳ ಸ್ವಾಯತ್ತತೆಯನ್ನು ನಾಶ ಮಾಡಲಾಗುತ್ತಿದೆ. ಇದು ಅಲ್ಪಾವಧಿಯಲ್ಲಿ ರಾಜಕೀಯ ಲಾಭ ತಂದು ಕೊಡಬಹುದು. ಆದರೆ ದೀರ್ಘಾವಧಿಯಲ್ಲಿ ರಾಷ್ಟ್ರದ ಹಿತಕ್ಕೆ ಇದು ಅಪಾಯಕರವಾಗಿ ಪರಿಗಣಿಸಬಹುದು. ನಮ್ಮ ದೇಶದ ಏಕತೆಯು ಭದ್ರವಾಗಿರುವುದೇ ಅದರ ಬಹುತ್ವ ಸ್ವರೂಪದಿಂದಾಗಿ ಎಂಬುದನ್ನು ನಾವು ಮರೆಯಬಾರದು. ದೇಶ ಒಂದು ನಿಜ. ಇದರ ನಿಜವಾದ ಸೌಂದರ್ಯ ಅದರ ವೈವಿಧ್ಯತೆಯಲ್ಲಿ ಮತ್ತು ಬಹುತ್ವ ಸಂಸ್ಕೃತಿಯಲ್ಲಿ ಅಡಗಿದೆ. ಈ ವೈವಿಧ್ಯತೆ ಮತ್ತು ಬಹುತ್ವವು ನಮ್ಮ ದೇಶದ ಭದ್ರತೆಗೆ ಮತ್ತು ಏಕತೆಗೆ ಎಂದೂ ಅಪಾಯ ತಂದಿಲ್ಲ. ಪ್ರತಿಯಾಗಿ ಇವನ್ನು ಇದು ಗಟ್ಟಿಗೊಳಿಸುತ್ತಿದೆ.



ಕೃಪೆ: ಪಿ. ಮಹಮ್ಮದ್, ವಾ.ಭಾ.

ಕೇಂದ್ರದಿಂದ ಕರ್ನಾಟಕಕ್ಕಾಗಿರುವ ಅನ್ಯಾಯ

ಹಣಕಾಸು ಮಂತ್ರಿಗಳು ಆಗಿರುವ ಬಿ. ಎಸ್. ಯಡಿಯೂರಪ್ಪ ಮಂಡಿಸಿರುವ 2020-2021ರ ಬಜೆಟ್ಟಿನಲ್ಲಿ ಹಣಕಾಸು ಸಂಪನ್ಮೂಲವನ್ನು ಹಂಚಿಕೊಳ್ಳುವುದರಲ್ಲಿ ಕೇಂದ್ರವು ರಾಜ್ಯಕ್ಕೆ ಅನ್ಯಾಯ ಮಾಡುತ್ತಿರುವುದನ್ನು ಅಪ್ರತ್ಯಕ್ಷವಾಗಿ ಬಹಿರಂಗ ಪಡಿಸಿದ್ದಾರೆ. ನೇರವಾಗಿ ಇದನ್ನು ಹೇಳುವ ರಾಜಕೀಯ ಮುತ್ಸದ್ದಿತನ ಅವರಲ್ಲಿಲ್ಲ. ಅವರು 2020-21ರ ಬಜೆಟಿನಲ್ಲಿ ದಾಖಲಿಸಿರುವಂತೆ ಕೇಂದ್ರದ ತೆರಿಗೆಗಳಲ್ಲಿನ ರಾಜ್ಯದ ಪಾಲು 2019-20ರಲ್ಲಿ ರೂ. 8,887 ಕೋಟಿ ಕಡಿತವಾಗಿದೆ. 2020-21ರಲ್ಲಿನ ಕಡಿತ ರೂ, 11,215 ಕೋಟಿಯಾಗಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಕುಸಿತವಾಗಿರುವುದರಿಂದ ಅದರ ಪರಿಹಾರದಲ್ಲಿ ರೂ. 3000 ಕೋಟಿ ಕಡಿತವಾಗಿದೆ. ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳಲ್ಲಿನ ವೆಚ್ಚ ಭರಿಸುವುದರಲ್ಲಿ ಕೇಂದ್ರವು ರಾಜ್ಯ ಸರ್ಕಾರಗಳ ಪಾಲನ್ನು ಹೆಚ್ಚು ಮಾಡಿದೆ. ಇವೆಲ್ಲವೂ ಒಕ್ಕೂಟ ವ್ಯವಸ್ಥೆಗೆ ಅಪಾಯ ಉಂಟು ಮಾಡುವ ಕ್ರಮಗಳಾಗಿವೆ.

ರಾಜ್ಯವು 2019-20ರಲ್ಲಿ ಜಲ ಪ್ರಳಯ ವಿಕೋಪದಿಂದ ಅನುಭವಿಸಿದ ಹಾನಿ ರೂ. 35,160 ಕೋಟಿ. ಇದಕ್ಕೆ ಕೇಂದ್ರವು ನೀಡಿದ ನೆರವು ರೂ. 1869 ಕೋಟಿ(ಶೇ.5.32). ರಾಜ್ಯವು 2018-19ರಲ್ಲಿ ಎದುರಿಸಿದ್ದ ಪ್ರವಾಹದಲ್ಲಿ 7 ಲಕ್ಷ ಜನರ ಬದುಕು ಮೂರಾಬಟ್ಟೆಯಾಗಿತ್ತು. ಸುಮಾರು 4.69 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬೆಳೆ ನಾಶವಾಗಿತ್ತು. ಅಕ್ಷರಶಃ ನೂರಾರು ಜನರು ಪ್ರಾಣ ಹಾನಿಯಾಗಿತ್ತು. ಆದರೆ ಇದರ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸಲಿಲ್ಲ ಮತ್ತು ವಿಶೇಷ ಪರಿಹಾರ ನೀಡಲಿಲ್ಲ. ರಾಜ್ಯವು ಪ್ರಸಕ್ತ ವರ್ಷದಲ್ಲಿಯೂ ಪ್ರವಾಹದ ಅಪಾಯವನ್ನು ಎದುರಿಸುತ್ತಿದೆ. ಆದರೆ ಕೇಂದ್ರವು ಇದರ ಬಗ್ಗೆ ಕಾಳಜಿ ತೋರುತ್ತಿಲ್ಲ.

ರಾಜ್ಯವು ಹಣಕಾಸು ಸಂಪನ್ಮೂಲ ಸಂಗ್ರಹಣೆಯಲ್ಲಿ ಎಡವುತ್ತಿದೆ

ಇಂದು ರಾಜ್ಯವು ಕೋವಿಡ್ 19 ದುರಂತದಲ್ಲಿ ತತ್ತರಿಸಿ ಹೋಗಿದೆ. ಜನರ ಬದುಕು ಜರ್ಜರಿತವಾಗಿದೆ. ಈ ಸಂದರ್ಭದಲ್ಲಿ ಹಣಕಾಸು ಸಂಪನ್ಮೂಲವನ್ನು ಕ್ರೋಢೀಕರಿಸುವುದರಲ್ಲಿ ಎಚ್ಚರ ವಹಿಸಬೇಕಾಗಿತ್ತು. ಆದರೆ ಈ ಸಂಪನ್ಮೂಲ ಸಂಗ್ರಹಣದಲ್ಲಿ ಮುತ್ಸದ್ದಿತನ ಕಾಣುತ್ತಿಲ್ಲ. ಉದಾ. ನಮ್ಮ ರಾಜ್ಯದ ಒಟ್ಟು ರಾಜ್ಯ ಆಂತರಿಕ ಉತ್ಪನ್ನಕ್ಕೆ (ಜಿ.ಎಸ್.ಡಿ.ಪಿ)ದಲ್ಲಿ ಮಾಹಿತಿ ತಂತ್ರಜ್ಞಾನದ ಕಾಣಿಕೆ ಶೇ. 25. ಅಂದರೆ ಅದು ರಾಜ್ಯದ ವರಮಾನಕ್ಕೆ ನೀಡುತ್ತಿರುವ ಕಾಣಿಕೆ ಅಂದಾಜು ರೂ. 35,000 ಕೋಟಿ. ಆದರೆ ಅದರಿಂದ ರಾಜ್ಯದ ಬೊಕ್ಕಸಕ್ಕೆ ಬರುತ್ತಿರುವ ತೆರಿಗೆ ಮಾತ್ರ ಸೊನ್ನೆ(ಬಜೆಟ್ ಭಾಷಣ, 2020-2021. ಪು: 8. ಕಂಡಿಕೆ 18). ಸಂಕಷ್ಟದ ಸಂದರ್ಭದಲ್ಲಿ ಉದ್ದಿಮೆ ರಂಗಕ್ಕೆ ತೆರಿಗೆ ವಿನಾಯಿತಿ ನೀಡುವುದು ವಿವೇಕಯುತ ಕ್ರಮ. ಆದರೆ ಅದು ಅತಿಯಾಗಬಾರದು. ರಾಜ್ಯದ ಹಿತಾಸಕ್ತಿಯನ್ನು ಬಲಿಕೊಟ್ಟು ಉದ್ದಿಮೆದಾರರಿಗೆ ನೆರವು ನೀಡುವುದು ತರವಲ್ಲ. ನಮ್ಮ ಸರಕಾರವು ಉದ್ದಿಮೆಗಾರರಿಗೆ, ಬಂಡವಳಿಗರಿಗೆ ಇನ್ನಿಲ್ಲದಂತೆ ಎಲ್ಲಬಗೆಯ ರಿಯಾಯಿತಿ ತೋರುತ್ತಿದೆ. ಅವರನ್ನು ವೈಭವೀಕರಿಸಲಾಗುತ್ತಿದೆ. ಕೇಂದ್ರವಂತೂ ಅವರು 'ವೆಲ್ತ್ ಕ್ರಿಯೇಟರ್ಸ್' ಎಂದು ಹಾಡಿಹೊಗಳುತ್ತಿದೆ. ಆದರೆ ಬಂಡವಾಳದಷ್ಟೇ ನಿರ್ಣಾಯಕ ಪಾತ್ರ ವಹಿಸುವ ಕಾರ್ಮಿಕ ವರ್ಗವನ್ನು 'ಅಭಿವೃದ್ಧಿಗೆ' ಕಂಟಕ, ಬಂಡವಾಳ ಹೂಡಿಕೆಗೆ ಅಡ್ಡಿ ಎಂದೆಲ್ಲ ಹೀಯಾಳಿಸಲಾಗುತ್ತಿದೆ ಮತ್ತು ಕಾರ್ಮಿಕ ಹಿತಾಸಕ್ತಿ ವಿರೋಧಿ ಕ್ರಮಗಳನ್ನು 'ಲೇಬರ್ ಕೋಡ್ಸ್' ಹೆಸರಿನಲ್ಲಿ ಜಾರಿ ಮಾಡಲಾಗುತ್ತಿದೆ.

ಸಂಪನ್ಮೂಲ ತೀವ್ರ ಕೊರತೆಯ ಸಂದರ್ಭದಲ್ಲಿ ಅದನ್ನು ಒಗ್ಗೂಡಿಸುವುದರ ಬಗ್ಗೆ ಹೆಚ್ಚಿನ ಗಮನ ನೀಡಬೇಕು. ಆದರೆ ನಮ್ಮ ಸರ್ಕಾರ ಏನು ಮಾಡುತ್ತಿದೆ? ಅನಗತ್ಯವಾಗಿ ಭೂಮಿಗೆ ಸಂಬಂಧಿಸಿದಂತೆ ಮತ್ತು ಮಾರುಕಟ್ಟೆಗೆ ಸಂಬಂಧಿಸಿದಂತೆ, ಕಾರ್ಮಿಕರ ಕೆಲಸದ ಅವಧಿಗೆ ಸಂಬಂಧಿಸಿದಂತೆ ಸುಗ್ರೀವಾಜ್ಞೆಗಳನ್ನು ಹೊರಡಿಸುತ್ತಿದೆ. ಇಲ್ಲಿ ಸರ್ಕಾರಕ್ಕೆ ರವಷ್ಟೂ ಸಂಪನ್ಮೂಲ ದೊರೆಯುವುದಿಲ್ಲ. ಮತ್ತೆ ಬೆಂಗಳೂರಿನಲ್ಲಿ ಸರ್ಕಾರಿ ಭೂಮಿಯನ್ನು ಮಾರಾಟ ಮಾಡುವ ಕ್ರಮವನ್ನು ಅದು ಅನುಸರಿಸುತ್ತಿದೆ. ಆಸ್ತಿಯನ್ನು ಮಾರಾಟ ಮಾಡುವುದು ನಮ್ಮಲ್ಲಿ ಅವಮಾನಕರ ಸಂಗತಿ. ಜಮೀನನ್ನು ಮಾರಾಟ ಮಾಡುವವರನ್ನು ಹಳ್ಳಿಗಳಲ್ಲಿ ಜನರು ಕೀಳಾಗಿ ಕಾಣುತ್ತಾರೆ. ಸರ್ಕಾರ ಇಂದು ಇಂತಹ ಸ್ಥಿತಿಗೆ ಬಂದಂತೆ ಕಾಣುತ್ತದೆ. ಯಾರು ಬೇಕಾದರೂ ಜಮೀನು ಕೊಳ್ಳಬಹುದು, ಯಾರು ಬೇಕಾದರೂ ಆಹಾರ ಪದಾರ್ಥಗಳನ್ನು ದಾಸ್ತಾನು ಮಾಡಬಹುದು, ಯಾರಿಗಾದರೂ. ಎಲ್ಲಿಯಾದರೂ ಮಾರಾಟ ಮಾಡಬಹುದು ಎಂಬ ಕಾನೂನನ್ನು ಜಾರಿಗೆ ತಂದಿದೆ. ಈ ಎಲ್ಲ ಕ್ರಮಗಳಿಂದ ಸರ್ಕಾರಕ್ಕೆ ಒಂದು ರೂಪಾಯಿ ಸಂಪನ್ಮೂಲ ದೊರೆಯುವುದಿಲ್ಲ. ನಿಜ, 'ಲೈಸೆನ್ಸ್ – ಕಂಟ್ರೋಲ್ ರಾಜ್' ಆರ್ಥಿಕ ಬೆಳವಣಿಗೆಗೆ ತಡೆಯುಂಟು ಮಾಡುತ್ತದೆ. ಆದರೆ ನಿಯಂತ್ರಣವೇ ಇಲ್ಲದಿದ್ದರೆ ಅದು ಆರ್ಥಿಕ ಅರಾಜಕತೆಗೆ, ವರಮಾನ-ಸಂಪತ್ತಿನ ಕೇಂದ್ರೀಕರಣಕ್ಕೆ ಎಡೆಮಾಡಿಕೊಡುತ್ತದೆ. ಕಾರ್ಮಿಕ ವರ್ಗವನ್ನು ತುಳಿದು, ದುಡಿಮೆಯನ್ನು ದುರ್ಬಲಗೊಳಿಸಿ ಅಭಿವೃದ್ಧಿ ಸಾಧಿಸಿಕೊಳ್ಳುವುದು ಅಸಾಧ್ಯ.

ಖಾಸಗೀಕರಣವು ಮಿತಿಯಾಗಿದ್ದರೆ ಅದು ಅಭಿವೃದ್ಧಿಗೆ ಅನುಕೂಲವಾಗಿರುತ್ತದೆ. ಇದು ಮಿತಿ ಮೀರಿದರೆ ಆರ್ಥಿಕತೆಗೆ ಅಪಾಯವುಂಟಾಗುತ್ತದೆ. ಮಹಾಆರ್ಥಿಕ ಸಂಕಷ್ಟದಲ್ಲಿ ಸಾರ್ವಜನಿಕ ವಲಯ ಮಾತ್ರ ಜನರ ಬದುಕನ್ನು ಮತ್ತು ಆರ್ಥಿಕತೆಯ ಭದ್ರತೆಯನ್ನು ಕಾಪಾಡಬಲ್ಲದು. ಕೊವಿಡ್ 19ರ ಸಂದರ್ಭದಲ್ಲಿ ಆರೋಗ್ಯ ರಂಗದಲ್ಲಿ ಇದು ಸಾಬೀತಾಗಿದೆ ಮತ್ತು ದುರಂತದ ಸಂದರ್ಭದಲ್ಲಿ ಖಾಸಗಿ ಆರೋಗ್ಯ ರಂಗ ಹೇಗೆ ಹಣಮಾಡುವುದರಲ್ಲಿ ನಿರತವಾಗಿದೆ ಎಂಬುದೂ ಜಗಜ್ಜಾಹೀರಾಗಿದೆ.

ತೆರಿಗೆ ವಿನಾಯತಿ ಸರಿ. ಅದೇ ಸಮಯದಲ್ಲಿ ತೆರಿಗೆ ಸಂಗ್ರಹವೂ ಮುಖ್ಯ. ಆಸ್ತಿ ಮಾರಿ ಸರ್ಕಾರವನ್ನು ನಡೆಸುವುದು ದಿವಾಳಿತನದ ಸೂಚಿ. ಸರ್ಕಾರವೊಂದು ಆರ್ಥಿಕತೆಯ ದೀರ್ಘಾವಧಿ ಹಿತಾಸಕ್ತಿಗಳ ಬಗ್ಗೆಯೂ ಆಲೋಚನೆ ಮಾಡಬೇಕು. ಇಂದು ನಮ್ಮ ಸರ್ಕಾರವು 'ಬೆಂಗಳೂರೇ ಕರ್ನಾಟಕ' ಎನ್ನುವಂತೆ ನಡೆದುಕೊಳ್ಳುತ್ತಿದೆ. ಗ್ರಾಮೀಣ ಮತ್ತು ಪಟ್ಟಣ-ಪುರಸಭೆಗಳ ಮಟ್ಟದಲ್ಲಿನ ಆರೋಗ್ಯ ವ್ಯವಸ್ಥೆ ಬಗ್ಗೆ ಸರ್ಕಾರ ಕುರುಡಾಗಿಬಿಟ್ಟಿದೆ.

ಕೋವಿಡೋತ್ತರ ಆರ್ಥಿಕತೆಯ ಬಗ್ಗೆ ಸರ್ಕಾರ ಯೋಚಿಸಬೇಕು. ಎಲ್ಲವನ್ನೂ ಖಾಸಗಿರಂಗಕ್ಕೆ ವಹಿಸಿಬಿಟ್ಟರೆ ಇದು ಸಮಾಜದಲ್ಲಿ ಆರ್ಥಿಕ ಅರಾಜಕತೆ ಮತ್ತು ಬಡತನ ಹಾಗೂ ಅಸಮಾನತೆಯ ಆಸ್ಫೋಟಕ್ಕೆ ಕಾರಣವಾಗುತ್ತದೆ. ಕೇಂದ್ರ ಸರ್ಕಾರ ರಾಜ್ಯಗಳಿಗೆ ಕಾನೂನಾತ್ಮಕವಾಗಿ ನೀಡಬೇಕಾದ ಸಂಪನ್ಮೂಲವನ್ನು ಒತ್ತಾಯ ಮಾಡಬೇಕು. ರಾಜ್ಯಗಳು ಕೇಂದ್ರದ ಮುಂದೆ ಭಿಕ್ಷೆ ಬೇಡಬೇಕಾಗಿಲ್ಲ. ನಮ್ಮ ಸರ್ಕಾರವು ಉದ್ದಿಮೆಗಳಿಗೆ ವಿನಾಯಿತಿ ನೀಡುವುದರಲ್ಲಿ ಎಷ್ಟು ಮುತುವರ್ಜಿ ತೋರಿಸುತ್ತಿದೆಯೋ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚಿನ ಕಾಳಜಿಯನ್ನು ಸಂಪನ್ಮೂಲ ಸಂಗ್ರಹಕ್ಕೆ ಮತ್ತು ಅದರ ಕ್ರೋಢೀಕರಣಕ್ಕೆ ಗಮನ ನೀಡಬೇಕು. ●



ಆರೋಗ್ಯ? ಉದ್ಯೋಗ? ಆರ್ಥಿಕ ಚೇತರಿಕೆ?
ಸ್ವಾತಂತ್ರ್ಯ ದಿನದ ಟೊಳ್ಳು ಭಾಷಣ

ಪ್ರಧಾನ ಮಂತ್ರಿಗಳು ಸ್ವಾತಂತ್ರ್ಯ ದಿನದಂದು ಮಾಡುವ ಭಾಷಣಗಳು ಈಗ ಹಿಂದಿನ ವರ್ಷದ ಸಾಧನೆಗಳು ಮತ್ತು ಮುಂದಿರುವ ಸವಾಲುಗಳ ಪರಾಮರ್ಶೆಯಿರುವ ಒಂದು ತೆರನ 'ರಾಷ್ಟ್ರ ಸನ್ನಿವೇಶ' ಭಾಷಣಗಳ ಸ್ವರೂಪ ಪಡೆದಿವೆ. ಆದರೆ ಈ ಬಾರಿಯ ಮೋದಿಯವರ 86 ನಿಮಿಷಗಳ ಭಾಷಣ ಹೆಚ್ಚಾಗಿ ಅವರ ಎಂದಿನ ಪ್ರಚಾರ ಶೈಲಿಯಲ್ಲೇ ಇತ್ತು, ದೇಶದ ಮತ್ತು ಜನತೆಯ ನಿಜ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಮಾತುಗಳು ಸುಮಾರಾಗಿ ಇಲ್ಲವೇ ಇಲ್ಲ.



ಪ್ರಕಾಶ ಕಾರಟ್


ಸ್ವಾತಂತ್ರ್ಯ ದಿನದಂದು ಪ್ರಧಾನ ಮಂತ್ರಿಗಳ ಭಾಷಣವನ್ನು ನಿರೀಕ್ಷಣಾ ಭಾವದಿಂದ ವೀಕ್ಷಿಸಲಾಗಿತ್ತು. ಕೊವಿಡ್ ಮಹಾಸೋಂಕಿನಿಂದಾಗಿ ಉಂಟಾಗಿರುವ ಆರೋಗ್ಯ ಬಿಕ್ಕಟ್ಟು ಮತ್ತು ಅದಕ್ಕೆ ಸಂಬಂಧಪಟ್ಟಂತೆ ಆರ್ಥಿಕ ಬಿಕ್ಕಟ್ಟಿನಿಂದಾಗಿ ಉಂಟಾಗಿರುವ ದೊಡ್ಡ ಪ್ರಮಾಣದ ಉದ್ಯೋಗ ಮತ್ತು ಜೀವನೋಪಾಯಗಳ ನಷ್ಟವನ್ನು ನಿಭಾಯಿಸಲು ಏನಾದರೂ ಹೊಸ ಹೆಜ್ಜೆಗಳನ್ನು ಅವರು ಪ್ರಕಟಿಸುತ್ತಾರೋ ಎಂದು ಜನ ಕಾದಿದ್ದರು.

ಆದರೆ ಈ ಎರಡು ವಿಷಯಗಳಲ್ಲೂ ಪ್ರಧಾನಿಗಳ ಭಾಷಣ ನಿರಾಶೆ ಉಂಟು ಮಾಡಿದೆ. ಕಳೆದ ಆರು ತಿಂಗಳಲ್ಲಿ ಕೊರೊನ ಮಹಾಸೋಂಕು ಭಾರತದಲ್ಲಿ ಸಾರ್ವಜನಿಕ ಆರೋಗ್ಯ ಪಾಲನೆಯ ಶೋಚನೀಯ ಸ್ಥಿತಿ ಬಯಲಿಗೆ ತಂದಿದೆ. ದಶಕಗಳಿಂದ ಸರಕಾರಗಳು ಸಾರ್ವಜನಿಕ ಆರೋಗ್ಯವನ್ನು ನಿರ್ಲಕ್ಷಿಸಿವೆ, ಆರೋಗ್ಯದ ಮೇಲೆ ಸರಕಾರದ ವೆಚ್ಚ ಜಿಡಿಪಿಯ 1ಶೇ.ವಷ್ಟೇ. ದೇಶದಲ್ಲಿ ಈ ಮಹಾಸೋಂಕಿನ ರಭಸ ಇನ್ನೂ ಮುಂದುವರೆದಿರುವುದರಿಂದ ಮೋದಿ ಸರಕಾರಕ್ಕೆ ಬುದ್ಧಿ ಬಂದು ಪಾಟ ಕಲಿತಿರಬಹುದು, ಇಷ್ಟೊಂದು ವಿಳಂಬದ ನಂತರವಾದರೂ, ಒಂದು ಪ್ರಮುಖ ಸಾರ್ವಜನಿಕ ಆರೋಗ್ಯ ಕ್ರಮವನ್ನು ಪ್ರಕಟಿಸಬಹುದು ಮತ್ತು ಅದಕ್ಕೆ ಸಾಕಷ್ಟು ಹಣವನ್ನು ಕೂಡ ನೀಡಬಹುದು ಎಂದು ಯೋಚನೆ ಬಂದಿತ್ತು.

ಆದರೆ ಪ್ರಧಾನ ಮಂತ್ರಿಗಳು ಪ್ರಕಟಿಸಿರುವುದು ಎಲ್ಲರಿಗೂ ಒಂದು ಡಿಜಿಟಲ್ ಆರೋಗ್ಯ ಗುರುತುಪತ್ರವನ್ನು–ಇದು ಪ್ರತಿ ವ್ಯಕ್ತಿಯ ಎಲ್ಲ ವೈದ್ಯಕೀಯ ದಾಖಲೆಗಳನ್ನು ಜೋಡಿಸುತ್ತದೆ. ಆದರೆ ನಿಜವಾದ ಸಮಸ್ಯೆ ವೈದ್ಯಕೀಯ ಸೌಲಭ್ಯಗಳು ಮತ್ತು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಪ್ರಾಥಮಿಕ ಮಟ್ಟದಿಂದ ಹಿಡಿದು ತೃತೀಯ ಮಟ್ಟದ ವರೆಗೂ ಸಿಬ್ಬಂದಿ ಕೊರತೆ. ಇದನ್ನು ಬದಿಗೊತ್ತಲಾಗಿದೆ. ಪ್ರಧಾನ ಮಂತ್ರಿಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ವಿಸ್ತರಿಸುವ ಮತ್ತು ಮೇಲ್ದರ್ಜೆಗೇರಿಸುವ ಗುರಿಯೊಂದಿಗೆ ರಾಜ್ಯಗಳು ಮತ್ತು ಕೇಂದ್ರಕ್ಕೆ ಕನಿಷ್ಟ 1 ಲಕ್ಷ ಕೋಟಿ ರೂ.ಗಳ ಒಂದು ಆರೋಗ್ಯ ಮೂಲರಚನೆ ಯೋಜನೆಯನ್ನು ಪ್ರಕಟಿಸಬೇಕಾಗಿತ್ತು. ಆದರೆ ಬಿಜೆಪಿ ಸರಕಾರ ಖಾಸಗೀಕೃತ ಆರೋಗ್ಯಪಾಲನೆಯ ಮೂಢನಂಬಿಕೆಗೆ ಕಟ್ಟುಬಿದ್ದಿರುವುದರಿಂದ ಅದರ ಚೌಕಟ್ಟಿನ ಆಚೆ ಯೋಚಿಸಲಾರದು.

ಕೊವಿಡ್ ಎರಗುವ ಮೊದಲೇ ಗಮನಾರ್ಹವಾಗಿ ನಿಧಾನಗೊಂಡಿದ್ದ ಅರ್ಥವ್ಯವಸ್ಥೆ ಲಾಕ್‌ಡೌನ್ ಹೇರಿದಂದಿನಿಂದ ಅಧೋಗತಿಗೆ ಇಳಿಯುತ್ತಿದೆ. ಪರಿಣಿತರು 2020–21ರ ಜಿಡಿಪಿ 5ಶೇ.ದಿಂದ 10ಶೇ, ದ ವರೆಗೆ ಇಳಿಕೆಯಾಗುತ್ತದೆ ಎಂದು ಭವಿಷ್ಯ ನುಡಿಯುತ್ತಿದ್ದಾರೆ. ಆಳವಾದ ಹಿಂಜರಿತದ ಪರಿಣಾಮವೆಂದರೆ ದೊಡ್ಡ ಪ್ರಮಾಣದಲ್ಲಿ ಉದ್ಯೋಗನಷ್ಟಗಳು, ಸಣ್ಣ ವ್ಯಾಪಾರಗಳು ಮತ್ತು ಸೇವಾವಲಯದ ಗಣನೀಯ ಭಾಗಗಳು ಮುಚ್ಚುತ್ತಿರುವುದು.

ಬೇಡಿಕೆ ಮತ್ತು ಅನುಭೋಗ ತೀವ್ರವಾಗಿ ಇಳಿದಿರುವುದು ಬಿಕ್ಕಟ್ಟನ್ನು ಇನ್ನಷ್ಟು ಆಳಗೊಳಿಸುತ್ತದೆ. ಆದಾಯಗಳಲ್ಲಿ ನಷ್ಟ ಉಳಿತಾಯಗಳನ್ನು ಸವೆಸುತ್ತದೆ. ಇದರಿಂದ ಹೊರಬರಲು ಸರಕಾರಕ್ಕೆ ಇರುವ ಏಕೈಕ ದಾರಿಯೆಂದರೆ ಸಾರ್ವಜನಿಕ ವೆಚ್ಚವನ್ನು ಮತ್ತು ಹೂಡಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸುವುದು.



ವ್ಯಂಗ್ಯಚಿತ್ರ ಕೃಪೆ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಕೆಂಪು ಕೋಟೆಯಿಂದ 'ಪ್ರಧಾನಿಗಳ ಭಾಷಣ ಇಂತಹ ಸಂಕೇತವನ್ನೇನೂ ಕೊಟ್ಟಿಲ್ಲ. ಜನರಿಗೆ ನಗದು ವರ್ಗಾವಣೆಯ ಮೂಲಕ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲು ಅದು ಪಟ್ಟಾಗಿ ತಿರಸ್ಕರಿಸಿದೆ. ಮೂರು ತಿಂಗಳಲ್ಲಿ ಮಹಿಳಾ ಜನಧನ ಖಾತೆದಾರರಿಗೆ 1500ರೂ. ಬಿಟ್ಟು ಸರಕಾರ ಬೇರೇನ್ನೂ ಮಾಡಿಲ್ಲ. ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಎಲ್ಲರಿಗೂ ತಿಂಗಳಿಗೆ 7500ರೂ.ನಂತೆ ವರ್ಗಾವಣೆ ಮಾಡಬೇಕು ಎಂಬ ಪ್ರತಿಪಕ್ಷಗಳ ಆಗ್ರಹವನ್ನು ಅದು ತಿರಸ್ಕರಿಸಿದೆ.

ಅವರ ಭಾಷಣದಲ್ಲಿ ಉದ್ಯೋಗ ಕಳಕೊಂಡ, ಜೀವನೋಪಾಯಗಳನ್ನು ಕಳಕೊಂಡ, ಅಥವ ಆದಾಯಗಳು ತೀವ್ರವಾಗಿ ಕಡಿತಗೊಂಡಿರುವ ಲಕ್ಷಾಂತರ ಜನಗಳ ಪ್ರಸ್ತಾಪ ಕೂಡ ಇರಲಿಲ್ಲ.

ಏಕೈಕ ಪ್ರಕಟಣೆಯೆಂದರೆ, 1.10 ಲಕ್ಷ ಕೋಟಿ ರೂ.ಗಳ ರಾಷ್ಟ್ರೀಯ ಮೂಲರಚನೆ ಪೈಪ್‌ಲೈನ್ (ಎನ್‌ಐಪಿ). ವಾಸ್ತವವಾಗಿ, ಮೂಲರಚನೆ ಅಭಿವೃದ್ಧಿಗೆ ಒಟ್ಟಾರೆ ಒತ್ತು ನೀಡುವ ಈ ಎನ್‌ಐಪಿಯನ್ನು ಮೋದಿಯವರು 2019ರ ಸ್ವಾತಂತ್ರ್ಯ ದಿನದ ಭಾಷಣದಲ್ಲೇ ಪ್ರಕಟಿಸಿದ್ದರು. ಇದೊಂದು ಪಂಚವಾರ್ಷಿಕ ಯೋಜನೆ, ಅಂದರೆ ಒಂದು ದೀರ್ಘಕಾಲೀನ ಸ್ವರೂಪದ ಯೋಜನೆ. ತಕ್ಷಣಕ್ಕೆ ಯಾವುದೇ ಹೂಡಿಕೆಯ ಪ್ರಕಟಣೆಗಳು ಭಾಷಣದಲ್ಲಿ ಇರಲಿಲ್ಲ. ಮತ್ತೆ–ಮತ್ತೆ 'ಆತ್ಮನಿರ್ಭರ ಭಾರತ'ದ ರಾಗಾಲಾಪನೆ ಇದ್ದರೂ, ಸರಕಾರ ಹೆಚ್ಚೆಚ್ಚು ವಿದೇಶಿ ನೇರ ಹೂಡಿಕೆ(ಎಫ್‌ಡಿಐ) ಮತ್ತು ಖಾಸಗಿ ಹೂಡಿಕೆಗಳನ್ನೇ ನೆಚ್ಚಿಕೊಂಡಿದೆ ಎಂಬುದು ಸ್ಪಷ್ಟವಾಗಿದೆ.

ನಿಜ ಹೇಳಬೇಕೆಂದರೆ, ಕೊವಿಡ್ ಅವಧಿಯನ್ನು ವಿದೇಶಿ ಬಂಡವಾಳಕ್ಕೆ ಮತ್ತು ಕಾರ್ಪೊರೇಟ್‌ಗಳಿಗೆ ಹೆಚ್ಚು ರಿಯಾಯ್ತಿಗಳನ್ನು ಮುಂದೊತ್ತಲಿಕ್ಕಾಗಿಯೇ ಬಳಸಲಾಗಿದೆ. ಸಾರ್ವಜನಿಕ ವಲಯದ ಉದ್ದಿಮೆಗಳ ಸಾರಾಸಗಟು ಖಾಸಗೀಕರಣದ ಕ್ರಮಗಳನ್ನು ಪ್ರಕಟಿಸಲಾಗಿದೆ. 'ಪರಿಸರ ಪರಿಣಾಮ ನಿರ್ಧಾರ'ದ ಕರಡಿನಿಂದಾಗಿ ನಿಯಂತ್ರಕ ನಿಯಮಾವಳಿಗಳು ದುರ್ಬಲಗೊಂಡು ರಾಷ್ಟ್ರೀಯ ಆಸ್ತಿಗಳನ್ನು ವಿದೇಶಿ ಮತ್ತು ದೇಶಿ ಕಾರ್ಪೊರೇಟ್‌ಗಳು ಲೂಟಿ ಹೊಡೆಯಲು ಸೌಕರ್ಯ ಒದಗುತ್ತದೆ. ಇದು ಅರಣ್ಯಗಳಿಗೆ ಮತ್ತು ಪರಿಸರಕ್ಕೆ ಭಾರೀ ಹಾನಿಯನ್ನು ಉಂಟು ಮಾಡುತ್ತದೆ.

ಮಹಾಸೋಂಕಿನ ಸಾಮಾಜಿಕ ಪರಿಣಾಮದ ಬಗ್ಗೆ ಯಾವುದೇ ಅರಿವು ಈ ಭಾಷಣದಲ್ಲಿ ಇರಲಿಲ್ಲ. ವಂಚಿತ ಸಾಮಾಜಿಕ–ಆರ್ಥಿಕ ಹಿನ್ನೆಲೆಯ ಶಾಲಾ ವಿದ್ಯಾರ್ಥಿಗಳ ಒಂದಿಡೀ ಪೀಳಿಗೆಯೇ ಶಿಕ್ಷಣದ ಸಾಧ್ಯತೆಯೇ ಇಲ್ಲದ ಒಂದು ಭವಿಷ್ಯವನ್ನು ಎದುರಿಸಬೇಕಾಗಿ ಬರುತ್ತಿದೆ. ಹಲವರು ನಡುವೆಯೇ ಶಾಲೆ ಬಿಡಲಿದ್ದಾರೆ. ಒಂದು ಹೊಸ ಆರಂಭ ಎಂದು ಪ್ರಧಾನ ಮಂತ್ರಿಗಳು ಸಾರಿರುವ ನೂತನ ಶಿಕ್ಷಣ ನೀತಿಯಲ್ಲಿ ಇದಕ್ಕೆ ಉತ್ತರವಿಲ್ಲ.


ಕಳೆದ ಸ್ವಾತಂತ್ರ್ಯ ದಿನದಿಂದ ಮೋದಿ ಸರಕಾರದ ಧೋರಣೆಗಳು ಹೆಚ್ಚು ಪ್ರತಿಗಾಮಿ ತಿರುವನ್ನು ಪಡೆದಿವೆ. ಮೋದಿ ತಮ್ಮ ಭಾಷಣದಲ್ಲಿ ಜಮ್ಮು ಮತ್ತು ಕಾಶ್ಮೀರವನ್ನು ಹರಿದು ಹಾಕಿದ್ದನ್ನು ಅಲ್ಲಿಯ ಜನಗಳ ವಿವಿಧ ವಿಭಾಗಗಳಿಗೆ ಹೊಸ ಹಕ್ಕುಗಳನ್ನು ತರಲಿದೆ ಎಂದು ಹೊಗಳಿದ್ದಾರೆ; ಕಡಿತಗೊಂಡ ವಿಧಾನಸಭೆಗಾಗಿ ಕ್ಷೇತ್ರಗಳ ಮರುವಿಂಗಡಣೆಯ ಪ್ರಕ್ರಿಯೆಯನ್ನು ಪ್ರಶಂಸಿಸಿದ್ದಾರೆ. ಪೌರತ್ವದ ಜಾತ್ಯತೀತ ನಿರೂಪಣೆಯನ್ನು ಶಿಥಿಲ ಗೊಳಿಸಿರುವ ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ಎನ್‌ಆರ್‌ಸಿಯ ಪ್ರಸ್ತಾಪವೇ ಇಲ್ಲ. ಅಯೋಧ್ಯೆಯಲ್ಲಿ ರಾಮಮಂದಿರದ ನಿರ್ಮಾಣ ಬಗ್ಗೆ ಅವರ ಉಲ್ಲೇಖ ಅದು ಎಲ್ಲ ಜನವಿಭಾಗಗಳ ಪ್ರೌಢತೆಗೆ ಸಾಕ್ಷಿ ಎಂಬ ಬೂಟಾಟಿಕೆಯಿಂದ ಕೂಡಿತ್ತು. ಸೂಕ್ಷ್ಮವಾಗಿ ನೋಡಿದರೆ, ಹಿಂದುತ್ವದ ಈ ವಿಜಯೋನ್ಮಾದಕ್ಕೆ ಮುಸ್ಲಿಂ ಅಲ್ಪಸಂಖ್ಯಾತರು ತಮ್ಮನ್ನು ಹೊಂದಿಸಿಕೊಂಡು ಬಿಟ್ಟಿದ್ದಾರೆ ಎಂಬ ತೃಪ್ತಿಯನ್ನು ಈ ಭಾಷಣ ವ್ಯಕ್ತಪಡಿಸಿದಂತಿತ್ತು.

ದಕ್ಷಿಣ ಏಷ್ಯಾದಲ್ಲಿ ಶಾಂತಿ ಮತ್ತು ಸಾಮರಸ್ಯದ ಆವಶ್ಯಕತೆಗೆ ಸಂಬಂಧಪಟ್ಟಂತೆ ಪ್ರಧಾನ ಮಂತ್ರಿಗಳ ಭಾಷಣದಲ್ಲಿ ಒಂದು ಸಕಾರಾತ್ಮಕ ದನಿ ಇತ್ತು. ಇದು ಪಾಕಿಸ್ತಾನದ ವಿರುದ್ಧ ಎಂದಿನ ವಾಗ್ಬಾಣಗಳಿಗೆ ತದ್ವಿರುದ್ಧವಾಗಿದೆ. ಶಾಂತಿ ಮತ್ತು ಸಾಮರಸ್ಯದ ವಾತಾವರಣವನ್ನು ಕಟ್ಟುವುದು ದಕ್ಷಿಣ ಏಷ್ಯಾದ ದೇಶಗಳ ಮುಖಂಡರ ಹೊಣೆಗಾರಿಕೆ ಎಂದು ಅವರು ಹೇಳಿದರು. ಕಳೆದ ಒಂದು ವರ್ಷದಲ್ಲಿ ನಮ್ಮ ನೆರೆದೇಶಗಳೊಂದಿಗೆ ಸಂಬಂಧಗಳು ಹೇಗೆ ಕಹಿಯಾದವು ಎಂಬುದನ್ನು ಪರಿಗಣಿಸಿದರೆ, ಈ ಮಾತು ಮೊದಲಿಗೆ ಮತ್ತು ಎಲ್ಲರಿಗಿಂತ ಹೆಚ್ಚಾಗಿ ಮೋದಿ ಮತ್ತು ಅವರ ಸರಕಾರಕ್ಕೇ ಅನ್ವಯವಾಗುವಂತದ್ದು. ಭಾರತವು ಅಮೆರಿಕಾದ ಇಂಡೋ–ಪ್ಯಾಸಿಫಿಕ್ ಕಾರ್ಯವ್ಯೂಹವನ್ನು ಸೇರಿದರೆ, ಶ್ರೀಲಂಕ, ಬಾಂಗ್ಲಾದೇಶ್, ನೇಪಾಳ ಮತ್ತು ಪಾಕಿಸ್ತಾನ ಬೆಲ್ಟ್ ಅಂಡ್ ರೋಡ್ ಹೆಜ್ಜೆಯನ್ನು ಸೇರಿವೆ.

ಪ್ರಧಾನ ಮಂತ್ರಿಗಳ ಸ್ವಾತಂತ್ರ್ಯ ದಿನದ ಭಾಷಣಗಳು ದೇಶದ ಮುಂದಿರುವ ಸವಾಲುಗಳು–ಸಾಧನೆಗಳ ಪರಾಮರ್ಶೆ ನಡೆಸುವ ಒಂದು ತೆರನ 'ರಾಷ್ಟ್ರ ಸನ್ನಿವೇಶ' ಭಾಷಣದಂತಾಗಿವೆ. ಈ ಬಾರಿಯ, 86 ನಿಮಿಷಗಳ ಮೋದಿ ಭಾಷಣ ಜನಗಳು ಮತ್ತು ದೇಶ ಎದುರಿಸುತ್ತಿರುವ ನಿಜವಾದ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಹೇಳಿರುವುದು ಬಹಳ ಕಡಿಮೆ, ಅದು ಎಂದಿನಂತೆ ಅವರ ಪ್ರಚಾರಶೈಲಿಯಲ್ಲೇ ಇತ್ತು.

○

ರಾಮಮಂದಿರದ ನಿರ್ಮಾಣ ಬಗ್ಗೆ ಪ್ರಧಾನಿಗಳ ಉಲ್ಲೇಖ ಅದು ಎಲ್ಲ ಜನವಿಭಾಗಗಳ ಪ್ರೌಢತೆಗೆ ಸಾಕ್ಷಿ ಎಂಬ ಬೂಟಾಟಿಕೆಯಿಂದ ಕೂಡಿತ್ತು. ಸೂಕ್ಷ್ಮವಾಗಿ ನೋಡಿದರೆ, ಹಿಂದುತ್ವದ ಈ ವಿಜಯೋನ್ಮಾದಕ್ಕೆ ಮುಸ್ಲಿಂ ಅಲ್ಪಸಂಖ್ಯಾತರು ತಮ್ಮನ್ನು ಹೊಂದಿಸಿಕೊಂಡು ಬಿಟ್ಟಿದ್ದಾರೆ ಎಂಬ ತೃಪ್ತಿಯನ್ನು ಈ ಭಾಷಣ ವ್ಯಕ್ತಪಡಿಸಿದಂತಿತ್ತು.





ದೆಹಲಿ ಗಲಭೆಗಳ ವಿಚಾರಣೆ: ಎಎಪಿ ಮತ್ತು ಅಮಿತ್ ಶಾ ಜಟಾಪಟಿ

ಈಶಾನ್ಯ ದೆಹಲಿಯ ಕೋಮು ಹಿಂಸಾಚಾರದ ಪ್ರಕರಣಗಳ ತನಿಖೆ ಮತ್ತು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕುರಿತು ದೆಹಲಿಯ ಎಎಪಿ ಮತ್ತು ಕೇಂದ್ರದ ಬಿಜೆಪಿ ಸರಕಾರಗಳ ನಡುವೆ ಜಟಾಪಟಿ ನಡೆಯುತ್ತಿದೆ. ಜುಲೈ ಕೊನೆಯ ವಾರದಲ್ಲಿ ಈ ಪ್ರಕರಣಗಳಲ್ಲಿ ಪ್ರಾಸಿಕ್ಯೂಶನ್ ವಕೀಲರ ತಂಡದ ನೇಮಕದ ಕುರಿತು ಪೋಲಿಸ್ ಸೂಚನೆಯನ್ನು ದೆಹಲಿ ಸರಕಾರ ಒಪ್ಪದೆ ಸ್ವತಂತ್ರ ವಕೀಲರ ನೇಮಕವನ್ನು ಪ್ರಕಟಿಸಿತ್ತು. ಇದನ್ನು ದೆಹಲಿಯ ಲೆ. ಗವರ್ನರ್ ಮಿಂಚಿನ ವೇಗದಲ್ಲಿ ರದ್ದು ಮಾಡಿದ್ದರು. ಇದರ ಉದ್ದೇಶ – ಹಿಂಸಾಚಾರವನ್ನು ಪ್ರಚೋದಿಸುವ ಬಿಜೆಪಿ ನಾಯಕರ ದ್ವೇಷ ಭಾಷಣಗಳು ಮತ್ತು ಹಿಂಸಾಚಾರದ ನಡುವಿನ ಸಂಬಂಧ, ಮುಸ್ಲಿಂ ಸಮುದಾಯ ಹಿಂಸಾಚಾರದ ಪ್ರಮುಖ ಗುರಿಯಾಗಿತ್ತು ಎಂಬ ವಾಸ್ತವವನ್ನು, ಹಿಂಸಾಚಾರದಲ್ಲಿ ಪೋಲೀಸರ ಶಾಮೀಲು ಮತ್ತು ಅದನ್ನು ತಡೆಯುವುದರಲ್ಲಿ ಉದ್ದೇಶಪೂರ್ವಕ ನಿರ್ಲಕ್ಷ – ಇವುಗಳನ್ನು ಮರೆಮಾಚುವುದು ಆಗಿದೆ. ಅದರ ಬದಲಿಗೆ ಶತ್ರು ದೇಶ ಪ್ರೇರಿತ ಸಿಎಎ–ವಿರೋಧಿ ಚಳುವಳಿಗಾರರ ಮತ್ತು ಜಿಹಾದಿ–ನಗರ ನಕ್ಸಲ್ ಗಳ ಕೂಟವೇ ಈ ಹಿಂಸಾಚಾರಗಳಿಗೆ ಕಾರಣವೆಂಬ ಎಂಬ ಗೃಹ ಸಚಿವಾಲಯ ನಿರ್ದೇಶಿತ ಕಟ್ಟುಕತೆಯನ್ನು ದೇಶದ ಉನ್ನತ ಕಾನೂನು ಅಧಿಕಾರಿಗಳು ಕೋರ್ಟಿನ ದೇಶದ ಮುಂದೊಡ್ಡಲಿದ್ದಾರೆ. ಇದು ಈ ಕುರಿತು ಬೃಂದಾ ಕಾರಟ್ ಅವರ ವಿಶ್ಲೇಷಣೆ.

ಅನುವಾದ: ಲವಿತ್ರ ವಿ.
(ಕೃಪೆ: ಎನ್.ಡಿ.ಟಿ.ವಿ.ಕಾಂ)

ಕೋಮು ಹಿಂಸಾಚಾರದ ಪ್ರಕರಣಗಳಲ್ಲಿ ನ್ಯಾಯಾಂಗ ಪ್ರಕ್ರಿಯೆಗೆ ತಮಗೆ ಬೇಕಾದಂತಹ ರೂಪ ಕೊಡಲು ದೆಹಲಿಯಲ್ಲಿ ಕೇಂದ್ರದ ರಾಜಕೀಯ ಮಧ್ಯಪ್ರವೇಶದ ಮಟ್ಟವನ್ನು ಹೆಚ್ಚಿಸಲಾಗುತ್ತಿದೆ. ದೆಹಲಿ ಪೊಲೀಸರ ಪರವಾಗಿ ಪ್ರಾಸಿಕ್ಯೂಷನ್ ವಕೀಲರ ಸಮಿತಿಗೆ ಸಂಬಂಧಿಸಿದ ದೆಹಲಿ ಸರ್ಕಾರದ ಆದೇಶವನ್ನು ಲೆಫ್ಟಿನೆಂಟ್ ಗವರ್ನರ್ ಮಿಂಚಿನ ವೇಗದಲ್ಲಿ ರದ್ದುಪಡಿಸಿದ್ದು ಅಂತಹ ಒಂದು ಹೆಜ್ಜೆ. ಪೊಲೀಸರು ಸೂಚಿಸಿದ ವಕೀಲರ ಸಮಿತಿಯನ್ನು ತಿರಸ್ಕರಿಸುವ ನಿರ್ಧಾರಕ್ಕೆ ದೆಹಲಿ ಸರ್ಕಾರ ಬಲವಾದ ಕಾರಣಗಳನ್ನು ನೀಡಿತ್ತು. ಇವರೆಲ್ಲರೂ ಸೊಲಿಸಿಟರ್ ಜನರಲ್ ತುಷಾರ್ ಮೆಹ್ತಾ ನೇತೃತ್ವದ ಕೇಂದ್ರ ಸರ್ಕಾರದ ಪರವಾಗಿ ನಿಂತಿರುವ ಸಲಹೆಗಾರರಾಗಿದ್ದಾರೆ. ದೆಹಲಿಯಲ್ಲಿ ಸಾಕಷ್ಟು ಉತ್ತಮ ವಕೀಲರು ಇದ್ದಾಗಲೂ ಅವರ ಅವಶ್ಯಕತೆ ಏನು? "ಅಪರಾಧ ನ್ಯಾಯ ವ್ಯವಸ್ಥೆಯ ತತ್ವಗಳನ್ನು ಹಾಗೂ ತನಿಖೆ ಮತ್ತು ಪ್ರಾಸಿಕ್ಯೂಶನ್ (ಕಾನೂನು ಕ್ರಮ) ಗಳು ಸ್ವತಂತ್ರವಾಗಿರುವುದನ್ನು ಖಚಿತಪಡಿಸಿಕೊಳ್ಳುವ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು, ದೆಹಲಿ ಗಲಭೆಗೆ ಸಂಬಂಧಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ದೇಶದ ಅತ್ಯುತ್ತಮ ವಕೀಲರ ನಿಷ್ಪಕ್ಷಪಾತ ಸಮಿತಿಯನ್ನು ರಚಿಸುವಂತೆ ದೆಹಲಿ ಕ್ಯಾಬಿನೆಟ್ ಗೃಹ ಇಲಾಖೆಗೆ ನಿರ್ದೇಶನ ನೀಡಿದೆ" ಎಂದು ದೆಹಲಿ ಸಚಿವ ಸಂಪುಟ ಹೇಳಿದೆ.

ದೆಹಲಿ ಸರಕಾರದ ಈ ನಿರ್ಣಯದ ಹಿಂದಿರುವ ಕಾರಣಗಳ ಕುರಿತು ಯಾವುದೇ ತಕರಾರು ಇಲ್ಲ. ಆದರೂ ಲೆಫ್ಟಿನೆಂಟ್ ಗವರ್ನರ್ ತಮ್ಮ ಆದೇಶದ ಮೂಲಕ ದೆಹಲಿ ಪೊಲೀಸರು ಆಯ್ಕೆ ಮಾಡಿದ ಪಟ್ಟಿಯನ್ನು ಪುನಃ ಸ್ಥಾಪಿಸಿದ್ದಾರೆ. ದೆಹಲಿ ಸರಕಾರದ ನಿರ್ಣಯದ ರದ್ದತಿ ಮತ್ತು ಅದಕ್ಕೆ ತೋರಿಕೆಯಾಗಿಯಾದರೂ ಅವರು ಯಾವುದೇ ವಿವರಣೆ ಕೊಡದಿರುವುದು ಪ್ರಶ್ನಾರ್ಹವಾಗಿದೆ. ದೆಹಲಿ ಪೊಲೀಸರು ಕೇಂದ್ರ ಗೃಹ ಸಚಿವಾಲಯದ ವ್ಯಾಪ್ತಿಯಲ್ಲಿದ್ದಾರೆ. 'ವಿಶ್ವಾಸಾರ್ಹ' ನ್ಯಾಯಾಂಗ ಅಧಿಕಾರಿ ಸಾಲಿಸಿಟರ್ ಜನರಲ್ ಈ ಪ್ರಕರಣಗಳಲ್ಲಿ ದೆಹಲಿ ಪೊಲೀಸರ ಕಾನೂನು ರಣನೀತಿಯನ್ನು ಮುನ್ನಡೆಸುವಂತೆ ಮಾಡುವ ಆದೇಶಗಳು ಮೇಲಿನಿಂದ, ಅಂದರೆ ಭಾರತದ ಗೃಹ ಸಚಿವ ಅಮಿತ್ ಶಾ ಅವರಿಂದಲೇ ಬಂದಿರಬೇಕು. ಪ್ರಕರಣದ ಕಾನೂನು ಕ್ರಮ ನ್ಯಾಯಯುತವಾಗಿ ನಡೆದು ನ್ಯಾಯ ಕೊಡಿಸಬೇಕು ಎಂಬ ಕಾಳಜಿ ಇಲ್ಲದ, ಆದರೆ ಸತ್ಯವನ್ನು ಮರೆಮಾಚುವ ಕಟ್ಟುಕತೆಗಳನ್ನು ರಕ್ಷಿಸುವ ಬದ್ಧತೆ ಇರುವ ವಕೀಲರ ತಂಡದ ನಿರ್ಮಾಣದ ಗುರಿ ಇದರ ಹಿಂದಿದೆ ಎಂಬುದು ಸರ್ವವಿದಿತ.

ಎರಡೂ ಸಮುದಾಯಗಳು ಹಿಂಸಾಚಾರದಲ್ಲಿ ಬಳಲಿದವು. ಯಾವುದೇ ಜೀವಹಾನಿಯು ದುರಂತವೇ ಮತ್ತು ಖಂಡನೀಯವೇ. ಎರಡೂ ಕಡೆ ಸಶಸ್ತ್ರ ಅಪರಾಧಿಗಳಿದ್ದಾರೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಆದರೆ ಒಂದು ಸಮುದಾಯ ತೀವ್ರ ಹಿಂಸಾಚಾರದ ಪ್ರಮುಖ ಗುರಿಯಾಗಿತ್ತು ಎನ್ನುವ ವಾಸ್ತವವನ್ನು ಮರೆಯಬಾರದು.

ಹಿಂಸಾಚಾರದ ಸಮಯದಲ್ಲಿ ಆದ ಸಾವು–ನೋವುಗಳ ಮತ್ತು ಹಾನಿಯ ಕುರಿತು ಹಾಕಲಾದ ಹಲವು ಅಹವಾಲುಗಳಿಗೆ ಒಟ್ಟಾರೆ ಪ್ರತಿಕ್ರಿಯೆಯಾಗಿ, ಜುಲೈ 13 ರಂದು ದೆಹಲಿ ಪೊಲೀಸರು ಅಧಿಕೃತ ಅಂಕಿಅಂಶಗಳನ್ನು ನೀಡಿದ್ದಾರೆ. ಇವುಗಳಲ್ಲಿ ಹೆಚ್ಚಿನವುಗಳಲ್ಲಿ ಸಮುದಾಯವಾರು ಮಾಹಿತಿ ನೀಡಲಾಗಿದೆ. 53 ಜನ ಸಾವನ್ನಪ್ಪಿದ್ದಾರೆ, ಅದರಲ್ಲಿ 40 ಜನ ಮುಸ್ಲಿಮರು ಮತ್ತು 13 ಜನ ಹಿಂದೂಗಳು. ಗಾಯಗೊಂಡ 473 ನಾಗರಿಕರಲ್ಲಿ 288 ಜನ ಮುಸ್ಲಿಮರು ಮತ್ತು 185 ಜನ ಹಿಂದೂಗಳು. ಅಂಗಡಿಗಳ ಹಾನಿಯಲ್ಲಿ, 173 ಅಂಗಡಿಗಳು ಮುಸ್ಲಿಮರಿಗೆ ಸೇರಿದ್ದವಾದರೆ 42 ಅಂಗಡಿಗಳು ಹಿಂದೂಗಳಿಗೆ ಸೇರಿವೆ. 13 ಮಸೀದಿಗಳಿಗೆ ಮತ್ತು 6 ಮಂದಿರಗಳಿಗೆ ಹಾನಿಯಾಗಿದೆ. 751 ಎಫ್ಐಆರ್ ಗಳು ದಾಖಲಾಗಿವೆ. ಜುಲೈ 13 ರ ವೇಳೆಗೆ ಒಟ್ಟು 1430 ಜನರ ಬಂಧನವಾಗಿದೆ. ಈ ಮೊದಲು, ಬಂಧಿತರ ವಿವರಗಳನ್ನು ನೀಡಿ, ದೆಹಲಿ ಪೊಲೀಸ್ ಪಿ.ಆರ್.ಓ (ಸಾರ್ವಜನಿಕ ಸಂಪರ್ಕ ಅಧಿಕಾರಿ), 700 ಮುಸ್ಲಿಮರು ಮತ್ತು 630 ಹಿಂದೂಗಳನ್ನು ಬಂಧಿಸಲಾಗಿದೆ ಎಂದು ಹೇಳಿದ್ದಾರೆ. ಪೊಲೀಸರು 'ನಿಷ್ಪಕ್ಷಪಾತ'ದಿಂದ ವರ್ತಿಸಿದ್ದಾರೆ ಎಂದು ತೋರಿಸಲು ಅವರು ಈ ಅಂಕಿಅಂಶಗಳನ್ನು ಉಲ್ಲೇಖಿಸಿದ್ದಾರೆ. ಆದರೆ ಒಂದು ಸರಳ ನೇರ ಪ್ರಶ್ನೆ : ಹಿಂಸೆಗೆ ಆಹುತಿಯಾದವರಲ್ಲಿ ಹೆಚ್ಚಿನವರು ಮುಸ್ಲಿಮರಾಗಿದ್ದರೆ, ಅದೇ ಸಮುದಾಯದಿಂದ ಬಂಧನದ ಸಂಖ್ಯೆ ಹೆಚ್ಚು ಹೇಗೆ? ಈಗ ಗೃಹ ಸಚಿವಾಲಯ ನಿರ್ದೇಶಿತ ಹಿಂಸಾಚಾರದ 'ಕತೆ'ಯನ್ನು ದೇಶದ ಉನ್ನತ ಕಾನೂನು ಅಧಿಕಾರಿಗಳು ಮುಂದೊಡ್ಡಲಿರುವಾಗ, ಈ ಪ್ರಶ್ನೆಗಳಿಗೆ ಉತ್ತರ ಹೇಳುವವರು ಯಾರು?

ಚಾರ್ಜ್‌ಶೀಟ್‌ಗಳು ಮತ್ತು ದೆಹಲಿ ಪೊಲೀಸರ ಪ್ರತಿಕ್ರಿಯೆಗಳಿಂದ ಪಡೆದ ಈ 'ಕತೆ'ಯ ಕೆಲವು ಉದಾಹರಣೆಗಳು ಇಲ್ಲಿವೆ:

* ಇಲ್ಲವಲ್ಲ! ಹಿಂಸಾಚಾರವನ್ನು ಪ್ರಚೋದಿಸುವ ಬಿಜೆಪಿ ನಾಯಕರ ದ್ವೇಷ ಭಾಷಣಗಳಿಂದ ಸಿಎಎ ವಿರೋಧಿ ಪ್ರತಿಭಟನಾ ತಾಣಗಳ ಮೇಲಿನ ದಾಳಿ ಮತ್ತು ಈಶಾನ್ಯ ದೆಹಲಿಯ ಘರ್ಷಣೆಗಳು ಶುರುವಾಗಲಿಲ್ಲ.
* ಇಲ್ಲವಲ್ಲ! ಬಿಜೆಪಿ ಮುಖಂಡರು ಮಾಡಿದ ಯಾವುದೇ ಭಾಷಣಗಳು ಮತ್ತು ನಡೆದ ಹಿಂಸಾಚಾರದ ನಡುವೆ ಸಂಬಂಧ ಇಲ್ಲಿಯವರೆಗೆ ಪೋಲಿಸರಿಗೆ ಕಂಡಿಲ್ಲ. ಆದ್ದರಿಂದ ಇದುವರೆಗೂ ಈ ಕುರಿತು ಎಫ್ಐಆರ್ ಕೂಡ ದಾಖಲಾಗಿಲ್ಲ.
* ಇಲ್ಲವಲ್ಲ! ಅಲ್ಪಸಂಖ್ಯಾತ ಸಮುದಾಯದ ಮೇಲೆ ಏಕಪಕ್ಷೀಯ ದಾಳಿಯಾಗಿ 24 ಗಂಟೆಗಳ ಒಳಗೆ ವಿಕೋಪಕ್ಕೆ ಹೋಗಿದ್ದ ಹಿಂಸಾಚಾರದಲ್ಲಿ ಯಾವುದೇ ಪೊಲೀಸ್ ಪಾಲ್ಗೊಳ್ಳುವಿಕೆ ಇಲ್ಲ.
* ಇಲ್ಲವಲ್ಲ! ಕೋರ್ಟಿನಲ್ಲಿ ದೆಹಲಿ ಪೋಲಿಸ್ ತನ್ನ ಪೋಲೀಸರಿಗೆ ಕ್ಲೀನ್ ಚಿಟ್ ಕೊಟ್ಟಿದ್ದರಲ್ಲಿ ಯಾವುದೇ ತಪ್ಪಿಲ್ಲ. ಪೋಲಿಸರೇ ಕಲ್ಲೆಸೆಯುತ್ತಿರುವ ಮತ್ತು ಅಲ್ಪಸಂಖ್ಯಾತರ ಮೇಲಿನ ದಾಳಿಗಳಿಗೆ ಪ್ರಚೋದಿಸುವ ವಿಡಿಯೋ ಅಥವಾ ಮುಸ್ಲಿಂ ಯುವಕರನ್ನು ಥಳಿಸಿದ ಮತ್ತು ಬಲವಂತವಾಗಿ ರಾಷ್ಟ್ರಗೀತೆ ಹಾಡುವಂತೆ ಮಾಡುವ ವಿಡಿಯೊಗಳು ಬಹಿರಂಗವಾದರೆ ಏನಂತೆ? ಅಷ್ಟಕ್ಕೂ ಕೇವಲ 108 ಪೊಲೀಸರು ಗಾಯಗೊಂಡಿದ್ದಾರೆ.
* ಇಲ್ಲವಲ್ಲ! ಚಾರ್ಜ್‌ಶೀಟ್‌ಗಳನ್ನು ಬರೆಯುವುದರಲ್ಲಿ ಅಥವಾ ಮಾಡಿದ ಬಂಧನಗಳಲ್ಲಿ ಯಾವುದೇ ಪಕ್ಷಪಾತವಿಲ್ಲ.
* ಇಲ್ಲವಲ್ಲ! ಹೆಚ್ಚಿನ ಚಾರ್ಜ್‌ಶೀಟ್‌ಗಳಲ್ಲಿ ದಾಖಲಿಸಿದಂತೆ ಮುಸ್ಲಿಮರ ಕೊಲೆಯಾಗಿದ್ದು ಸಹಜ "ಪ್ರತೀಕಾರ"ದಿಂದ ಎಂದು ಹೇಳುವುದು ಪಕ್ಷಪಾತವಲ್ಲ. ಅನೇಕ ಚಾರ್ಜಶೀಟ್ ಗಳಲ್ಲಿ ದಾಖಲಿಸಿದಂತೆ ಈ ಮುಂದಿನ ಹೇಳಿಕೆಗಳ ಮೂಲಕ ಮುಸ್ಲಿಮರ ಕೊಲೆಯ ಸಮರ್ಥನೆ ಮಾಡುವುದು ತಪ್ಪಲ್ಲ. ಉದಾಹರಣೆಗೆ, "ಹಿಂದೂಗಳು ರೋಷದಿಂದ ಕುದಿಯುತ್ತಿದ್ದರು", "ಹಿಂದೂಗಳ ಮೇಲಿನ ದಾಳಿ ಹಾಗೂ ಹಾನಿಯ ಕಥೆಗಳು", "ಅತೀ ಹೆಚ್ಚು ಹಿಂದೂಗಳ ಪ್ರಾಣಹಾನಿ ಮತ್ತು ಆಸ್ತಿಪಾಸ್ತಿ ಹಾನಿಯಾಗಿದೆ" "ಗಲಭೆಯಿಂದಾಗಿ ಅವರು ಮುಸ್ಲಿಮರ ಮೇಲೆ ಸಿಟ್ಟಾಗಿದ್ದರು" ಇತ್ಯಾದಿ.
* ಇಲ್ಲವಲ್ಲ! ಮುಸ್ಲಿಮರ ಹತ್ಯೆಗಳು ಮತ್ತು ಹಿಂಸಾಚಾರಕ್ಕೆ ಅವಕಾಶ ಮಾಡಿಕೊಡಲು ಪೊಲೀಸರಿಂದ ಯಾವುದೇ ಪಿತೂರಿ ನಡೆದಿಲ್ಲ. ಇಬ್ಬರು ಸಹೋದರರಾದ ಹಶೀಮ್ ಮತ್ತು ಅಮೀರ್‌ನನ್ನು ಕೊಂದ ಒಂದು ನಿರ್ದಿಷ್ಟ ಪ್ರಕರಣದಲ್ಲಿ ಹೊರ ಬಂದ ವಾಸ್ತವಾಂಶಗಳಿಂದ ಇಂತಹ ಪಿತೂರಿ ಇತ್ತು ಎಂಬುದು ಕಂಡರೆ ಏನಂತೆ?! ಫೆಬ್ರವರಿ 24 ರಿಂದ ಫೆಬ್ರುವರಿ 26 ರವರೆಗೆ ಜೊಹ್ರಿಪುರ್ ಪುಲಿಯಾ ಪ್ರದೇಶದಲ್ಲಿ "ಜೈ ಶ್ರೀ ರಾಮ್" ಎಂದು ಕೂಗುತ್ತಿರುವ ದೊಂಬಿಕೋರ ಗುಂಪು ದಾರಿಹೋಕರನ್ನು ಪರಿಶೀಲಿಸಿ ಮುಸ್ಲಿಂ ಎಂದು ಗೊತ್ತಾದಾಗ ಕೆಟ್ಟದಾಗಿ ಥಳಿಸುತ್ತಿತ್ತು. ಸಾಕ್ಷಿಗಳು, ಅದರಲ್ಲೂ ಹಲವು ಹಿಂದೂಗಳು, ತಮ್ಮನ್ನು ಮುಸ್ಲಿಮರು ಹೌದೋ ಅಲ್ಲವೋ ಎಂದು ಕೇಳಿದರು; ಇದು ಸತತವಾಗಿ ನಡೆಯುತ್ತಿದೆ ಎಂದು ಪದೇ ಪದೇ ಪೋಲಿಸರಿಗೆ ಫೋನು ಮಾಡಿದರೂ ಪೋಲಿಸರು ಅದಕ್ಕೆ ಪ್ರತಿಕಿಯಿಸಲೂ ಇಲ್ಲ ಅಥವಾ ಸ್ಥಳಕ್ಕೆ ಭೇಟಿಯೂ ನೀಡಲಿಲ್ಲ, ಎಂಬ ಅಂಶ ತಿಳಿದು ಬಂದಿದೆ. ಆದರೇನಂತೆ? ಫೆಬ್ರವರಿ 25 ರ ಸಂಜೆ 4:30 ರಿಂದ ಫೆಬ್ರವರಿ 26 ರ ರಾತ್ರಿ 10:30 ರ ವರೆಗೆ ಅಲ್ಲಿನ ದೊಂಬಿಕೋರರಿಗೆ ಪೊಲೀಸರು ನೀಡಿದ



ಪುಟ 10 ಕ್ಕೆ

ನಮ್ಮ ಐಟಿ ಮತ್ತು ದೂರಸಂಪರ್ಕ ಸಚಿವರು ಒಂದು ಕಡೆ ನಮ್ಮ 'ದಿಟ್ಟ ಟಿಕ್ ಟಾಕ್ ನಿಷೇಧ'ದಿಂದ ಸ್ಫೂರ್ತಿಗೊಂಡ ಅಮೆರಿಕದ ಅಧ್ಯಕ್ಷ ಟ್ರಂಪ್ ನಮ್ಮ ಕ್ರಮಗಳನ್ನು ಅನುಸರಿಸುತ್ತಿದ್ದಾರೆ ಎಂದು ತಮ್ಮ ಬೆನ್ನು ತಾವೇ ತಟ್ಟಿಕೊಂಡಿದ್ದಾರೆ. ಆದರೆ ಅಧ್ಯಕ್ಷ ಟ್ರಂಪ್ ಮಾಡಿದಾದ್ದರೂ ಏನು? ಅಮೆರಿಕದ ನಾಗರಿಕರ ಮತ್ತು ಕಂಪನಿಗಳ ದತ್ತಾಂಶವನ್ನು ದೇಶದಲ್ಲೇ ಶೇಖರಿಸಿ ನಿಭಾಯಿಸುವ ಯಾವುದೇ ಅಮೆರಿಕದ ಕಂಪನಿ 'ಟಿಕ್ ಟಾಕ್' ಆಪ್ ನ್ನು ನಿಭಾಯಿಸುವ 'ಬೈಟ್ ಡಾನ್ಸ್' ಕಂಪನಿಯನ್ನು ಖರೀದಿ ಮಾಡದಿದ್ದರೆ ಸೆಪ್ಟೆಂಬರ್ 15ರೊಳಗೆ ಅದರ ಅಮೆರಿಕದ ನಿರ್ವಹಣೆಯನ್ನು ಮುಚ್ಚಲಾಗುವುದು ಅಂತ. ಆಗ ಅಮೆರಿಕದ ದೈತ್ಯ ಕಂಪನಿ ಮೈಕ್ರೋಸಾಫ್ಟ್ 'ಟಿಕ್ ಟಾಕ್'ನ ಖ್ಯಾತಿಯ ಬೈಟ್ ಡಾನ್ಸ್ ಕಂಪನಿಯನ್ನು ಖರೀದಿಸಲು ಮುಂದೆ ಬಂದಿದೆ. ಈ ನಡುವೆ ಬೈಟ್ ಡಾನ್ಸ್ ಖರೀದಿಗೆ ಪೈಪೋಟಿ ಆರಂಭವಾಗಿದ್ದು ಇನ್ನೊಂದು ದೈತ್ಯ ಸಾಫ್ಟ್ ವೇರ್ ಕಂಪನಿ ಒರೆಕಲ್ ಸಹ ಅದನ್ನು ಖರೀದಿಸಬಹುದು ಎಂಬ ಸುದ್ದಿ ಹರಡಿದೆ. ಇದು ಆದರೆ ಬಹುಶಃ 'ಟಿಕ್ ಟಾಕ್' ಭಾರತಕ್ಕೆ ವಾಪಸು ಬರುತ್ತದೆ. 'ಟಿಕ್ ಟಾಕ್' ನ್ನು ಬೈಟ್ ಡಾನ್ಸ್ ನಿಭಾಯಿಸುವ ಬದಲು ಮೈಕ್ರೋಸಾಫ್ಟ್ ಅಥವಾ ಒರೆಕಲ್ ನಿಭಾಯಿಸುತ್ತದೆ. ಭಾರತದ ಗ್ರಾಹಕರ ದತ್ತಾಂಶವನ್ನು ಚೀನಾದಲ್ಲಿ ಶೇಖರಿಸುವ ಬದಲು ಬಹುಶಃ ಅಮೆರಿಕದಲ್ಲೋ ಇನ್ನೆಲ್ಲೋ ಅದಕ್ಕೆ ಸುಗಮವಾಗುವಲ್ಲಿ ಇಡಬಹುದು. ಯಾಕೆಂದರೆ ನಮ್ಮ ದತ್ತಾಂಶ ಕಾನೂನು ಅಂತಹ ನಿಬಂಧನೆಗಳನ್ನು ಯಾವುದೇ (ವಿದೇಶೀ ಅಥವಾ ಸ್ವದೇಶಿ) ಕಂಪನಿಗಳ ಮೇಲೆ ವಿಧಿಸುವುದಿಲ್ಲ.ಮೋದಿ ಸರಕಾರ ಸಾಧಿಸಿದ್ದು ಏನು? ಚೀನಾದ ಸಣ್ಣ ಕಂಪನಿಯೊಂದರ ಬದಲು ಮಣಿಸಲು ಕಷ್ಟಸಾಧ್ಯವಾದ ಅಮೆರಿಕನ್ ದೈತ್ಯ ಕಂಪನಿ ನಮ್ಮ ನಾಗರಿಕರ ಖಾಸಗಿ ದತ್ತಾಂಶಗಳನ್ನು ಚೀನಾದ ಬದಲು ಬಹುಶಃ ಅಮೆರಿಕದಲ್ಲಿ ಇಡಬಹುದು, ಅಷ್ಟೇ!

——ವಸಂತರಾಜ ಎನ್.ಕೆ.——

ಟಿಕ್ ಟಾಕ್ ಹೋಯ್ತು .. .ಡುಂಡುಂ... ಮೈಕ್ರೋಸಾಫ್ಟ್ ಬಂತು.. ..ಡುಂಡುಂ!!


ಭಾರತ ಸರಕಾರ ಇತ್ತೀಚೆಗೆ ಟಿಕ್ ಟಾಕ್, ವಿ ಚಾಟ್, ಶೇರ್–ಇಟ್ ಸೇರಿದಂತೆ 59 ಜನಪ್ರಿಯ 'ಚೀನೀ' ಆಪ್ (app) ಗಳನ್ನು ನಿಷೇಧಿಸಿದೆ. ಅಲ್ಲದೆ ಹುವಾವೇ, ಝಿ.ಟಿ.ಇ ಮುಂತಾದ ಚೀನಿ ಕಂಪನಿಗಳ 3ಜಿ ಮತ್ತು 4ಜಿ ದೂರಸಂಪರ್ಕ ಉಪಕರಣಗಳ ಬಳಕೆಯನ್ನು ನಿಷೇಧಿಸಿದೆ. ಎರಡೂ ನಿಷೇಧಗಳಿಗೆ 'ದೇಶದ ಏಕತೆ ಮತ್ತು ಸಾರ್ವಭೌಮತೆಗಳ ರಕ್ಷಣೆ'ಗೆ ಹಾಗೂ 'ಪ್ರಭುತ್ವದ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಭದ್ರತೆ'ಗೆ ಎನ್ನಲಾಗಿದೆ. 'ಚೀನಿ' ಆಪ್ (app) ಗಳು ದೇಶದ ಜನತೆಯ ದತ್ತಾಂಶ(ಡಾಟಾ)ಗಳನ್ನು ಹೊರಗೆ ಒಯ್ಯುವ ಮೂಲಕ ಭಾರತದ ನಾಗರಿಕರ ಖಾಸಗಿತನದ ಹರಣ ಮತ್ತು ಖಾಸಗಿ ದತ್ತಾಂಶದ ದುರ್ಬಳಕೆಯ ಕಾರಣವನ್ನೂ ಕೊಡಲಾಗಿದೆ. ಈ ನಿಷೇಧಗಳು 'ಆತ್ಮ ನಿರ್ಭರತೆ' ಹೆಚ್ಚಿಸುವ ಕ್ರಮಗಳೂ ಎಂದು ಹೇಳಲಾಗಿದೆ. ಈ ನಿಷೇಧ ಕ್ರಮಗಳು ರಾಷ್ಟ್ರೀಯ/ಅಂತರ್ರಾಷ್ಟ್ರೀಯ ಕಾನೂನುಗಳಿಗೆ ಬದ್ಧವಾಗಿವೆಯೇ? ವಿದೇಶೀ ಬಂಡವಾಳಕ್ಕೆ 'ವ್ಯವಹಾರದ ಸುಗಮತೆ' ಖಾತರಿಗೊಳಿಸುವ ನೀತಿಗೆ ವಿರುದ್ಧವಲ್ಲವೇ? ಈ ಆಪ್/ಉಪಕರಣಗಳು ಸರಕಾರ ಹೇಳುತ್ತಿರುವ 'ಅಪಾಯ'ಗಳನ್ನು ನಿಜವಾಗಿಯೂ ಒಡ್ಡುತ್ತವೆಯೇ ಎಂಬ ಪ್ರಶ್ನೆಗಳನ್ನು ಬದಿಗಿಟ್ಟರೂ, ನಮ್ಮ ಸರಕಾರಗಳ ಸಾಫ್ಟ್‌ವೇರ್, ಆಪ್, ದತ್ತಾಂಶ, ಐಟಿ ಮತ್ತು ದೂರಸಂಪರ್ಕ ಸೇವೆ, ವಿದೇಶೀ ಬಂಡವಾಳ ಹೂಡಿಕೆ, ಖಾಸಗಿತನ ಇತ್ಯಾದಿಗಳ ಕುರಿತು ಈ ಸರಕಾರದ ಧೋರಣೆ ನೀತಿಗಳ ಹಿನ್ನೆಲೆಯಲ್ಲಿ ಇಂತಹ ನಿಷೇಧ ಕ್ರಮಗಳ ಸುಸಂಬದ್ಧತೆಯ ಬಗ್ಗೆ ನೋಡೋಣ.

ಉಚಿತ ಸೇವೆ = ನಿಮ್ಮನ್ನು ಮಾರಲಾಗುತ್ತಿದೆ!

ಆಪ್ ಗಳ ಕುರಿತು (ಅವು ಚೀನಿ, ಜಾಪಾನಿ, ಇಂಗ್ಲಿಸ್ತಾನಿ, ಹಿಂದುಸ್ತಾನಿ ಯಾವುದೇ ಇರಲಿ) ಹೇಳುವುದಾದರೆ ಅವುಗಳ 'ವ್ಯವಹಾರ ಮಾದರಿ'ಯೇ (ಬಿಸಿನೆಸ್ ಮಾಡೆಲ್') ಖಾಸಗಿತನ, ದತ್ತಾಂಶಗಳ ಭದ್ರತೆ, ದೇಶಗಳ ಸಾರ್ವಭೌಮತೆ ಇವುಗಳಿಗೆ ವಿರುದ್ಧವಾಗಿರುವಂತಹುದು. ಇವುಗಳಲ್ಲಿ ಹೆಚ್ಚಿನವು ತಮ್ಮ 'ಸೇವೆ'ಗಳನ್ನು ಉಚಿತವಾಗಿ ಕೊಡುತ್ತವೆ. ಆದರೆ ಕೋಟ್ಯಾಂತರ ಡಾಲರುಗಳ ವ್ಯವಹಾರ ಮಾಡುತ್ತವೆ, ಲಾಭ ಗಳಿಸುತ್ತವೆ. ಈ ಕಂಪನಿಗಳಿಗಳಿಗೆ ಈ



ಹಣ, ಲಾಭ ಎಲ್ಲಿಂದ ಬರುತ್ತವೆ? ಒಂದೋ ನಿಮಗೆ 'ಉಚಿತ ಸೇವೆ'ಯೊಂದಿಗೆ ಬಲವಂತವಾಗಿ ಉಣಿಸುವ ಜಾಹೀರಾತುಗಳಿಂದ ಅಥವಾ ನಿಮ್ಮ ಖಾಸಗಿ ಮಾಹಿತಿಗಳನ್ನು ಇನ್ಯಾವುದೋ ಕಂಪನಿಗೆ ಮಾರುವುದರಿಂದ. ಇದಕ್ಕಾಗಿ 'ಉಚಿತ ಸೇವೆ'ಯ ಜತೆ ಆ ಸೇವೆಗೆ ಅಗತ್ಯವಿಲ್ಲದ ಸಂಬಂಧವಿಲ್ಲದ ಎಲ್ಲ ಮಾಹಿತಿಗಳನ್ನು ಕೊಡಲು ಕೇಳುತ್ತದೆ. ಇದನ್ನು ಯಾವುದೇ ರೀತಿಯಲ್ಲಿ ದುರ್ಬಳಕೆ ಮಾಡುವುದಿಲ್ಲ, ಬೇರೆಯವರಿಗೆ ಕೊಡುವುದಿಲ್ಲ ಎಂಬಿತ್ಯಾದಿ ನೂರೆಂಟು ಪೊಳ್ಳು ಆಶ್ವಾಸನೆಗಳುಳ್ಳ ಯಾರೂ ಓದದ ಓದಿದರೂ ಅರ್ಥವಾಗದ ಕಾನೂನು–ಭಾಷೆಯಲ್ಲಿ ನಿಮ್ಮ ಕ್ಲಿಕ್ (ಅಥವಾ 'ಹೆಬ್ಬೆಟ್ಟು') ಒತ್ತಿಸಿಕೊಳ್ಳುತ್ತದೆ. ಈ ಮಾಹಿತಿಗಳೇ ಅವುಗಳ ಪ್ರಮುಖ ಆಸ್ತಿ. ಅವುಗಳನ್ನು ತಮ್ಮ ವ್ಯವಹಾರ ಕುದುರಿಸಲು ಬಳಸುವುದು (ದುರ್ಬಳಕೆ ಸೇರಿದಂತೆ) ಮಾರುವುದು ಅಥವಾ ಆಯಾ ಸರಕಾರಗಳು ಸೇರಿದಂತೆ ಇತರ ಕಂಪನಿಗಳಿಗೆ ಮಾರಿಕೊಳ್ಳುವುದು ಮಾಡುತ್ತವೆ. ಇದಕ್ಕಾಗಿಯೇ "ನಿಮಗೆ ನೆಟ್ ನಲ್ಲಿ ಉಚಿತ ಸೇವೆ ಸಿಗುತ್ತಿದ್ದರೆ ಅದರ ಅರ್ಥ ನೀವೇ ಅಥವಾ ನಿಮ್ಮ ಮಾಹಿತಿಯೇ ಅವರ ಉತ್ಪನ್ನ" ಅಂತ ಹೇಳಲಾಗುತ್ತದೆ! ಅವರಿಗೆ ನಿಮ್ಮ ಮಾಹಿತಿ ಕೊಡಲು ಸಿದ್ಧವಿಲ್ಲದಿದ್ದರೆ ನಿಮಗೆ 'ಉಚಿತ ಸೇವೆ' ಸಿಗುವುದಿಲ್ಲ. ಆದರೂ ನಿಮ್ಮ ಮಾಹಿತಿ ಬೇರೆ ಮೂಲಗಳಿಂದ ಅವುಗಳಿಗೆ ಸಿಗುವುದಿಲ್ಲ ಎಂದು ಯಾವುದೇ ಗ್ಯಾರಂಟಿ ಇಲ್ಲ.



ಕಾರ್ಟೂನು ಕೃಪೆ: ಲಿಯು ರೂಯಿ (ಗ್ಲೋಬಲ್ ಟೈಮ್ಸ್)

ಗೂಗಲ್, ಫೇಸ್‌ಬುಕ್, ಮುಂತಾದ ಪ್ರಮುಖವಾಗಿ ನೆಟ್ ಸೇವಾ ಕಂಪನಿಗಳು [illegible] ಕೋಟ್ಯಾಂತರ ಜನ ಬಳಸುವ ಸೇವೆ ಮತ್ತು ಆಪ್ ಗಳಿಂದ ಸಂಗ್ರಹಿಸಿದ ಮಾಹಿತಿಯಿಂದಲೇ. ಈ ಜಾಗತಿಕ ಕಂಪನಿಗಳು ಯಾವ ಮಾಹಿತಿ ಸಂಗ್ರಹಿಸುತ್ತವೆ, ಎಲ್ಲಿ ಶೇಖರಿಸುತ್ತವೆ, ಹೇಗೆ ಯಾವುದಕ್ಕೆ ಬಳಸುತ್ತವೆಎಂಬ ನಿಬಂಧನೆಗೆ ಒಳಪಡುವುದಿಲ್ಲ. ಇವು ಬೇರೆ ದೇಶಗಳಲ್ಲಿ ಸಂಗ್ರಹಿಸುವ ಮಾಹಿತಿಯನ್ನು ತಮ್ಮ ದೇಶದಲ್ಲಿ ಶೇಖರಿಸಿ ಇಡುತ್ತವೆ ಮತ್ತು ತಮ್ಮ ದೇಶದ ಬೇಹುಗಾರಿಕೆ ಮತ್ತು ಸರಕಾರದ ಯಾವುದೇ ಏಜೆನ್ಸಿಗಳಿಗೆ ಕೊಡುತ್ತವೆ. ಅಮೆರಿಕ, ಯುರೋಪಿನ ಕೆಲವು ಸರಕಾರಗಳನ್ನು ಬಿಟ್ಟರೆ ಇತರ ಸರಕಾರಗಳನ್ನು ನಿರ್ಲಕ್ಷ ಮಾಡಬಲ್ಲ, ನಡುಗಿಸಿ ಉರುಳಿಸಬಲ್ಲ, ತಮ್ಮ ಕ್ಷೇತ್ರಗಳಲ್ಲಿ ಅಪಾಯಕಾರಿ ಮಟ್ಟದ ಏಕಸ್ವಾಮ್ಯ ಹೊಂದಿರುವ, ಹಲವು ದೇಶಗಳ ಜಿಡಿಪಿಗಿಂತ ಹೆಚ್ಚು ವಹಿವಾಟು ಹೊಂದಿರುವ, ತಮಗೆ ಅನುಕೂಲಕರ ಶರತ್ತಿಗೆ ಒಪ್ಪಿಸಬಲ್ಲ ಆರ್ಥಿಕ ರಾಜಕೀಯ ಶಕ್ತಿ ಹೊಂದಿವೆ. ಇವುಗಳಲ್ಲಿ ಪ್ರಮುಖವಾಗಿಆಪ್, ಸಾಫ್ಟ್ ವೇರ್, ನೆಟ್ ಸೇವೆ ಒದಗಿಸುವ ಗೂಗಲ್, ಫೇಸ್‌ಬುಕ್, ಅಮೆಜಾನ್, ಮೈಕ್ರೋಸಾಫ್ಟ್, ಆಪಲ್ ಮುಂತಾದವು ಜಗತ್ತಿನ ಅತ್ಯಂತ ಹತ್ತು ದೊಡ್ಡ ಕಂಪನಿಗಳ ಪಟ್ಟಿಯಲ್ಲಿ ಭಾರೀ ತೈಲ, ಬ್ಯಾಂಕುಗಳನ್ನು ಹಿಂದೆ ಹಾಕಿ ಹಲವು ವರ್ಷಗಳಿಂದ ಇವೆ ಎಂದಾಗ ಇವುಗಳ ವಿರಾಟ್ ಶಕ್ತಿ ತಿಳಿಯುತ್ತದೆ. ಇವುಗಳನ್ನು ತೀವ್ರ ನಿಬಂಧನೆಗೊಳಪಡಿಸದೆ ಕೆಲವು ಸೇವೆಗಳನ್ನು ನಿಷೇಧಿಸದೆ, ಕೆಲವು ಚೀನಿ ಕಂಪನಿಗಳ ಆಪ್ ನಿಷೇಧಿಸಿ 'ದೇಶದ ಏಕತೆ ಮತ್ತು ಸಾರ್ವಭೌಮತೆಗಳ ರಕ್ಷಣೆ', 'ಪ್ರಭುತ್ವದ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಭದ್ರತೆ', 'ನಾಗರಿಕರ ಖಾಸಗಿತನ'ದ ರಕ್ಷಣೆ ಮಾಡಿದ್ದೇವೆ ಎಂದು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುವುದು ಬರಿಯ 'ಕೆಟ್ಟ ಜೋಕ್' ಅಷ್ಟೇ.

ಟಿಕ್ ಟಾಕ್ ಹೋಯ್ತು.. ಡುಂ ಡುಂ
ಮೈಕ್ರೋಸಾಫ್ಟ್ ಬಂತು..ಡುಂ ಡುಂ

ಈ ದೈತ್ಯ ಕಂಪನಿಗಳ ಕುರಿತು ಇದು ಬರಿಯ ಆತಂಕವಲ್ಲ, ಊಹಾಪೋಹಗಳಲ್ಲ. ಇವುಗಳ ಅಪಾಯವನ್ನು ಹಲವು ಅಭಿವೃದ್ಧ ದೇಶಗಳಲ್ಲಿ ನಾಗರಿಕ ಸಮಾಜಗಳು ಮನಗಂಡಿದೆ ಮತ್ತು ಅದರ ವಿರುದ್ಧ ಹೋರಾಡುತ್ತಿವೆ. ತಮ್ಮ ಸರಕಾರಗಳು ಈ ದೈತ್ಯ ಕಂಪನಿಗಳ ಮೇಲೆ ನಿಬಂಧನೆ ಹೇರುವಂತೆ ಸರಕಾರಗಳ ಮೇಲೆ ಒತ್ತಡ ಹಾಕುತ್ತಿವೆ. ಫೇಸ್‌ಬುಕ್ ತನ್ನ ಗ್ರಾಹಕರ ಮಾಹಿತಿಯನ್ನು ಕ್ಯಾಂಬಿಜ್ ಅನಾಲಿಟಿಕಾ ಮೂಲಕ ಅಮೆರಿಕದ ಚುನಾವಣೆಗಳಲ್ಲಿ ಕೆಲವು ಪಕ್ಷಗಳ ಪರವಾಗಿ ಭಾರೀ ಹಣಕ್ಕಾಗಿ ದುರ್ಬಳಕೆ ಮಾಡಿ ರಾಜಕೀಯ ಪ್ರಕ್ರಿಯೆಯಲ್ಲಿ ಮೂಗುತೂರಿಸಿದೆ ಎಂಬ ಆಪಾದನೆಯ ತನಿಖೆ ಎದುರಿಸುತ್ತಿದೆ. (ಚೋದ್ಯದ ವಿಷಯವೆಂದರೆ ಇದರ ಪ್ರಯೋಜನ ಪಡೆದ ಟ್ರಂಪ್ ಚೀನಾ ಅಮೆರಿಕದ ಚುನಾವಣೆಗಳಲ್ಲಿ ಮೂಗು ತೂರಿಸುತ್ತಿದೆ ಎಂದು ಆಪಾದಿಸಿದ್ದಾರೆ) ಈ ದೈತ್ಯ ಕಂಪನಿಗಳು ಅಮೆರಿಕ ಮತ್ತು ಯುರೋಪಿಯನ್ ಕೂಟದ ಸಾರ್ವಭೌಮತೆ, ಭದ್ರತೆ, ಖಾಸಗಿತನದ ರಕ್ಷಣೆ ಮಾಡುವ ಹಲವು ಕಾನೂನುಗಳನ್ನು ಉಲ್ಲಂಘಿಸಿವೆ ಎಂಬ ಆಪಾದನೆಗಳ ತನಿಖೆಗೆ ಒಳಪಟ್ಟಿವೆ. ಅಧ್ಯಕ್ಷ ಚವೇಝ್ ಆಡಳಿತಾವಧಿಯಲ್ಲಿ,ಮೈಕ್ರೋಸಾಫ್ಟ್ ತಾನು ವೆನೆಜುವೇಲಾದ ತೈಲ ಸ್ಥಾವರಗಳ ಜಾಲದಲ್ಲಿ ಪೂರೈಸಿದ ಕಂಪ್ಯೂಟರ್ ಹಾರ್ಡ್ ವೇರ್/ಸಾಫ್ಟ್ ವೇರ್ ನಲ್ಲಿ ಇದಕ್ಕಾಗಿಯೇ ಇಡಲಾಗಿದ್ದ ಹಿಂಬಾಗಿಲ ಮೂಲಕ ಪ್ರವೇಶಿಸಿ ಅವುಗಳನ್ನು ಕೆಲಸ ಮಾಡದಂತೆ ಮಾಡಿ ಬುಡಮೇಲು ಕೃತ್ಯಗಳನ್ನು ನಡೆಸಿದೆ ಎಂದು ಬಹಿರಂಗವಾಗಿತ್ತು. ವೆನೆಜುವೇಲಾದ 'ಸಾರ್ವಭೌಮತೆಯ ರಕ್ಷಣೆ', 'ಪ್ರಭುತ್ವದ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಭದ್ರತೆ'ಗೆ ಮೈಕ್ರೋಸಾಫ್ಟ್ ಭಂಗ ತಂದಿತ್ತು.

ತಮಾಷೆಯ ವಿಷಯವೆಂದರೆ ನಮ್ಮ ಐಟಿ ಮತ್ತು ದೂರಸಂಪರ್ಕ ಸಚಿವರು ಒಂದು ಕಡೆ ನಮ್ಮ 'ದಿಟ್ಟ ಟಿಕ್ ಟಾಕ್ ನಿಷೇಧ'ದಿಂದ ಸ್ಫೂರ್ತಿಗೊಂಡ ಅಮೆರಿಕದ ಅಧ್ಯಕ್ಷ ಟ್ರಂಪ್ ನಮ್ಮ ಕ್ರಮಗಳನ್ನು ಅನುಸರಿಸುತ್ತಿದ್ದಾರೆ ಎಂದು ತಮ್ಮ ಬೆನ್ನು ತಾವೇ ತಟ್ಟಿಕೊಂಡಿದ್ದಾರೆ. ಆದರೆ ಅಧ್ಯಕ್ಷ ಟ್ರಂಪ್ ಮಾಡಿದಾದ್ದರೂ ಏನು? ಅಮೆರಿಕದ ನಾಗರಿಕರ ಮತ್ತು ಕಂಪನಿಗಳ ದತ್ತಾಂಶವನ್ನು ದೇಶದಲ್ಲೇ ಶೇಖರಿಸಿ ನಿಭಾಯಿಸುವ ಯಾವುದೇ ಅಮೆರಿಕದ ಕಂಪನಿ 'ಟಿಕ್ ಟಾಕ್' ಆಪ್ ನ್ನು ನಿಭಾಯಿಸುವ 'ಬೈಟ್ ಡಾನ್ಸ್' ಕಂಪನಿಯನ್ನು ಖರೀದಿ ಮಾಡದಿದ್ದರೆ ಸೆಪ್ಟೆಂಬರ್ 15 ರೊಳಗೆ ಅದರ ಅಮೆರಿಕದ ನಿರ್ವಹಣೆಯನ್ನು ಮುಚ್ಚಲಾಗುವುದು ಅಂತ. ಆಗ ಅಮೆರಿಕದ ದೈತ್ಯ ಕಂಪನಿ ಮೈಕ್ರೋಸಾಫ್ಟ್ 'ಟಿಕ್ ಟಾಕ್'ನ ಖ್ಯಾತಿಯಬೈಟ್ ಡಾನ್ಸ್ ಕಂಪನಿಯನ್ನು ಖರೀದಿಸಲು ಮುಂದೆ ಬಂದಿದೆ. ಹಾಗಾದರೆ 'ಟಿಕ್ ಟಾಕ್'ನ್ನು ನಿಷೇಧಿಸಿ ಮುಚ್ಚುವುದಿಲ್ಲ ಎಂದಿದ್ದಾರೆ ಟ್ರಂಪ್! ಆದರೆ ಮೈಕ್ರೋಸಾಫ್ಟ್ ಖರೀದಿ ಬೆಲೆಯ ಒಂದು ಭಾಗವನ್ನು ಸರಕಾರಕ್ಕೆ ಕೊಡಬೇಕು ಎಂದೂ ಹೇಳಿದ್ದಾರಂತೆ! (ಇದು ಒಳ್ಳೆಯ ಐಡಿಯಾ! ಇದನ್ನು ನಮ್ಮ ಸರಕಾರ ಸಹ ಅನುಸರಿಸವುದೇ?!) ಆದರೆ ಮೈಕ್ರೋಸಾಫ್ಟ್ ಮೊದಲು ಅಮೆರಿಕದ ಸರಕಾರಕ್ಕೆ ಮತ್ತು 'ಟಿಕ್ ಟಾಕ್'ಗೆ ಬರಿಯ ಅಮೆರಿಕದ ಗ್ರಾಹಕರ ವ್ಯವಹಾರ ಸಾಕಾಗುವುದಿಲ್ಲ; ಕನಿಷ್ಟ ಯು.ಕೆ, ಕೆನಡಾ, ನ್ಯೂಜಿಲಾಂಡ್, ಆಸ್ಟ್ರೇಲಿಯ ವ್ಯವಹಾರವನ್ನು ಒಳಗೊಳ್ಳಬೇಕು ಎಂದು ಷರತ್ತು ಹಾಕಿತ್ತು. ನಂತರ ಅದನ್ನು ಇಡೀ ಜಗತ್ತಿನ 'ಟಿಕ್ ಟಾಕ್' ವ್ಯವಹಾರಕ್ಕೆ ವಿಸ್ತರಿಸಿದೆ. ಮೈಕ್ರೋಸಾಫ್ಟ್ ದೊಡ್ಡ ಮೊತ್ತದ ಆಮಿಷ ತೋರಿಸುತ್ತಿದ್ದು ಬೈಟ್ ಡಾನ್ಸ್ ಜತೆ ಅದರ ವ್ಯವಹಾರ ಕುದುರುವಂತೆ ಕಾಣುತ್ತಿದೆ. ಈ ನಡುವೆ ಬೈಟ್ ಡಾನ್ಸ್ ಖರೀದಿಗೆ ಪೈಪೋಟಿ ಆರಂಭವಾಗಿದ್ದು ಇನ್ನೊಂದು ದೈತ್ಯ ಸಾಫ್ಟ್ ವೇರ್ ಕಂಪನಿ ಒರೆಕಲ್ ಸಹ ಅದನ್ನು ಖರೀದಿಸಬಹುದು ಎಂಬ ಸುದ್ದಿ ಹರಡಿದೆ. ಇದು ಆದರೆ ಬಹುಶಃ 'ಟಿಕ್ ಟಾಕ್' ಭಾರತಕ್ಕೆ ವಾಪಸು ಬರುತ್ತದೆ. 'ಟಿಕ್ ಟಾಕ್' ನ್ನು ಬೈಟ್ ಡಾನ್ಸ್ ನಿಭಾಯಿಸುವ ಬದಲು ಮೈಕ್ರೋಸಾಫ್ಟ್ ಅಥವಾ ಒರೆಕಲ್ ನಿಭಾಯಿಸುತ್ತದೆ. ಭಾರತದ ಗ್ರಾಹಕರ ದತ್ತಾಂಶವನ್ನು ಚೀನಾದಲ್ಲಿ

ಪುಟ 10 ಕ್ಕೆ

ಟಿಕ್ ಟಾಕ್ ಹೋಯ್ತು .. .ಡುಂಡುಂ... ಮೈಕ್ರೋಸಾಫ್ಟ್ ಬಂತು.. ..ಡುಂಡುಂ!!......

ಪುಟ 9 ರಿಂದ



ಶೇಖರಿಸುವ ಬದಲು ಬಹುಶಃ ಅಮೇರಿಕದಲ್ಲೋ ಇನ್ನೆಲ್ಲೋ ಅದಕ್ಕೆ ಸುಗಮವಾಗುವಲ್ಲಿ ಇಡಬಹುದು. ಯಾಕೆಂದರೆ ನಮ್ಮ ದತ್ತಾಂಶ ಕಾನೂನು ಅಂತಹ ನಿಬಂಧನೆಗಳನ್ನು ಯಾವುದೇ (ವಿದೇಶೀ ಅಥವಾ ಸ್ವದೇಶಿ) ಕಂಪನಿಗಳ ಮೇಲೆ ವಿಧಿಸುವುದಿಲ್ಲ. ಮೋದಿ ಸರಕಾರ ಸಾಧಿಸಿದ್ದು ಏನು? ಚೀನಾದ ಸಣ್ಣ ಕಂಪನಿಯೊಂದರ ಬದಲು ಮಣಿಸಲು ಕಷ್ಟಸಾಧ್ಯವಾದ ಅಮೇರಿಕನ್ ದೈತ್ಯ ಕಂಪನಿ ನಮ್ಮ ನಾಗರಿಕರ ಖಾಸಗಿ ದತ್ತಾಂಶಗಳನ್ನು ಚೀನಾದ ಬದಲು ಬಹುಶಃ ಅಮೇರಿಕದಲ್ಲಿ ಇಡಬಹುದು, ಅಷ್ಟೇ! ಬೈಟ್ ಡಾನ್ಸ್ ನ್ನು ಯಾವುದೇ ಭಾರತೀಯ ಕಂಪನಿ ಖರೀದಿ ಮಾಡಿದರೂ ಯಾವುದೇ ಕಾನೂನು ನಿಬಂಧನೆ ಇಲ್ಲದಿರುವುದರಿಂದ ಭಾರತದ ಗ್ರಾಹಕರ ದತ್ತಾಂಶವನ್ನು ಎಲ್ಲಿ ಬೇಕಾದರೂ ಇಡಬಹುದು.

ಇದು ಬಹುಪಾಲು ಎಲ್ಲ ಆಪ್ ಕಂಪನಿಗಳ ಬಗೆಗೂ ನಿಜ. ನಿಷೇಧಿತ ಚೀನಿ ಆಪ್ ಗಳ ಬದಲಿಯಾಗಿ ಬರುವ ಭಾರತದ ಅಥವಾ ಜಾಗತಿಕ ಕಂಪನಿಗಳೂ ಭಾರತದ ಗ್ರಾಹಕರ ದತ್ತಾಂಶವನ್ನು ಎಲ್ಲಿ ಬೇಕಾದರೂ ಇಡಬಹುದು. ಏನೂ ಬೇಕಾದರೂ ಮಾಡಬಹುದು. ಆದ್ದರಿಂದ ಚೀನಿ ಆಪ್ ನಿಷೇಧದಿಂದ ಅದಕ್ಕೆ ಕಾರಣವೆಂದು ಹೇಳಲಾದ ಗುರಿಯನ್ನಂತೂ ಸಾಧಿಸಲಾಗುವುದಿಲ್ಲ.

ಗೂಗಲ್, ಫೇಸ್ ಬುಕ್ (ವಾಟ್ಸಪ್ ಸೇರಿದಂತೆ) ಮುಂತಾದ ಆಪ್ ಅಥವಾ ನೆಟ್ ಸೇವಾ ಕಂಪನಿಗಳು ಈಗಲೂ ಭಾರತದ ನಾಗರಿಕರ ಅಗಾಧ ದತ್ತಾಂಶವನ್ನು ತಮಗೆ ಮನಬಂದಂತೆ ಮನಬಂದಲ್ಲಿ ಶೇಖರಿಸುತ್ತವೆ. ದುರ್ಬಳಕೆ ಮಾಡುತ್ತವೆ. ಹಾಗಾದರೆ 'ದೇಶದ ಏಕತೆ ಮತ್ತು ಸಾರ್ವಭೌಮತೆಗಳ ರಕ್ಷಣೆ', 'ಪ್ರಭುತ್ವದ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಭದ್ರತೆ', 'ನಾಗರಿಕರ ಖಾಸಗಿತನ'ದ ರಕ್ಷಣೆಯನ್ನು ನಿಜವಾಗಿಯೂ ಮಾಡಬೇಕಾದರೆ ಏನು ಮಾಡಬೇಕು? ಕನಿಷ್ಠ ನ್ಯಾಯಮೂರ್ತಿ ಶ್ರೀಕೃಷ್ಣ ಕಮಿಶನ್ ದತ್ತಾಂಶ ಸಂಗ್ರಹ, ಶೇಖರಣೆ ಕುರಿತು ದತ್ತಾಂಶ ರಕ್ಷಣೆ ಕರಡು ಮಸೂದೆಯಲ್ಲಿ ನಮೂದಿಸಿದ ಅಂಶಗಳನ್ನು ಜಾರಿಗೆ ತರಬೇಕು. ಈ ದೇಶದ ಯಾವುದೇ ದತ್ತಾಂಶ ದೇಶದಲ್ಲೇ ಶೇಖರಿಸಿ ಸಂಸ್ಕರಿಸಬೇಕು (ದತ್ತಾಂಶ ಸ್ಥಳೀಕರಣ) ಮುಂತಾದ ನಿಬಂಧನೆಗಳನ್ನು ಈ ಕರಡು ವಿಧಿಸಿತ್ತು. ರಿಸರ್ವ್ ಬ್ಯಾಂಕ್ ಎಪ್ರಿಲ್ 2018ರಲ್ಲಿ ಹೊರಡಿಸಿದ ನೋಟಿಫಿಕೇಶನಿನಲ್ಲಿ ಭಾರತದಲ್ಲಿ ಹಣ ಪಾವತಿ ಸೇವೆ (ಡೆಬಿಟ್/ಕ್ರೆಡಿಟ್ ಕಾರ್ಡ್, ಬ್ಯಾಂಕಿಂಗ್, ಮೊಬೈಲ್ ಪಾವತಿ ಇತ್ಯಾದಿ) ಒದಗಿಸುವ ಎಲ್ಲಾ ಸಂಸ್ಥೆಗಳು ಆರು ತಿಂಗಳೊಳಗೆ ತಮ್ಮ ಎಲ್ಲ ದತ್ತಾಂಶಗಳು ಭಾರತದಲ್ಲೇ ಇಡಬೇಕು ಎಂದು ವಿಧಿಸಿತ್ತು. ದತ್ತಾಂಶ ಸ್ಥಳೀಕರಣ ಮತ್ತು ರಿಸರ್ವ್ ಬ್ಯಾಂಕ್ ನ ಮೇಲಿನ ನೋಟಿಫಿಕೇಶನಿಗೆ ಯು.ಎಸ್ ವಾಣಿಜ್ಯ ಪ್ರತಿನಿಧಿಯು, ಇದು ಯು.ಎಸ್ ಕಂಪನಿಗಳ ವ್ಯವಹಾರಕ್ಕೆ ಧಕ್ಕೆ ತರುತ್ತದೆ ಎಂದು ತೀವ್ರವಾಗಿ ಆಕ್ಷೇಪಿಸಿದ್ದರು. ಕೂಡಲೇ 56 ಇಂಚಿನ ಎದೆಯ ಮೋದಿಯ ಸರಕಾರ ಮೊಣಕಾಲೂರಿ 2019ರ ದತ್ತಾಂಶ ರಕ್ಷಣೆ ಕರಡು ಮಸೂದೆಯಲ್ಲಿ ಈ ಅಂಶಗಳನ್ನು ದುರ್ಬಲಗೊಳಿಸಿತ್ತು. ಅಮೇರಿಕದ ದೈತ್ಯ ಕಂಪನಿಗಳ ಬಲದ ಎದುರು ಸಹ, ಯುರೋಪಿಯನ್ ಕೂಟ ಪ್ರಬಲ ದತ್ತಾಂಶ ಸ್ಥಳೀಕರಣದ ನಿಬಂಧನೆಗಳನ್ನು ವಿಧಿಸಿದೆ. ಭಾರತಕ್ಕೂ ಇದು ಸಾಧ್ಯವಿದೆ. ಇಂತಹ ನಿಬಂಧನೆಗಳನ್ನು ವಿಧಿಸುವ ಕಾನೂನಿನ ನೀತಿ ಸಂಹಿತೆಗಳ ಚೌಕಟ್ಟು ಇಲ್ಲದೆ ಬೇಕಾಬಿಟ್ಟಿ ನಿಷೇಧಗಳನ್ನು ಹೇರುವುದು ಇದಕ್ಕೆ ಸುಸಂಬದ್ಧ ಪರಿಹಾರವಲ್ಲ. ಸಂತ್ರಸ್ತ ಕಂಪನಿಗಳು ಕೋರ್ಟಿಗೆ ಹೋದರೆ ಇವು ತಾರತಮ್ಯದವು ಕಾನೂನುಬಾಹಿರ ಎಂದು ಬಿದ್ದು ಸಹ ಹೋಗಬಹುದು. ಇವುಗಳನ್ನು ಅಂತರ್‌ರಾಷ್ಟ್ರೀಯ ಒಪ್ಪಂದಗಳ ಉಲ್ಲಂಘನೆ ಎಂದು ಸಹ ಪ್ರಶ್ನಿಸಲಾಗಬಹುದು.

ಚೀನೀ ಉಪಕರಣಗಳ ನಿಷೇಧ ಸಹ ಬರಿಯಾ ಡ್ರಾಮಾ

ಇದೇ 3ಜಿ, 4ಜಿ ಮತ್ತು ಮುಂಬರುವ ದೂರ ಸಂಪರ್ಕ ಉಪಕರಣಗಳ ಆಮದಿನಲ್ಲಿ ಚೀನಾದ ಕಂಪನಿಗಳ ಉತ್ಪನ್ನಗಳ ನಿಷೇಧಕ್ಕೂ ಅನ್ವಯಿಸುತ್ತದೆ. ಮೊದಲನೆಯದಾಗಿ ಈ ನಿಷೇಧ ಅಪ್ರಾಮಾಣಿಕ. ಇದು ಬಿ.ಎಸ್.ಎನ್.ಎಲ್ ಗೆ ಮಾತ್ರ ಅನ್ವಯಿಸುತ್ತದೆ. ದೂರಸಂಪರ್ಕ ಕ್ಷೇತ್ರದಲ್ಲಿ ಶೇ.100 ವಿದೇಶೀ ಹೂಡಿಕೆಗೆ ಅನುವು ಮಾಡಿಕೊಟ್ಟಿರುವಾಗ ಖಾಸಗಿ ಟೆಲಿಕಾಂ ಕಂಪನಿಗಳ ಮೇಲೆ ಯಾವುದೇ ನಿರ್ಬಂಧ ಹೇರುವಂತಿಲ್ಲ. ದೇಶದ ದೂರ ಸಂಪರ್ಕ ಜಾಲದ ಉಪಕರಣಗಳಲ್ಲಿ ಶೇ.90 ವಿದೇಶಿ. ಉಪಕರಣಗಳು. ಇವು ಹೆಚ್ಚಾಗಿ ಜಗತ್ತಿನ 5 (3 ಅಮೆರಿಕನ್–ಯುರೋಪಿಯನ್, 2 ಚೀನಿ) ದೈತ್ಯ ಕಂಪನಿಗಳವು. ಇವೆಲ್ಲವೂ ಅಗತ್ಯ ಬಿದ್ದಾಗ ತಮ್ಮ ವ್ಯಾಪಾರಿ ಉದ್ದೇಶಗಳಿಗಾಗಿ ಅಥವಾ ತಮ್ಮ ದೇಶದ ಸರಕಾರಗಳ ಅಣತಿಗೆ ಅನುಗುಣವಾಗಿ ಭಾರತದ ಮೇಲೆ ಬೇಹುಗಾರಿಕೆ ನಡೆಸುವ ಸಾಮರ್ಥ್ಯ ಹೊಂದಿವೆ. ಚೀನಿ ಕಂಪನಿಗಳ ಕುರಿತ ಆತಂಕ ಸಂಶಯಗಳು ಅಮೆರಿಕನ್–ಯುರೋಪಿಯನ್ ಕಂಪನಿಗಳ ಬಗೆಗೂ ನಿಜ. ಅಮೆರಿಕನ್–ಯುರೋಪಿಯನ್ ಕಂಪನಿಗಳು ವಾಸ್ತವವಾಗಿ ಇಂತಹ ಕುಕೃತ್ಯಗಳನ್ನು ಮಾಡಿರುವ ಉದಾಹರಣೆಗಳಿವೆ. ಈಗ ನೋಕಿಯ–ಸೀಮನ್ಸ್ ಕಂಪನಿಯ ಭಾಗವಾಗಿರುವ ಸೀಮನ್ಸ್ ಇರಾನಿನ ಅಣುಶಕ್ತಿ ಘಟಕದಲ್ಲಿ ಇದ್ದ ತಮ್ಮ ಉಪಕರಣಗಳನ್ನು ದೂರದಿಂದಲೇ ಕೆಲಸ ಮಾಡದಂತೆ ಮಾಡಿದ ಬುಡಮೇಲು ಕೃತ್ಯ ನಡೆಸಿತ್ತು. ಇದಕ್ಕೆ ಪರಿಹಾರವೆಂದರೆ ಯಾವುದೇ ಇಂತಹ ಆಯಕಟ್ಟಿನ ದೂರಸಂಪರ್ಕ ಉಪಕರಣಗಳ (ಸಾಫ್ಟ್ ವೇರ್ ಕೋಡ್ ಸೇರಿದಂತೆ) ಪೂರ್ಣ ತಂತ್ರಜ್ಞಾನ ಮತ್ತು ಉತ್ಪಾದನಾ ಸಾಮರ್ಥ್ಯ ವರ್ಗಾಯಿಸಲು ಒತ್ತಾಯಿಸುವುದು ಅಥವಾ ದೇಶೀಯ ತಂತ್ರಜ್ಞಾನ ಅಭಿವೃದ್ಧಿ ಪಡಿಸುವ ದೂರಗಾಮೀ ಸಮಗ್ರ ಸ್ವಾವಲಂಬನೆಯ ನೀತಿ ಅನುಸರಿಸುವುದು. ಇವು ಮಾತ್ರ ನಿಜವಾಗಿಯೂ 'ಸಾರ್ವಭೌಮತೆ'ಯ, ಪ್ರಭುತ್ವದ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಭದ್ರತೆಯ'ರಕ್ಷಣೆ ಮಾಡಬಲ್ಲದು. ಇಂತಹ ಧೋರಣೆಯಂತೂ ಎಲ್ಲೂ ಕಾಣುತ್ತಿಲ್ಲ. ಚೀನೀ ಆಪ್ ಗಳು ಮತ್ತು ದೂರಸಂಪರ್ಕ ಉಪಕರಣಗಳ ಮೇಲಿನ ನಿಷೇಧ ಮತ್ತು ಚೀನಾ ಇದರಿಂದ "ಥರ ಥರ ನಡುಗುತ್ತಿದೆ" ಎಂಬುದು ವಾಸ್ತವವೂ ಅಲ್ಲ. ಅದರ ಘೋಷಿತ ಉದ್ದೇಶಗಳನ್ನು ಈಡೇರಿಸುವುದೂ ಇಲ್ಲ. ಬರಿಯ ಪ್ರಚಾರದ ಡ್ರಾಮಾ ಬಿಟ್ಟರೆ ಏನೂ ಅಲ್ಲ. ಎಲ್ಲ ರಂಗಗಳಲ್ಲಿ ವೈಫಲ್ಯ ಮಾತ್ರ ಇರುವ ಟ್ರಂಪ್ ಗೂ ಸಹ ಈ ಚುನಾವಣಾ ವರ್ಷದಲ್ಲಿ ಇಂತಹುದೇ 'ನೋಡಿ! ಚೀನಾವನ್ನು ಮಟಾಶ್ ಮಾಡಿದೆ' ಎಂಬ ಡ್ರಾಮಾ ಬೇಕಾಗಿರುವುದರಿಂದ ಅವರ ಸರಕಾರ ಮೋದಿ ಸರಕಾರವನ್ನು ಅನುಸರಿಸುವುದರಲ್ಲಿ ಆಶ್ಚರ್ಯವೇನಿಲ್ಲ. ●



ಎಎಪಿ ಮತ್ತು ಅಮಿತ್ ಶಾ ಜಟಾಪಟಿ......

ಪುಟ 8 ರಿಂದ

ಸ್ವಾತಂತ್ರ್ಯದಿಂದಾಗಿ, ಒಬ್ಬರು ಅಥವಾ ಇಬ್ಬರು ಅಲ್ಲ ಒಟ್ಟು 9 ಮುಸ್ಲಿಮರು ಕೊಲ್ಲಲ್ಪಟ್ಟರು ಮತ್ತು ಅವರ ದೇಹಗಳನ್ನು ನಾಲೆಯಲ್ಲಿ ಎಸೆಯಲಾಯಿತು. ಆದರೇನಂತೆ?

ದೇಶದ ಉನ್ನತ ಕಾನೂನು ಅಧಿಕಾರಿಗಳ ಕೆಲಸವನ್ನು ಸ್ಪಷ್ಟವಾಗಿ ನಿಗದಿಸಲಾಗಿದೆ. ಅವರು ಸಮರ್ಥಿಸಲಾಗದ ಕುಕೃತ್ಯಗಳನ್ನು ಮತ್ತು ಅದನ್ನು ಎಸಗಿದವರನ್ನು ಸಮರ್ಥಿಸಿ ರಕ್ಷಿಸುವಷ್ಟು ಆಳುವವರ ನಿಷ್ಠರು ಎಂದು ಪರಿಗಣಿಸಲಾಗಿದೆ. ಜೆಎನ್‌ಯು ವಿದ್ಯಾರ್ಥಿಗಳು, ಜಾಮಿಯಾ ವಿದ್ಯಾರ್ಥಿಗಳು, ಸಿಎಎ ವಿರೋಧಿ ಪ್ರತಿಭಟನೆಗಳ ಬೆಂಬಲಿಗರು –ಮುಂತಾದ ಎಲ್ಲಾ 'ರಾಷ್ಟ್ರ–ವಿರೋಧಿ ಪಡೆ'ಗಳು ದೆಹಲಿ ಗಲಭೆಗಳಿಗೆ ಸಂಚು ರೂಪಿಸುವ ಮಹಾ ಪಿತೂರಿಯ ಕಥೆಯನ್ನು ಸಿದ್ಧಪಡಿಸುವ ಮುಖ್ಯ ಜವಾಬ್ದಾರಿಯನ್ನು ಅವರಿಗೆ ನೀಡಲಾಗಿದೆ. ಕಡಿಮೆ ಅಥವಾ ಯಾವುದೇ ಪುರಾವೆಗಳಿಲ್ಲದೆ, ಗೃಹ ಸಚಿವಾಲಯವು 14 ಕಾರ್ಯಕರ್ತರನ್ನು ಬಂಧಿಸಲು ಕಟುವಾದ ಕಾನೂನು ಯುಎಪಿಎಯನ್ನು ಬಳಸಿದೆ. ಹೆಚ್ಚಿನ ಚಾರ್ಜ್‌ಶೀಟ್‌ಗಳಲ್ಲಿ ಹಿಂಸೆಯ ಅನುಕ್ರಮವನ್ನು 'ಕಟ್ ಅಂಡ್ ಪೇಸ್ಟ್' ರೀತಿಯಲ್ಲಿ ಪುನರಾವರ್ತಿಸಲಾಗಿದೆ. ಇದು ಜಾಮಿಯಾ ಪ್ರತಿಭಟನೆಯೊಂದಿಗೆ ಪ್ರಾರಂಭವಾಗುತ್ತದೆ ಮತ್ತು ನಂತರ ಹಿಂಸಾಚಾರವನ್ನು ಯೋಜಿಸುತ್ತಿರುವ ಜಿಹಾದಿ–ನಗರ ನಕ್ಸಲ್ ಗಳ ಕೂಟದ ಬುಡವಿಲ್ಲದ ಅತ್ಯಂತ ಅಸಂಬದ್ಧ ಕಥೆಯತ್ತ ಹೊರಳುತ್ತದೆ. ಬಂಧಿತ ಮುಸ್ಲಿಂ ಒಬ್ಬರು ಜಾಮೀನು ಕೇಳಿದ ಒಂದು ಪ್ರಕರಣದಲ್ಲಿ, ಪೊಲೀಸರು "ಸಿಎಎ–ವಿರೋಧಿ ಪ್ರತಿಭಟನೆಗಳಲ್ಲಿ ವಿದೇಶಿ ರಾಷ್ಟ್ರಗಳ ಪಾಲ್ಗೊಳ್ಳುವಿಕೆ ಇದೆ .. .. .. ಇದು ಪ್ರಜಾಸತ್ತಾತ್ಮಕ ಸರ್ಕಾರ ಮತ್ತು ಶಾಂತಿಯನ್ನು ಅಸ್ಥಿರಗೊಳಿಸಲು ಶತ್ರು ವಿದೇಶಿ ರಾಷ್ಟ್ರಗಳ ಕಾರುಭಾರು, ಒಟ್ಟಾರೆಯಾಗಿ ದೇಶಕ್ಕೆ ಸ್ಪಷ್ಟ ಬೆದರಿಕೆ" ಎಂದು ಹೇಳಿ ಅರ್ಜಿಯನ್ನು ವಿರೋಧಿಸಿದರು.

ಬಿಜೆಪಿ ಮತ್ತು ಆರೆಸ್ಸೆಸ್ ನ ಪ್ರಕಾರ ಪ್ರಜಾಸತ್ತಾತ್ಮಕ ಪ್ರತಿಭಟನೆ ಮತ್ತು ಸೌಹಾರ್ದ ಬೆಂಬಲ ಎಂದರೆ ಪಿತೂರಿ. ಎನ್‌ಪಿಆರ್ ಮತ್ತು ಎನ್‌ಆರ್‌ಸಿ ತಡೆಗಟ್ಟುವ ಸಾಮಾನ್ಯ ಉದ್ದೇಶ, ಸಾಮಾನ್ಯ ಘೋಷಣೆಗಳು ಮತ್ತು ಸಾಮಾನ್ಯ ಕ್ರಮಗಳು ಕೇವಲ ವಿದೇಶಿ ಧನಸಹಾಯದ ಪಿತೂರಿ ಇದ್ದರೆ ಮಾತ್ರ ಸಂಭವಿಸಬಹುದು. ರಾಮಮಂದಿರದ ಹೆಸರಿನಲ್ಲಿ ದಶಕಗಳಿಂದ ಸಂಘಟಿಸಿದ, ದೇಶಾದ್ಯಂತ ಕ್ರಮಗಳನ್ನು ಸಂಯೋಜಿಸಲು ಆರ್‌ಎಸ್‌ಎಸ್ ಅಥವಾ ಬಿಜೆಪಿಗೆ ಮಾತ್ರ ಹಕ್ಕಿದೆ. ಶಾಹೀನ ಬಾಗ್ ನ ಐತಿಹಾಸಿಕ ಸಿಎಎ–ವಿರೋಧಿ ಪ್ರತಿಭಟನೆಯ ಮುಂಚೂಣಿಯಲ್ಲಿದ್ದ ಮಹಿಳೆಯರಿಗೆ ಯಾವುದೇ ಸ್ವತಂತ್ರ ಅಸ್ತಿತ್ವ ಇಲ್ಲ, ಸ್ವತಂತ್ರವಾಗಿ ಯೋಚಿಸುವ ಮತ್ತು ಕಾರ್ಯಾಚರಣೆಗೆ ಇಳಿಯುವ ಶಕ್ತಿ ಇಲ್ಲ ಎನ್ನುವ ದೃಷ್ಟಿಕೋನ ಭಾರತವನ್ನು ಆಳುವವರದ್ದು. ದೆಹಲಿ ಪೊಲೀಸರ ಹೇಳಿಕೆಯ ಪ್ರಕಾರ, ಅನೇಕ ದಿನಗಳು ಅಲ್ಲ ತಿಂಗಳುಗಟ್ಟಲೆ ಚಳಿಯಲ್ಲಿ ಕುಳಿತು, ಸಂವಿಧಾನವನ್ನು ಕೈಯಲ್ಲಿ ಹಿಡಿದು, ತ್ರಿವರ್ಣ ಧ್ವಜವನ್ನು ಚಿಹ್ನೆಯಂತೆ ಇಟ್ಟುಕೊಂಡು, ಸಂಪೂರ್ಣ ಶಾಂತಿಯುತವಾಗಿದ್ದು, ಎಲ್ಲಾ ಹಂತಗಳಲ್ಲಿ ಮಹಿಳೆಯರು ಕಾರ್ಯ ನಿರ್ವಹಿಸುತ್ತಿರುವುದು, ಕೆಲವು ಪಿತೂರಿಗಾರರ ಗುಂಪಿನ ಆಣತಿಯಂತೆ ಆಡುತ್ತಿರುವ ನಾಟಕವಲ್ಲದೆ ಮತ್ತೇನು ಅಲ್ಲ. ಭಾರತದ ಜಾತ್ಯಾತೀತ ಆಧಾರದ ಪೌರತ್ವದ ಉಳಿವಿಗಾಗಿ ಹೋರಾಡಿದ ಮಹಿಳೆಯರನ್ನು ಕೈಗೊಂಬೆ ಎಂದು ಕರೆಯುವುದಕ್ಕಿಂತ ಹೆಚ್ಚಿನ ಅವಮಾನವಿಲ್ಲ. ಹೆಚ್ಚಿನ ಹಸಿಸುಳ್ಳು ಬೇರೊಂದಿಲ್ಲ. ಪ್ರತಿಭಟನೆಯಲ್ಲಿ ಸೇರಿಕೊಂಡ ಕೆಲವು ಗುಂಪುಗಳೊಂದಿಗೆ ಮತ್ತು ಅದರ ಸೂಕ್ತವಲ್ಲದ ಅಸಮರ್ಥನೀಯ ಕ್ರಮಗಳ ಕುರಿತು ಯಾರಿಗಾದರೂ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಇಂತಹ ಚಳುವಳಿಗಳನ್ನು 'ರಾಷ್ಟ್ರ–ವಿರೋಧಿ' ಎಂದು ಬ್ರಾಂಡ್ ಮಾಡುವುದು ಆಡಳಿತ ಪಕ್ಷದ ನಾಯಕರ ಪಾತ್ರವನ್ನು ಮರೆಮಾಚಲು ರಾಜಕೀಯ–ಪ್ರೇರಿತ ಕ್ರಮವಲ್ಲದೆ ಬೇರೇನಲ್ಲ..

ದೆಹಲಿ ಪೊಲೀಸರು ತಮ್ಮ ಚಾರ್ಜ್‌ಶೀಟ್‌ಗಳಲ್ಲಿ ರಾಜಕೀಯ ಪಾತ್ರವನ್ನು ವಹಿಸಿಕೊಂಡು, ಸಿಎಎ ವಿರುದ್ಧದ ಪ್ರತಿ ಪ್ರತಿಭಟನೆಯನ್ನು 'ರಾಷ್ಟ್ರವಿರೋಧಿ' ಎಂದು ಮತ್ತು ಸಿಎಎ ಗಿರುವ ಎಲ್ಲ ವಿರೋಧಗಳನ್ನು "ಮುಸ್ಲಿಂ ಸಮುದಾಯವನ್ನು ದಾರಿ ತಪ್ಪಿಸುವಂಥದು" ಎಂದು ಪರಿಗಣಿಸಿದ್ದಾರೆ. ಸಿಎಎ ಕಾಯಿದೆಯು ಅಲ್ಪಸಂಖ್ಯಾತ ಸಮುದಾಯಗಳ ಪೌರತ್ವ ಹಕ್ಕುಗಳ ಮೇಲೆ ಯಾವುದೇ ರೀತಿಯ ಪರಿಣಾಮವನ್ನೂ ಬೀರುವುದಿಲ್ಲ ಎಂದು ಘೋಷಿಸಲು ಪೋಲೀಸರಿಗೆ ಯಾವುದೇ ರೀತಿಯ ಹಕ್ಕು, ಕಾರ್ಯವ್ಯಾಪ್ತಿ ಅಥವಾ ಅಧಿಕಾರ ಇಲ್ಲ. ಇದೊಂದು ರಾಜಕೀಯ ಪ್ರಶ್ನೆ. ಪ್ರತಿಭಟನಾಕಾರರು ಯವುದೋ ಒಂದು ಕಾನೂನು ಅಥವಾ ನಿರ್ಬಂಧವನ್ನು ಉಲ್ಲಂಘಿಸಿದ್ದಾರೆ ಎಂದು ಮಾತ್ರ ಅವರು ಹೇಳಬಹುದು, ಆದರೆ ಬೇರೆ ಯಾವುದರ ಬಗ್ಗೆಯೂ ಪ್ರತಿಕ್ರಿಯಿಸಲು ಅವರಿಗೆ ಹಕ್ಕಿಲ್ಲ. 10 ಕ್ಕೂ ಹೆಚ್ಚು ರಾಜ್ಯ ಸರ್ಕಾರಗಳು ಮತ್ತು ಬಿಜೆಪಿಯ ಮಿತ್ರಪಕ್ಷಗಳು ಸಹ ಎನ್‌ಆರ್‌ಸಿಯನ್ನು ವಿರೋಧಿಸಿವೆ ಎಂದು ನೆನಪಿನಲ್ಲಿಡಬೇಕು. ದೆಹಲಿ ಪೊಲೀಸರ ಪ್ರಕಾರ ಅವರೆಲ್ಲರೂ ರಾಷ್ಟ್ರ–ವಿರೋಧಿಗಳು. ಒಂದು ಶಾಂತಿಯುತ ಪ್ರತಿಭಟನೆಯ ಹಿಂದಿನ ರಾಜಕೀಯ ಸರಿ ಅಥವಾ ತಪ್ಪು ಎಂದು ನಿರ್ಣಯಿಸುವ ಹಕ್ಕು ಪೊಲೀಸರಿಗೆ ಇದೆ ಎಂದು ನಾವು ಒಪ್ಪಿಕೊಂಡರೆ, ನಾವು ಭಾರತವನ್ನು ಪೊಲೀಸ್ ಪ್ರಭುತ್ವವೆಂದು ಘೋಷಿಸಬಹುದು.

ಸಿಎಎ, ಎನ್‌ಸಿಆರ್ ಮತ್ತು ಎನ್‌ಪಿಆರ್ ವಿರುದ್ಧ ಮತ್ತೆ ಯಾರೂ ಪ್ರತಿಭಟಿಸಲು ಧೈರ್ಯ ಮಾಡದಂತೆ ನೋಡಿಕೊಳ್ಳುವುದು ಸಿಎಎ–ವಿರೋಧಿ ಪ್ರತಿಭಟನೆಗಳ ಇಂತಹ ರಾಕ್ಷಸೀಕರಣದ ಉದ್ದೇಶ. ಈಶಾನ್ಯ ದೆಹಲಿಯಲ್ಲಿನ ಘರ್ಷಣೆಗಳು ಮತ್ತು ಹಿಂಸಾಚಾರವು ಪಿತೂರಿಯ ಫಲಿತಾಂಶವಾಗಿದೆ ಎಂಬುದು ನಿಜ. ಆದರೆ ಈ ಪಿತೂರಿಯ ಉದ್ದೇಶ ದೆಹಲಿ ಚುನಾವಣೆಯಲ್ಲಿ ಬಿಜೆಪಿಯ ಸೋಲಿಗೆ ಪ್ರತೀಕಾರ ಮಾಡುವುದು: ಎನ್.ಡಿ.ಎ–2 ಸರ್ಕಾರದ ವಿರುದ್ಧ ಅತ್ಯಂತ ಪರಿಣಾಮಕಾರಿಯಾದ ಸಾಮೂಹಿಕ ಪ್ರತಿಭಟನೆಗಳು ಮತ್ತು ಅದರ ರಾಷ್ಟ್ರೀಯ ವ್ಯಾಪ್ತಿ ಮತ್ತು ಪರಿಣಾಮಗಳು ಹಲವು ಕವಲೊಡೆದು ಹರಡುವುದನ್ನು ತಪ್ಪಿಸಿ ಅಸ್ತವ್ಯಸ್ತಗೊಳಿಸುವುದು ಮತ್ತು ನಿರಾಶೆಗೊಳಿಸುವುದು; ಸರಕಾರದ ಹಾಗೂ ಆಳುವ ಪಕ್ಷದ ಟೀಕಾಕಾರರನ್ನು ಮತ್ತು ಭಿನ್ನಮತೀಯರನ್ನು ಮೌನಗೊಳಿಸುವುದು; ಸಂವಿಧಾನವನ್ನು ಟೊಳ್ಳು ಮಾಡುವುದು; ಮುಖ್ಯವಾಗಿ ಇದು ದ್ವೇಷದ, ವಿಭಜನೆಯ ಮತ್ತು ಧ್ರುವೀಕರಣದ ರಾಜಕೀಯವನ್ನು ಮುಂದೊಡ್ಡುವ ಸಿನಿಕತನದ ಪಿತೂರಿಯಾಗಿದೆ. ದೆಹಲಿ ಸರ್ಕಾರದ ಆದೇಶಗಳನ್ನು ರದ್ದುಗೊಳಿಸಿರುವುದು ಪಿತೂರಿಯ ಈ ಗುರಿಗಳೊಂದಿಗೆ ಘನಿಷ್ಠವಾದ ಸಂಬಂಧ ಹೊಂದಿದೆ. ●



ಕೇರಳ-ಮೊದಲ ಚುನಾಯಿತ ಕಮ್ಯುನಿಸ್ಟ್ ಸರ್ಕಾರ

1957ರಲ್ಲಿ ದೊರೆತ ವಿಜಯವು ಕಮ್ಯುನಿಸ್ಟರಿಗೆ ಕೇರಳದಲ್ಲಿ ಒಂದು ಅವಕಾಶ ಒದಗಿಸಿತು, ಹಿಂದೆಂದೂ ಅಂತಹ ಅವಕಾಶಗಳು ಸಿಕ್ಕ ಉದಾಹರಣೆಗಳು ಇಲ್ಲ. ಸಂವಿಧಾನದ ಮಿತಿಗಳ ನಿರ್ಬಂಧಗಳಿಂದಾಗಿ, ಇಂತಹ ಸಂವಿಧಾನದ ಪರಿಮಿತಿಯಲ್ಲಿ ಏನನ್ನೂ ಮಾಡಲು ಸಾಧ್ಯವಿಲ್ಲ ಎಂಬ ತನ್ನ ಅಸಹಾಯಕತೆಯನ್ನು ಕಮ್ಯುನಿಸ್ಟ್ ಪಕ್ಷವು ವ್ಯಕ್ತಪಡಿಸಲಿಲ್ಲ, ಅಥವಾ ಸಂವಿಧಾನದ ಮೂಲಕವೇ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಹುಡುಕಲು ಸಾಧ್ಯ ಎಂಬ ತಪ್ಪು ಕಲ್ಪನೆಯನ್ನೂ ಇಟ್ಟುಕೊಂಡಿರಲಿಲ್ಲ. ಅದರ ಬದಲು, ಸಂವಿಧಾನಿಕ ಸಾಧನಗಳಿಂದ ಎಲ್ಲಿ ಸಾಧ್ಯವೋ ಅದನ್ನು ಬಳಸಿ ಆ ಮೂಲಕ ಜನರ ಬದುಕನ್ನು ಉತ್ತಮಪಡಿಸಲು ಅದು ಕೆಲಸ ಮಾಡಿತು ಮತ್ತು ಜನರ ಹೋರಾಟಗಳೊಂದಿಗೆ ಗಟ್ಟಿಯಾಗಿ ನಿಂತಿತು.

ಕಮ್ಯುನಿಸ್ಟರ ಮುನ್ನಡೆಯನ್ನು ತಡೆಯಲು ಅಸಮರ್ಥವಾದ ಕೇಂದ್ರ ಸರ್ಕಾರವು 356 ನೇ ವಿಧಿ ಬಳಸಿತು ಮತ್ತು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರವನ್ನು 1959ರಲ್ಲಿ ವಜಾ ಮಾಡಿತು. ಅದು ಭಾರತದ ಪ್ರಜಾಪ್ರಭುತ್ವಕ್ಕೆ ಒಂದು ಕರಾಳ ದಿನವಾಗಿತ್ತು.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್

ಕೇರಳದಲ್ಲಿ ಏಪ್ರಿಲ್ 5, 1957ರಂದು ಕಮ್ಯುನಿಸ್ಟ್ ಸರ್ಕಾರದ ರಚನೆಯಾದಾಗ ಭಾರತದಲ್ಲಿ ಮತ್ತು ಜಗತ್ತಿನಾದ್ಯಂತ ಒಂದು ಹೊಸ ಪ್ರಯೋಗವೆಂದು ಪ್ರಶಂಸಿಸಲಾಯಿತು. ಇದಕ್ಕೂ ಮುಂಚೆ, ಕಮ್ಯುನಿಸ್ಟ್ ಪಕ್ಷವೊಂದು ಜಗತ್ತಿನಲ್ಲಿ ಎಲ್ಲಿಯೂ ಮುಕ್ತ ಹಾಗೂ ನ್ಯಾಯಯುತ ಚುನಾವಣೆಯಲ್ಲಿ ಗೆಲುವನ್ನು ಪಡೆದಿರಲಿಲ್ಲ. ಹೊಸದಾಗಿ ರಚನೆಯಾದ ಕೇರಳ ರಾಜ್ಯದ ಮೊಟ್ಟ ಮೊದಲ ಚುನಾವಣೆಯಲ್ಲಿ ಆಗಿನ ವಿಧಾನಸಭೆಯ ಒಟ್ಟು 127 ಸ್ಥಾನಗಳಲ್ಲಿ ಕಮ್ಯುನಿಸ್ಟ್ ಪಕ್ಷವು 65 ಸ್ಥಾನಗಳಲ್ಲಿ ಗೆದ್ದು ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. 34 ಕ್ಷೇತ್ರಗಳಲ್ಲಿ ಅದು ಶೇಕಡಾ 50ಕ್ಕಿಂತಲೂ ಹೆಚ್ಚು ಮತಗಳನ್ನು, 8 ಕ್ಷೇತ್ರಗಳಲ್ಲಿ 48% ರಿಂದ 50% ಮತಗಳನ್ನು ಪಡೆಯಿತು. ಅದು ಪಕ್ಷ ಮತ್ತು ಅದರ ನೀತಿಗಳ ಮೇಲೆ ವಿಶ್ವಾಸವಿಟ್ಟು ಜನರು ಕಮ್ಯುನಿಸ್ಟ್ ಪಕ್ಷಕ್ಕೆ ನೀಡಿದ ಸಕಾರಾತ್ಮಕ ಮತವಾಗಿತ್ತು.

ಕಮ್ಯುನಿಸ್ಟ್ ಸರ್ಕಾರದ ಉದ್ಘಾಟನೆಯಾದ ಒಂದು ವಾರದೊಳಗೇ, ಅದು ರೈತರ ಪರವಾಗಿ ಒಂದು ಶಾಸನವನ್ನು ಅಂಗೀಕರಿಸಿತು. ಏಪ್ರಿಲ್ 5 ರಂದು, ಸರ್ಕಾರ ಪ್ರಮಾಣ ವಚನ ಸ್ವೀಕರಿಸಿತು ಮತ್ತು ಏಪ್ರಿಲ್ 11 ರಂದು ಒಕ್ಕಲೆಬ್ಬಿಸುವುದನ್ನು ನಿಷೇಧ ಮಾಡಿ, ಯಾವ ಗೇಣಿದಾರನನ್ನು, ಒಳ-ಗೇಣಿದಾರನನ್ನೂ, ನಿವೇಶನಗಳಲ್ಲಿ ವಾಸಿಸುತ್ತಿರುವವರನ್ನು, ಸಮಯಕ್ಕೆ ಸರಿಯಾಗಿ ಗೇಣಿ ಕೊಟ್ಟಿಲ್ಲ ಎಂಬ ಕಾರಣವನ್ನೂ ಒಳಗೊಂಡಂತೆ ಯಾವುದೇ ಕಾರಣದಿಂದಲೂ ಒಕ್ಕಲೆಬ್ಬಿಸುವಂತಿಲ್ಲ ಎಂಬ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿತು. ಇನ್ನೂ ಮುಂದುವರಿದು, ಗೇಣಿದಾರರ, ಒಳ-ಗೇಣಿದಾರರ ಅಥವಾ ಮನೆ ನಿವೇಶನಗಳಲ್ಲಿ ವಾಸಿಸುತ್ತಿರುವವರ ವಿರುದ್ಧ ಜಮೀನ್ದಾರರು ಕೋರ್ಟುಗಳಲ್ಲಿ ಹೂಡಿದ್ದ ಪ್ರಕರಣಗಳಿಗೆ ತಡೆ ನೀಡಲಾಯಿತು. ರಾಜ್ಯದ ಗ್ರಾಮೀಣ ಬಡವರು ಜಮೀನ್ದಾರರ ದಾಳಿ ದಬ್ಬಾಳಿಕೆಗಳಿಂದ ಇಷ್ಟು ವ್ಯಾಪಕವಾದ ಪರಿಹಾರವನ್ನು ಹಿಂದೆಂದೂ ಗಳಿಸಿರಲಿಲ್ಲ.

ಈ ತುರ್ತು ಶಾಸನವು ಮುಂದಿನ ಶಾಶ್ವತ ಶಾಸನಕ್ಕೆ ನಾಂದಿಯಾಗಿತ್ತು; ಹೊಸ ರಾಜ್ಯದ ಮೂರು ಅಂಗಗಳಾಗಿದ್ದ ಮಲಬಾರ್, ಕೊಚಿನ್ ಮತ್ತು ತಿರುವಾಂಕೂರ್ ಪ್ರತಿಯೊಂದು ಕೂಡ ಹೊಂದಿದ್ದ ಜಮೀನ್ದಾರ-ಗೇಣಿದಾರ ಸಂಬಂಧಗಳ ಕಾನೂನುಗಳನ್ನು ಒಟ್ಟುಗೂಡಿಸಿ ಭೂಒಡೆತನದ ಹೊಸ ಕಾನೂನನ್ನು ಸಿದ್ಧಪಡಿಸಲಾಗುತ್ತಿತ್ತು. ಇಡೀ ರಾಜ್ಯಕ್ಕೆ ಒಂದು ಸಮಾನವಾದ ಭೂಕಾನೂನನ್ನು ರಚಿಸುವ ಸಲುವಾಗಿ ಹೀಗೆ ಒಟ್ಟುಗೂಡಿಸುವಾಗ, ಹಿಂದಿನ ಎರಡು ದಶಕಗಳಿಂದ ಕೃಷಿ ಕೂಲಿಕಾರರ ಸಂಘಟನೆಗಳನ್ನೂ ಒಳಗೊಂಡಂತೆ ಕಿಸಾನ್ ಸಭಾ ಹಾಗೂ ಗ್ರಾಮೀಣ ಬಡವರು ಹೋರಾಡುತ್ತಿದ್ದ ತಕ್ಷಣದ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿತ್ತು.

ಪಕ್ಷದ ರಾಜ್ಯ ಸಮಿತಿ, ಪಕ್ಷದ ಶಾಸಕರ ಗುಂಪು ಮತ್ತು ರಾಜ್ಯ ಮಟ್ಟದಿಂದ ಹಿಡಿದು ಗ್ರಾಮ ಮಟ್ಟದವರೆಗಿನ ಕಿಸಾನ್ ಸಭಾ ಸಮಿತಿಗಳು ಸಮಾಲೋಚನೆ, ತಿಕ್ಕಾಟ ಮತ್ತು ಮರುಹೊಂದಾಣಿಕೆಗಳ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿದ್ದವು. ಜಾತಿ, ಕೋಮು ಹಾಗೂ ರಾಜಕೀಯ ಕಾರಣಗಳನ್ನು ಪರಿಗಣಿಸದೆ ಒಟ್ಟಾರೆ ಗ್ರಾಮೀಣ ಬಡವರಿಗೆ ಎಷ್ಟು ಸಾಧ್ಯವೋ ಅಷ್ಟು ಗರಿಷ್ಠ ಪರಿಹಾರವನ್ನು ಕೃಷಿ ಸಂಬಂಧಗಳ ಮಸೂದೆಯು ಒದಗಿಸಿತ್ತು. ಸುಗ್ರೀವಾಜ್ಞೆಯಲ್ಲಿ ಒಳಗೊಂಡಿದ್ದ ಒಕ್ಕಲೆಬ್ಬಿಸುವುದರ ನಿಷೇಧ ಮತ್ತು ಗೇಣಿ ವಸೂಲಿಗೆ ತಡೆಯ ಮೂಲಕ ಲಕ್ಷಾಂತರ ರೈತರು, ಕೃಷಿ ಕೂಲಿಕಾರರು ಮತ್ತು ಇತರ ಗ್ರಾಮೀಣ ಬಡವಿಭಾಗಗಳು ಪಡೆದ ಬಹು ದೊಡ್ಡ ಜೀವನೋಪಾಯ ಬೆಂಬಲವನ್ನು ಪಡೆದ ಒಂದು ಪ್ರಕ್ರಿಯೆಯ ಆರಂಭವಾಗಿತ್ತು. ಆದ್ದರಿಂದ ಏಪ್ರಿಲ್ 11, 1957ರ ಆ ದಿನವು ಕೇರಳದ ಗ್ರಾಮೀಣ ಬಡ ಸಮುದಾಯಕ್ಕೆ ಕೆಂಪು ಅಕ್ಷರಗಳಲ್ಲಿ ಬರೆದ ದಿನವಾಗಿತ್ತು. ಆ ಸುಗ್ರೀವಾಜ್ಞೆ ಮತ್ತು ಜೂನ್ 1959ರ ಆರಂಭದಲ್ಲಿ ಅಂಗೀಕರಿಸಿದ್ದ ಅಂತಿಮ ಮಸೂದೆಯು ಕೇರಳದ ಜನರ ಆರ್ಥಿಕ ಮತ್ತು ಸಾಮಾಜಿಕ-ಸಾಂಸ್ಕೃತಿಕ ಬದುಕಿನಲ್ಲಿ ಹೊಸ ಘಟ್ಟವಾಗಿ ಪರಿಣಮಿಸಿತ್ತು. ಕೇವಲ ತೀರ ಅಲ್ಪಸಂಖ್ಯೆಯ ಮೇಲ್ಜಾತಿ ಜಮೀಂದಾರರು ಗ್ರಾಮೀಣ ಬಡ ಸಮುದಾಯದ ಮೇಲೆ ನಡೆಸುತ್ತಿದ್ದ ಆರ್ಥಿಕ ದಬ್ಬಾಳಿಕೆ ಮತ್ತು ಸಾಮಾಜಿಕ-ಸಾಂಸ್ಕೃತಿಕ ಪ್ರಾಬಲ್ಯವನ್ನು ಅದು ಕೊನೆಗೊಳಿಸಿತ್ತು.

ಕೃಷಿ ಸಂಬಂಧಗಳ ಮಸೂದೆಯ ನಂತರ ಅತ್ಯಂತ ಪ್ರಮುಖವಾದದ್ದು, ಪೋಲಿಸರು ಮತ್ತು ಜನರ ನಡುವಿನ ಸಂಬಂಧಗಳ ಕುರಿತ ಧೋರಣೆಯ ಹೇಳಿಕೆಯಾಗಿತ್ತು. ಕೃಷಿ ಸಂಬಂಧಗಳ ಮಸೂದೆಗೆ ಆದಂತೆ ಸರ್ಕಾರದ ಪೋಲಿಸ್ ನೀತಿಗಳು ಸಾಮಾನ್ಯ ಜನರನ್ನು ಹುರಿದುಂಬಿಸಿದವು. ಅದೇ ಸಮಯದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಅದನ್ನು ತೀವ್ರವಾಗಿ ಟೀಕೆ ಮಾಡಿದರು.

ಸರ್ಕಾರದ ಪೋಲಿಸ್ ನೀತಿ ಹಿಂದಿನ ನೀತಿಗಿಂತ ಎರಡು ಪ್ರಧಾನ ಹೊಸ ತಿದ್ದುಪಡಿಗಳನ್ನು ಮಾಡಿತ್ತು. ಮೊದಲನೆಯದು, ಅದು ಮೂರನೇ-ದರ್ಜೆಯ ವಿಚಾರಣಾ ವಿಧಾನಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಿತ್ತು ಮತ್ತು ದಸ್ತಗಿರಿಯಾದ ಜನರನ್ನು ಹಿಂಸಿಸಬಾರದು ಎಂಬ ನಾಡಿನ ಕಾನೂನಿನ ಅನುಸಾರ ವಿಚಾರಣೆಗಳನ್ನು ನಡೆಸಬೇಕೆಂದು ಒತ್ತಾಯಿಸಿತು. ಎರಡನೆಯದು, ಸಾಮೂಹಿಕ ಹೋರಾಟಗಳು ಮತ್ತು ಅದಕ್ಕೆ ನಾಯಕತ್ವ ನೀಡುವ ಸಂಘಟನೆಗಳಿಗೆ ಸಂಬಂಧಪಟ್ಟಂತೆ, ಜಮೀನುದಾರರಾಗಲೀ ಮತ್ತು ಬಂಡವಳಿಗರಾಗಲೀ ಮುಷ್ಕರ ಹಾಗೂ ರೈತರ ಮತ್ತಿತರ ಜನವಿಭಾಗಗಳ ಹೋರಾಟಗಳನ್ನು ದಮನ ಮಾಡಲು ಪೋಲಿಸರನ್ನು ಬಳಸಲು ಅವಕಾಶ ನೀಡಬಾರದೆಂಬುದು ಹೊಸ ನೀತಿಯ ಪ್ರಮುಖ ಅಂಶ. ಮಾಲೀಕರು ಮತ್ತು ನೌಕರರ ನಡುವಿನ ವಿವಾದಗಳನ್ನು ಕಾರ್ಮಿಕ ಇಲಾಖೆಯನ್ನು ಬಳಸಿ ಸಂಧಾನಗಳ ಮೂಲಕ ಪರಿಹರಿಸಲಾಗುವುದು ಎನ್ನಲಾಯಿತು.

ಭಾರತದ ಆಳುವ ಪಕ್ಷವಾದಂದಿನಿಂದಲೂ ಕಾಂಗ್ರೆಸ್ ಸರ್ಕಾರವು ತನ್ನ ಬತ್ತಳಿಕೆಯಲ್ಲಿ ಇಟ್ಟುಕೊಂಡಿದ್ದ ವಿಚಾರಣೆಯಿಲ್ಲದೇ ಬಂಧಿಸುವ ಅಸ್ತ್ರವನ್ನು ಮತ್ತು ಜನ ಚಳುವಳಿಯಲ್ಲಿ ತೊಡಗಿಕೊಂಡಿದ್ದ ವ್ಯಕ್ತಿಗಳು ಹಾಗೂ ಸಂಘಟನೆಗಳ ವಿರುದ್ಧ ಬಳಸುವ ಅವಕಾಶವನ್ನು ತೆಗೆದುಹಾಕಲಾಯಿತು. ಉದ್ಯೋಗಕ್ಕೆ ಅರ್ಜಿ ಸಲ್ಲಿಸಿರುವ ಅರ್ಹತೆ ಪಡೆದಿರುವ ಅಭ್ಯರ್ಥಿಯ ನಡತೆ ನಡವಳಿಕೆಗಳನ್ನು ಪೋಲಿಸರು ಪರಿಶೀಲಿಸಬೇಕೆಂಬ ಕೇಂದ್ರ ಸರ್ಕಾರದ ಶಾಸನವನ್ನು ಬಳಸಬಾರದೆಂದು ಕೂಡ ಸರ್ಕಾರವು ಘೋಷಿಸಿತು.

ಕಮ್ಯುನಿಸ್ಟ್ ಸರ್ಕಾರವು ಬದಲಾಯಿಸಲು ಶ್ರಮಿಸಿದ ಮತ್ತೊಂದು ವಲಯವೆಂದರೆ ರಾಜ್ಯ ಮಟ್ಟದಿಂದ ಅತ್ಯಂತ ಕೆಳಗಿನ ಮಟ್ಟದವರೆಗೂ, ಅಂದರೆ ಪಂಚಾಯತ್ ಮಟ್ಟದವರೆಗೂ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿರುವುದು. ಬಹು ಮುಖ್ಯ ಅಂಶವಾದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣವನ್ನು ಒಳಗೊಂಡಿರುವ ಆಡಳಿತಾತ್ಮಕ ಸುಧಾರಣೆಯ ಇಡೀ ಸಮಸ್ಯೆಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಸರ್ಕಾರವು ನೇಮಿಸಿತು. ಅದು ಒಂದು ವರ್ಷಕ್ಕೂ ಹೆಚ್ಚಿನ ಕಾಲ ಕಾರ್ಯ ನಿರ್ವಹಿಸಿ ಒಂದು ವರದಿಯನ್ನು ಸಲ್ಲಿಸಿತು. ಅದರ ಶಿಫಾರಸಿಗೆ ಅನುಗುಣವಾಗಿ, ವಿಧಾನಸಭೆಯಲ್ಲಿ ಮಂಡಿಸಲು ಸರ್ಕಾರವು ಎರಡು ಮಸೂದೆಗಳನ್ನು ಸಿದ್ಧಪಡಿಸಿತು. ಮೊದಲನೆಯದು, ಗ್ರಾಮ ಮಟ್ಟದಲ್ಲಿ ಕಂದಾಯ ಮತ್ತು ಇತರ ಇಲಾಖೆಗಳು ನಿರ್ವಹಿಸುತ್ತಿದ್ದ ಕೆಲಸಗಳನ್ನು ಚುನಾಯಿತ ಪಂಚಾಯತುಗಳಿಗೆ ವಹಿಸಿಕೊಟ್ಟಿತು. ಎರಡನೆಯದು, ಜಿಲ್ಲಾ ಸಿಬ್ಬಂದಿಗಳು ಮಾಡುತ್ತಿದ್ದ ಕೆಲಸಗಳನ್ನು ಚುನಾಯಿತ ಜಿಲ್ಲಾ ಪರಿಷತ್ತಿಗೆ, ಒಬ್ಬ ಚುನಾಯಿತ ಅಧ್ಯಕ್ಷ ಹಾಗೂ ಮತ್ತೊಬ್ಬ ಜಿಲ್ಲಾಧಿಕಾರಿಯ ಸ್ಥಾನಮಾನದ ಒಬ್ಬ ಶಾಶ್ವತ ಅಧಿಕಾರಿಗೆ ವರ್ಗಾವಣೆ ಮಾಡಿತು.

ಕೇರಳ ಸರ್ಕಾರವು ಪೂರ್ಣ ಐದು ವರ್ಷಗಳ ಕಾಲ ಮುಂದುವರಿದಿದ್ದರೆ, ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯು ಆ ರಾಜ್ಯದಲ್ಲಿ ಗಟ್ಟಿಯಾಗಿ ಬೇರೂರಿರುತ್ತಿತ್ತು.

ಅತ್ಯಂತ ತೀವ್ರವಾದ ವಿವಾದವನ್ನು ಹುಟ್ಟಿಸಿದ ಕಮ್ಯುನಿಸ್ಟ್ ಸರ್ಕಾರದ ಕ್ರಮವೆಂದರೆ ಶಿಕ್ಷಣ ಮಸೂದೆ. ಬಂಡವಾಳಶಾಹಿ-ಭೂಮಾಲಕ ಆಳುವ ವರ್ಗಗಳ ಕೋಪಕ್ಕೆ ತುತ್ತಾಗಿದ್ದ ಕೃಷಿ ಸಂಬಂಧಗಳ ಮಸೂದೆ ಮತ್ತು ಪೋಲಿಸ್ ನೀತಿಗಳ ರೀತಿಯಲ್ಲಿ ಶಿಕ್ಷಣ ಮಸೂದೆಯೂ ಅದೇ ವರ್ಗಗಳವರ, ಮುಖ್ಯವಾಗಿ ಕ್ರಿಶ್ಚಿಯನ್ ಸಮುದಾಯದಲ್ಲಿ ಆ ವರ್ಗಗಳಿಗೆ ಸೇರಿದವರ ಕೆಂಗಣ್ಣಿಗೆ ಗುರಿಯಾಗಿತ್ತು. ಈ ಮಸೂದೆ ಶಿಕ್ಷಣ ಸಂಸ್ಥೆಗಳ ಮಾಲೀಕತ್ವ ಮತ್ತು ಆಡಳಿತಕ್ಕೆ ಸಂಬಂಧಿಸಿತ್ತು. ಇದರಲ್ಲಿ ಒಂದು ಸಮುದಾಯವಾಗಿ ಕ್ರಿಶ್ಚಿಯನ್ನರ ಭಾಗ ದೊಡ್ಡದಿತ್ತು. ಈ ಸಮುದಾಯದ ನಾಯಕತ್ವಕ್ಕೆ ತಮ್ಮ ಧರ್ಮವು ಅಪಾಯದಲ್ಲಿದೆ ಎಂಬ ಭಯವನ್ನು ಅವರ ಜನಸಮೂಹಗಳ ಮನದಲ್ಲಿ ಹುಟ್ಟಿಸಲು ಸಾಧ್ಯವಾಯಿತು.

ಶಿಕ್ಷಣ ಸಂಸ್ಥೆಗಳ ಮೇಲಿನ ಖಾಸಗಿ ಆಡಳಿತದ ವ್ಯವಸ್ಥೆಯನ್ನು ರದ್ದುಮಾಡುವ ಉದ್ದೇಶವೇನೂ ಆ ಮಸೂದೆಯಲ್ಲಿರಲಿಲ್ಲ, ಹೆಚ್ಚು ಮಿತವಾದ ಕ್ರಮವಾಗಿತ್ತು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಶಿಕ್ಷಕರಿಗೆ ಸಂಬಳವನ್ನು ಯಾವುದೇ ಕಡಿತ ಮಾಡದೆ ಆಡಳಿತವು ನೇರವಾಗಿ ಸಂದಾಯ ಮಾಡಬೇಕೆನ್ನುವ ಪ್ರಾಥಮಿಕ ಉದ್ದೇಶವನ್ನು ಅದು ಹೊಂದಿತ್ತು; ಶಿಕ್ಷಕರನ್ನು ಕೆಲಸದಿಂದ ಅವಮಾನತುಗೊಳಿಸುವ ಅಥವಾ ವಜಾಗೊಳಿಸುವ ಅಧಿಕಾರದಿಂದ ವ್ಯವಸ್ಥಾಪಕರನ್ನು ನಿರ್ಬಂಧಿಸುವುದು, ಶಿಕ್ಷಕರನ್ನು ನೇಮಿಸಿಕೊಳ್ಳುವ ವಿಧಾನವನ್ನು ನಿರ್ದೇಶಿಸುವುದು ಮುಂತಾದವುಗಳನ್ನು ಅದರಲ್ಲಿ ಅಳವಡಿಸಲಾಗಿತ್ತು. ಸರ್ಕಾರಿ ಸಂಸ್ಥೆಗಳಲ್ಲಿನ ಶಿಕ್ಷಕರಿಗೆ ಸಿಗುತ್ತಿದ್ದ ಸಂಬಳವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಇರುವವರೂ ಪಡೆಯಬೇಕೆನ್ನುವುದು ಅದರ ಮೂಲ ಆಶಯವಾಗಿತ್ತು. ಬೇರೆ ಪದಗಳಲ್ಲಿ ಹೇಳಬೇಕೆಂದರೆ, ಶಿಕ್ಷಣ ಸಂಸ್ಥೆಗಳ ಮಾಲೀಕತ್ವ ಹಾಗೂ ನಿರ್ವಹಣೆಗಳ ಮೇಲಿನ ಖಾಸಗಿ ಆಡಳಿತ ವರ್ಗದವರ ಹಕ್ಕನ್ನು ಅದು ನಿಯಂತ್ರಿಸುವುದಾಗಿತ್ತು, ರದ್ದು ಮಾಡುವುದಾಗಿರಲಿಲ್ಲ.

ಶಿಕ್ಷಣ ಸಂಸ್ಥೆಗಳ ಮೇಲಿನ ಮಾಲೀಕತ್ವ ಮತ್ತು ವ್ಯವಸ್ಥಾಪಕರೆಂಬ ತಮ್ಮ ಹಕ್ಕುಗಳ ಮೇಲಿನ ನೇರ ದಾಳಿಯಾಗಿದೆ ಎಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲೀಕರು ಈ ಮಸೂದೆಯನ್ನು

ಪುಟ 14 ನೋಡಿ

ಮುಖ್ಯಮಂತ್ರಿಯಾಗಿ ಇಎಂಎಸ್- ಕೇರಳದ ಮೊದಲ ಕಮ್ಯುನಿಸ್ಟ್ ಮಂತ್ರಿಮಂಡಳ





ಚುನಾವಣಾ ಆಯೋಗ ನ್ಯಾಯಯುತವಾಗಿ ಇರಬೇಕಷ್ಟೇ ಅಲ್ಲ, ಹಾಗೆಂದು ಸ್ಪಷ್ಟವಾಗಿ ಕಾಣುವಂತೆಯೂ ಇರಬೇಕು

ಡಿಜಿಟಲ್ ಪ್ರಚಾರ ಮತ್ತು ನಿಧಿ ಸಂಗ್ರಹಕ್ಕೆ ಸಂಬಂಧಪಟ್ಟಂತೆ ಚುನಾವಣಾ ಅಯೋಗಕ್ಕೆ ಸೀತಾರಾಮ್ ಯೆಚುರಿ ಪತ್ರ



ಅಪಾರದರ್ಶಕವಾದ ಚುನಾವಣಾ ಬಾಂಡುಗಳ ನಂತರ, ಕೊವಿ??? ನೆಪ ಮಾಡಿಕೊಂಡು ಡಿಜಿಟಲ್ ಚುನಾವಣಾ ಪ್ರಚಾರದ ಬಗ್ಗೆ ಬಹಳವಾಗಿ ಮಾತಾಡಲಾಗುತ್ತಿದೆ. ಬಿಹಾರ ವಿಧಾನಸಭಾ ಚುನಾವಣೆಗಳನ್ನು ಡಿಜಿಟಲ್ ಚುನಾವಣೆಯಾಗಿ ನಡೆಸಬೇಕು ಎಂಬ ಚುನಾವಣಾ ಅಯೋಗದ ನಿರ್ಧಾರಕ್ಕೆ ವ್ಯಾಪಕ ವಿರೋಧಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ಅದನ್ನು ಸದ್ಯಕ್ಕೆ ಬದಿಗಿಟ್ಟಿದೆ. ಇದನ್ನು ಶಾಶ್ವತವಾಗಿ ಕೈಬಿಡಬೇಕು, ಚುನಾವಣೆಗಳು ಮುಕ್ತವಾಗಿ ಮತ್ತು ನಿಷ್ಪಕ್ಷಪಾತವಾಗಿ ನಡೆಯುವಂತೆ ಖಾತ್ರಿಪಡಿಸಬೇಕಾದ ಸಂವಿಧಾನಿಕ ಹೊಣೆಯಿರುವ ಭಾರತದ ಚುನಾವಣಾ ಆಯೋಗ ನ್ಯಾಯಯುತವಾಗಿರಬೇಕಷ್ಟೇ ಅಲ್ಲ, ಹಾಗೆಂದು ಸ್ಪಷ್ಟವಾಗಿ ಕಾಣುವಂತೆಯೂ ಇರಬೇಕಾದ್ದು ಅಗತ್ಯವಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮುಖ್ಯ ಚುನಾವಣಾ ಅಯುಕ್ತ ಸುನಿಲ್ ಅರೋರಾ ಅವರಿಗೆ ಆಗಸ್ಟ್ 17ರಂದು ಒಂದು ಪತ್ರ ಬರೆದಿದ್ದಾರೆ. ಡಿಜಿಟಲ್ ಚುನಾವಣಾ ಪ್ರಚಾರದ ಪ್ರಯತ್ನಗಳು ಮತ್ತು ಇತ್ತೀಚೆಗೆ ಬೆಳಕಿಗೆ ಬಂದ ಎರಡು ಸಂಗತಿಗಳ ಹಿನ್ನೆಲೆಯಲ್ಲಿ ಅವರು ಈ ಪತ್ರವನ್ನು ಬರೆದಿದ್ದಾರೆ. ಅವರ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:



ಪ್ರಿಯ ಶ್ರೀ ಅರೋರಾ ಜೀ,

ಆರಂಭದಲ್ಲಿ, ಚುನಾವಣಾ ಆಯೋಗ ಬಿಹಾರ ವಿಧಾನಸಭಾ ಚುನಾವಣೆಗಳ ವೇಳೆಯಲ್ಲಿ 64 ವರ್ಷಕ್ಕಿಂತ ಹೆಚ್ಚು ವಯಸ್ಸಾದ ಎಲ್ಲ ಮತದಾರರು ಅಂಚೆ ಮೂಲಕ ಮತದಾನ ಮಾಡಲು ಅವಕಾಶ ನೀಡುವ ತನ್ನ ನಿರ್ಧಾರಕ್ಕೆ ವ್ಯಾಪಕ ಪ್ರತಿಕ್ರಿಯೆ ಬಂದ ನಂತರ ಅದನ್ನು ಸದ್ಯಕ್ಕೆ ನಿಲ್ಲಿಸಿದೆ ಎಂಬ ಸಂಗತಿಯನ್ನು ಒಪ್ಪುತ್ತೇವೆ.ಆದರೆ ಅದನ್ನು ಶಾಶ್ವತವಾಗಿ ಕೈಬಿಡಬೇಕು ಎಂಬುದು ನಮ್ಮ ದೃಢ ಅಭಿಪ್ರಾಯ, ಎಲ್ಲಕ್ಕಿಂತ ಮುಖ್ಯವಾಗಿ ಮತದಾರರ ಭೌತಿಕ ರುಜುವಾತಿನ ನೀತಿಯನ್ನು ಖಾತ್ರಿಪಡಿಸಬೇಕು.

ಇದುವರೆಗೆ ಆಯೋಗ ಯಾವುದೇ ಸುಧಾರಣೆ ಆರಂಭಿಸುವ ಮೊದಲು ಸಮಾಲೋಚನೆಗಳನ್ನು ನಡೆಸುವ ವಾಡಿಕೆಯಿತ್ತು. ಸಮಾಲೋಚನೆಯ ಆ ಹಕ್ಕನ್ನು ನಿರಾಕರಿಸಲಾಗಿದ್ದರೂ ವಿವೇಚನಾಪೂರ್ಣ ತರ್ಕಗಳಿಗೆ ಸಕಾರಾತ್ಮಕ ಸ್ಪಂದನೆ ದೊರೆಯುತ್ತದೆ ಎಂದು ನಾವು ನಂಬಿದ್ದೇವೆ. ಆದ್ದರಿಂದ ನಾವು ಡಿಜಿಟಲ್ ಚುನಾವಣಾ ಪ್ರಚಾರ ಮತ್ತು ಇನ್ನೂ ಮುಖ್ಯವಾಗಿ, ಅದರಡಿಯಲ್ಲಿರುವ ಚುನಾವಣಾ ಪ್ರಚಾರಕ್ಕೆ ಗಮನಾರ್ಹ ಪ್ರಮಾಣದಲ್ಲಿ ಹಣದ ಪ್ರಶ್ನೆಯತ್ತ ತಮ್ಮ ಗಮನ ಸೆಳೆಯುತ್ತೇವೆ.

ಬಿಹಾರದ ಮುಖ್ಯ ಚುನಾವಣಾ ಅಧಿಕಾರಿ ಮಹಾಸೋಂಕಿನ ರಭಸದಿಂದಾಗಿ ಇಡೀ ಚುನಾವಣೆಯನ್ನು ಒಂದು ಡಿಜಿಟಲ್ ವೇದಿಕೆಯಲ್ಲಿ ನಡೆಸಬೇಕು ಎಂಬ ಪ್ರಸ್ತಾವ ಇಟ್ಟುದನ್ನು ಹೆಚ್ಚಿನ ರಾಜಕೀಯ ಪಕ್ಷಗಳು ವಿರೋಧಿಸಿದ್ದು, ಲಭ್ಯತೆಯ ಅಪಾರ ಕೊರತೆಯ ಕಾರಣಕ್ಕಾಗಿಯಷ್ಟೇ ಅಲ್ಲ. ಬದಲಿಗೆ, ಮತದಾರರನ್ನು ಸಂಪರ್ಕಿಸಲು ಬೇಕಾಗಬಹುದಾದ ಅಪಾರ ಹಣಕಾಸು ಸಂಪನ್ಮೂಲಗಳ ಪ್ರಶ್ನೆಯಿಂದಾಗಿ.

ಈ ಬೆಳವಣಿಗೆಗಳನ್ನು ಪರಿಶೀಲಿಸಿ. 2019ರ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ ಆಗ ಬಿಜೆಪಿ ಅಧ್ಯಕ್ಷರಾಗಿದ್ದ ಅಮಿತ್ ಷಾ, ತಮ್ಮ ಪಕ್ಷ ತನ್ನ 32 ಲಕ್ಷ ವಾಟ್ಸ್ ಆಪ್ಸ್ ಗುಂಪುಗಳ ಜಾಲದೊಂದಿಗೆ, ಯಾವುದೇ ಸಂದೇಶವನ್ನು ಅದು ನಿಜವಿರಲಿ, ಸುಳ್ಳಿರಲಿ, ಕೆಲವೇ ಗಂಟೆಗಳೊಳಗೆ ಹರಡಿಸಿ ಬಿಡಬಲ್ಲದು ಎಂದು ಬಹಿರಂಗವಾಗಿಯೇ ಹೇಳಿದ್ದರು. ಹುಸಿ ಸುದ್ದಿಗಳಲ್ಲಿ ಬಹುಪಾಲು ಭಾರತದಿಂದಲೇ ಉತ್ಪಾದನೆಗೊಂಡದ್ದು ಎಂದು ಅಂತರ್ರಾಷ್ಟ್ರೀಯ ನಿಜಾಂಶ ಪತ್ತೆ ಹಚ್ಚುವ ವೆಬ್‌ತಾಣಗಳ ಗಮನಕ್ಕೆ ಬಂದಿದೆ ಎಂಬುದನ್ನು ಇದಕ್ಕೆ ಸೇರಿಸಿಕೊಂಡು ನೋಡಿ. ಮತ್ತು ಈಗ, ಬಿಹಾರ ವಿಧಾನಸಭಾ ಚುನಾವಣೆಗಳ ಮೊದಲು, ಈ ಪಕ್ಷ ಒಂದು ವರ್ಚುವಲ್ ಚುನಾವಣಾ ಪ್ರಚಾರವನ್ನು ಆರಂಭಿಸಿಯೇ ಬಿಟ್ಟಿದೆ. ಷಾ ರವರ ಭಾಷಣಗಳಿಗೆ 72,000 ಎಲ್.ಇ.ಡಿ. ಟಿವಿ ಪರದೆಗಳನ್ನು ಹಾಕಲಾಗಿದೆ. 60 ವರ್ಚುವಲ್ ರ‍್ಯಾಲಿಗಳನ್ನು ನಡೆಸಿದ ನಂತರ, ಬಿಜೆಪಿ ತನ್ನ ಚುನಾವಣಾ ಪ್ರಚಾರದ ಪ್ರಯತ್ನಗಳಲ್ಲಿ 9500 ಐಟಿ ಸೆಲ್ ಮುಖ್ಯಸ್ಥರುಗಳ , ಪ್ರತಿಯೊಂದು ಮತಗಟ್ಟೆಗೆ ಒಂದರಂತೆ 72,000 ವಾಟ್ಸ್ ಆಪ್ಸ್ ಗುಂಪುಗಳನ್ನು ಸಂಯೋಜಿಸುವುದಾಗಿ ಹೇಳಿಕೊಂಡಿದೆ. ಇದರಲ್ಲಿ 50,000 ಕಳೆದೆರಡು ತಿಂಗಳಲ್ಲೇ ರಚನೆಗೊಂಡವುಗಳು.

ತಂತ್ರಜ್ಞಾನ–ಆಧಾರಿತವಾದ ಇಂತಹ ಒಂದು ವ್ಯವಸ್ಥೆಯನ್ನು ಏರ್ಪಡಿಸಲು ಬೇಕಾದ ಮಾನವಶಕ್ತಿಯನ್ನು ನಿಯೋಜಿಸಲು ತಗಲುವ ವೆಚ್ಚ ತಲೆ ಗಿರ್ರೆನಿಸುವಷ್ಟು ಅಗಾಧ. ಚುನಾವಣಾ ಬಾಂಡುಗಳ ಮೂಲಕ ಅನಾಮಧೇಯ ನಿಧಿ ನೀಡಿಕೆ ಬರುವ ಮೊದಲೂ ಕೂಡ ಕಾರ್ಪೊರೇಟ್ ದೇಣಿಗೆಗಳ ಅಂಕಿ–ಅಂಶಗಳಿಂದ ಬಿಜೆಪಿ ಮತ್ತು ಇತರ ಎಲ್ಲ ಪಕ್ಷಗಳ ನಡುವಿನ ಅಂತರ ಅಪಾರ ಎಂಬುದು ಸಾರ್ವಜನಿಕವಾಗಿ ಲಭ್ಯವಿರುವ ಅಂಕಿ–ಅಂಶಗಳಿಂದ ಸ್ಪಷ್ಟವಾಗಿತ್ತು. ಇದು ಗರಿಷ್ಟ ಮಿತಿಯೇ ಇಲ್ಲದ ಅನಾಮಧೇಯ ಕಾರ್ಪೊರೇಟ್ ನಿಧಿ ಸಂಗ್ರಹದೊಂದಿಗೆ ಚುನಾವಣಾ ಪ್ರಜಾಪ್ರಭುತ್ವದ ಮರಣನಾದವಾಗುತ್ತದೆ.

> **ತಂತ್ರಜ್ಞಾನ–ಆಧಾರಿತವಾದ ಇಂತಹ ಒಂದು ವ್ಯವಸ್ಥೆಯನ್ನು ಏರ್ಪಡಿಸಲು ಬೇಕಾದ ಮಾನವಶಕ್ತಿಯನ್ನು ನಿಯೋಜಿಸಲು ತಗಲುವ ವೆಚ್ಚ ತಲೆ ಗಿರ್ರೆನಿಸುವಷ್ಟು ಅಗಾಧ. ಇದು ಗರಿಷ್ಟ ಮಿತಿಯೇ ಇಲ್ಲದ ಅನಾಮಧೇಯ ಕಾರ್ಪೊರೇಟ್ ನಿಧಿ ಸಂಗ್ರಹದೊಂದಿಗೆ ಚುನಾವಣಾ ಪ್ರಜಾಪ್ರಭುತ್ವದ ಮರಣನಾದವಾಗುತ್ತದೆ.**

ಈ ಹಿಂದೆ ಚುನಾವಣಾ ಆಯೋಗ ಚುನಾವಣಾ ಬಾಂಡುಗಳು "ರಾಜಕೀಯ ಪಕ್ಷಗಳಿಗೆ ರಾಜಕೀಯ ನಿಧಿಸಂಗ್ರಹದ ಪಾರದರ್ಶಕತೆಯ ಮೇಲೆ ಗಂಭೀರ ದುಷ್ಪರಿಣಾಮಗಳ" ಸೂಚನೆಯಾಗಲಿದೆ ಎಂದು ಸುಪ್ರಿಂ ಕೋರ್ಟಿಗೆ ಹೇಳಿತ್ತು. ಮತ್ತು 2017ರ ಹಣಕಾಸು ಕಾಯ್ದೆಯಲ್ಲಿ ಆಮೂಲಾಗ್ರ ಬದಲಾವಣೆಗಳು ಮತ್ತು ನಂತರ ಆದಾಯ ತೆರಿಗೆ ಕಾಯ್ದೆಯಲ್ಲೂ, ಹಾಗೆಯೇ ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲೂ ಬದಲಾವಣೆಗಳ ಮೂಲಕ ವ್ಯಾಪ್ತಿಯಿಂದ ಚುನಾವಣಾ ಬಾಂಡುಗಳನ್ನು ಈ ಕುರಿತು ಕಡ್ಡಾಯವಾಗಿ ವರದಿ ಮಾಡಬೇಕೆನ್ನುವ ನಿಯಮಾವಳಿಗಳ ವ್ಯಾಪ್ತಿಯಿಂದ ಹೊರತೆಗೆಯಲಾಗಿದೆ ಎಂಬ ಸಂಗತಿಯತ್ತವೂ ಅದು ಬೊಟ್ಟು ಮಾಡಿತ್ತು.

> **ಚುನಾವಣಾ ಬಾಡ್‌ಗಳನ್ನು ಕುರಿತಂತೆ ಆಯೋಗ ಸುಪ್ರಿಂ ಕೋರ್ಟಿನ ಸಮ್ಮುಖ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಮುಂದಿಟ್ಟಿರುವ ತರ್ಕಗಳ ಪ್ರಕಾರವೂ ಎಲ್ಲರಿಗೂ ಸಮಾನ ನೆಲೆಯಲ್ಲಿ ಸ್ಪರ್ಧೆಗೆ ಅವಕಾಶ ಮಾತ್ರವಲ್ಲ, ಮುಕ್ತ ಮತ್ತು ನ್ಯಾಯಯುತ ಮತದಾನವೂ ಸಾಧ್ಯವಾಗುವದಿಲ್ಲ.**

"ಚುನಾವಣಾ ಬಾಂಡುಗಳ ಮೂಲಕ ಪಡೆದ ದೇಣಿಗೆಗಳನ್ನು ವರದಿ ಮಾಡದಿರುವ ಸನ್ನಿವೇಶದಲ್ಲಿ, ರಾಜಕೀಯ ಪಕ್ಷಗಳ ದೇಣಿಗೆಗಳ ವರದಿಯನ್ನು ಪರಿಶೀಲಿಸಿದಾಗ, ಅವು ರಾಜಕೀಯ ಪಕ್ಷಗಳು ಸರಕಾರೀ ಕಂಪನಿಗಳಿಂದ ಮತ್ತು ವಿದೇಶಿ ಮೂಲಗಳಿಂದ ದೇಣಿಗೆ ಪಡೆಯುವುದನ್ನು ನಿಷೇಧಿಸಿರುವ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 29ಬಿ ಯನ್ನು ಉಲ್ಲಂಘಿಸಿ ಯಾವುದೇ ದೇಣಿಗೆ ಪಡೆದಿದೆಯೇ ಎಂದು ತಿಳಿಯಲು ಸಾಧ್ಯವಾಗುವದಿಲ್ಲ" ಎಂದೂ ಚುನಾವಣಾ ಆಯೋಗ ತನ್ನ ಅಫಿಡವಿಟ್‌ನಲ್ಲಿ ಹೇಳಿತ್ತು.

ಅಲ್ಲದೆ ಈ ಅಫಿಡವಿಟ್‌ನಲ್ಲಿ ಚುನಾವಣಾ ಬಾಂಡುಗಳ ಬಗೆಗಿನ ಈ ಎಲ್ಲ ಸಂದೇಹಗಳನ್ನು ಮೇ 2017ರಲ್ಲಿ ಬರೆದ ಪತ್ರದಲ್ಲಿ ಕಾನೂನು ಮಂತ್ರಾಲಯಕ್ಕೆ ತಿಳಿಸಲಾಗಿತ್ತು ಎಂದೂ ಚುನಾವಣಾ ಆಯೋಗ ಹೇಳಿದೆ. ಈ ತಿದ್ದುಪಡಿಗಳು ಚುನಾವಣಾ ಆಯೋಗ ರಾಜಕೀಯ ಪಕ್ಷಗಳು ಪಡೆದ ದೇಣಿಗೆಗಳು, ಅವುಗಳ ಪರಿಶೋಧಿಸಿದ ವಾರ್ಷಿಕ ಲೆಕ್ಕಪತ್ರ ಮತ್ತು ಚುನಾವಣಾ ವೆಚ್ಚದ ಹೇಳಿಕೆಗಳ ವರದಿಗಳನ್ನು ಸಲ್ಲಿಸುವುದನ್ನು ಕುರಿತು ಪ್ರಕಟಿಸಿರುವ ಮಾರ್ಗಸೂಚಿಗಳ ಹಳಿ ತಪ್ಪಿಸಿವೆ ಎಂದು ತನ್ನ ಅಸಮ್ಮತಿಯನ್ನು ಕೂಡ ಅದು ವ್ಯಕ್ತಪಡಿಸಿತ್ತು.

> **ಆಯೋಗಕ್ಕೆ ಬಿಜೆಪಿ ಸಲ್ಲಿಸಿರುವ ಸಾರ್ವತ್ರಿಕ ಚುನಾವಣೆಗಳು, 2019ರ ಖರ್ಚು–ವೆಚ್ಚದ ವಿವರಗಳಲ್ಲಿ ನಮೋ ಟಿವಿ ವೆಚ್ಚವನ್ನು ತೋರಿಸಿಲ್ಲ ಎಂದು ಈಗ ಪ್ರಕಟಗೊಂಡಿದೆ, ಇದಂತೂ ಚುನಾವಣಾ ಅಪರಾಧವೇ. ತಕ್ಷಣ ಏಳುವ ಪ್ರಶ್ನೆಯೆಂದರೆ ಈ ವಿಷಯದಲ್ಲಿ ಚುನಾವಣಾ ಆಯೋಗ ಬಿಜೆಪಿಯ ವಿರುದ್ಧ ಯಾವುದಾದರೂ ಶಿಕ್ಷಾಕ್ರಮವನ್ನು ಕೈಗೊಂಡಿದೆಯೇ? ಇಲ್ಲವಾದರೆ, ಏಕಿಲ್ಲ?**

ಹಣಕಾಸು ಕಾಯ್ದೆ, 2017 ಜನತಾ ಪ್ರಾತಿನಿಧ್ಯ ಕಾಯ್ದೆ, 1951, ಆದಾಯ ತೆರಿಗೆ ಕಾಯ್ದೆ ಮತ್ತು ಕಂಪನಿ ಕಾಯ್ದೆ ಸೇರಿದಂತೆ ವಿವಿಧ ಕಾನೂನುಗಳನ್ನು ತಿದ್ದುಪಡಿ ಮಾಡಿತು. 2016ರ ಹಣಕಾಸು ಕಾಯ್ದೆಯಲ್ಲಿ ಮಾಡಿದ ಬದಲಾವಣೆಗಳ ಬಗ್ಗೆ ಟಿಪ್ಪಣಿ ಮಾಡುತ್ತ ಚುನಾವಣಾ ಆಯೋಗ ತನ್ನ ಅಫಿಡವಿಟ್‌ನಲ್ಲಿ ಇದು 2010ರ ವಿದೇಶಿ ದೇಣಿಗೆ (ನಿಯಂತ್ರಣ) ಕಾಯ್ದೆ(ಎಫ್‌ಸಿಆರ್‌ಎ)ಯಲ್ಲಿ ಬದಲಾವಣೆಗಳನ್ನು ತಂದು ಭಾರತೀಯ ಕಂಪನಿಗಳಲ್ಲಿ ಹೆಚ್ಚಿನ ಪಾಲುದಾರಿಕೆ ಹೊಂದಿರುವ ವಿದೇಶಿ ಕಂಪನಿಗಳಿಂದ ದೇಣಿಗೆ ಪಡೆಯಲು ಅವಕಾಶವಾಗುತ್ತದೆ, "ಇದು ಎಫ್‌ಸಿಆರ್‌ಎ ಕಾಯ್ದೆಯಲ್ಲಿ ನಿರೂಪಿಸಿರುವಂತೆ ಎಲ್ಲ ವಿದೇಶಿ ಮೂಲಗಳಿಂದ ದೇಣಿಗೆಗಳನ್ನು ನಿಷೇಧಿಸಿರುವ ಈಗಿನ ಕಾನೂನಿನಲ್ಲಿ ತಂದಿರುವ ಒಂದು ಬದಲಾವಣೆ. ಇದು ಭಾರತದಲ್ಲಿನ ರಾಜಕೀಯ ಪಕ್ಷಗಳಿಗೆ ಯಾವುದೇ ಅಡೆತಡೆಯಿಲ್ಲದೆ ವಿದೇಶಿ ಹಣ ಬರಲು, ಆಮೂಲಕ ಭಾರತೀಯ ಧೋರಣೆಗಳ ಮೇಲೆ ವಿದೇಶಿ ಕಂಪನಿಗಳು ಪ್ರಭಾವ ಬೀರುವಂತಾಗುತ್ತದೆ" ಎಂದಿತ್ತು.

ಚುನಾವಣಾ ಬಾಂಡು ಯೋಜನೆಯನ್ನು ಹೆಚ್ಚಿನ ಪಾರದರ್ಶಕತೆ ತರಲೆಂದು ತಂದಿದ್ದರೆ, ಇಂತಹ ದೇಣಿಗೆಗಳ ವಿವರಗಳನ್ನು ಸಾರ್ವಜನಿಕಗೊಳಿಸುವುದನ್ನು ನಿರ್ಬಂಧಿಸಬಾರದು ಎಂದು ಹಲವು ತಜ್ಞರೂ ಅಭಿಪ್ರಾಯ ಪಟ್ಟಿದ್ದಾರೆ.

ಆದ್ದರಿಂದ ಚುನಾವಣಾ ಆಯೋಗ ಸುಪ್ರಿಂ ಕೋರ್ಟಿನ ಸಮ್ಮುಖ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಮುಂದಿಟ್ಟಿರುವ ತರ್ಕಗಳ ಪ್ರಕಾರವೂ ಎಲ್ಲರಿಗೂ ಸಮಾನ ನೆಲೆಯಲ್ಲಿ ಸ್ಪರ್ಧೆಗೆ ಅವಕಾಶ ಮಾತ್ರವಲ್ಲ, ಮುಕ್ತ ಮತ್ತು ನ್ಯಾಯಯುತ ಮತದಾನವೂ ಸಾಧ್ಯವಾಗುವದಿಲ್ಲ.

ಈ ನಡುವೆ, ಇನ್ನೆರಡು ಬೇರೆ ಪ್ರಶ್ನೆಗಳು ಬೆಳಕಿಗೆ ಬಂದಿವೆ, ಇವು ಪ್ರಮುಖ ಪ್ರಶ್ನೆಗಳನ್ನೆತ್ತಿವೆ. ಮೊದಲನೆಯದಾಗಿ, ರಹಸ್ಯಮಯ 'ನಮೋ ಟಿವಿ ಈಗಿರುವ ಕಾನೂನಿಗೆ(ಪರಿಶಿಷ್ಟ–1) ವಿರುದ್ಧವಾಗಿ 2019ರ ಲೋಕಸಭಾ ಚುನಾವಣೆಗಳ ವೇಳೆಯಲ್ಲಿ ಆರಂಭವಾಯಿತು, ಮತ್ತು ಚುನಾವಣೆಗಳ ನಂತರ ರಹಸ್ಯ ರೀತಿಯಲ್ಲಿ ಕಣ್ಮರೆಯಾಯಿತು. ಇದು ಡಿಟಿಹೆಚ್ ವೇದಿಕೆಗಳು ನಡೆಸುತ್ತಿರುವ ವಾಹಿನಿ, ಇದಕ್ಕೆ ಬಿಜೆಪಿ ಹಣ ತೆರುತ್ತದಷ್ಟೇ ಎಂದು ಎಪ್ರಿಲ್ 2019ರಲ್ಲಿ ಚುನಾವಣಾ ಆಯೋಗದ ವಕ್ತಾರರು ಹೇಳಿದರು. ಆದರೆ ಆಯೋಗಕ್ಕೆ ಬಿಜೆಪಿ ಸಲ್ಲಿಸಿರುವ ಖರ್ಚು–ವೆಚ್ಚದ ವಿವರಗಳಲ್ಲಿ ಇದನ್ನು ತೋರಿಸಿಲ್ಲ ಎಂದು ಈಗ ಪ್ರಕಟಗೊಂಡಿದೆ, ಇದಂತೂ ಚುನಾವಣಾ ಅಪರಾಧವೇ. ತಕ್ಷಣ ಏಳುವ ಪ್ರಶ್ನೆಯೆಂದರೆ ಈ ವಿಷಯದಲ್ಲಿ ಚುನಾವಣಾ ಆಯೋಗ ಬಿಜೆಪಿಯ ವಿರುದ್ಧ ಯಾವುದಾದರೂ ಶಿಕ್ಷಾಕ್ರಮವನ್ನು ಕೈಗೊಂಡಿದೆಯೇ? ಇಲ್ಲವಾದರೆ, ಏಕಿಲ್ಲ? ಒಂದು ಸಂಪೂರ್ಣ ಅಸಂದಿಗ್ಧ ದೃಢ ಕ್ರಮ ಇಲ್ಲದಿರುವುದು, ಚುನಾವಣಾ ದುರಾಚರಣೆಗಳನ್ನು ಮುಲಾಜಿಲ್ಲದೆ ಕಿತ್ತುಹಾಕುವುದಂತೂ ಒತ್ತಟ್ಟಿಗಿರಲಿ, ಸಮಾನ ನೆಲೆಯ ಸ್ಪರ್ಧೆಯನ್ನು ಖಾತ್ರಿಗೊಳಿಸುವ ಚುನಾವಣಾ ಆಯೋಗದ ಹೊಣೆಗಾರಿಕೆಯನ್ನು ಗಂಭೀರವಾಗಿ ಪ್ರಶ್ನಿಸಬೇಕಾಗುತ್ತದೆ ಎಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಎರಡನೇ ಪ್ರಶ್ನೆ ಚುನಾವಣಾ ಆಯೋಗದ ಸಾಮಾಜಿಕ ಮಾಧ್ಯಮ ಪ್ರಚಾರಕ್ಕೆ ಸಂಬಂಧಪಟ್ಟಿರುವಂತದ್ದು. ಮಹಾರಾಷ್ಟ್ರದ ಮುಖ್ಯ ಚುನಾವಣಾಧಿಕಾರಿ 2019ರ ವಿಧಾನಸಭಾ ಚುನಾವಣೆಗಳ ಸಮಯದಲ್ಲಿ ಆಯೋಗದ ಚುನಾವಣಾ–ಸಂಬಂಧಿ ಜಾಹೀರಾತುಗಳನ್ನು ಆನ್‌ಲೈನಿನಲ್ಲಿ ಪ್ರಕಟಿಸುವುದನ್ನು ಬಿಜೆಪಿ ಪದಾಧಿಕಾರಿಯೊಬ್ಬರ ಒಡೆತನದ ಒಂದು ಜಾಹೀರಾತು ಮತ್ತು ಸಾಮಾಜಿಕ ಮಾಧ್ಯಮ ಕಂಪನಿಗೆ ವಹಿಸಿದ್ದರು ಎಂದು ಈಗ ಬೆಳಕಿಗೆ ಬಂದಿದೆ. ನಂತರ ಸ್ವತಃ ಭಾರತದ ಚುನಾವಣಾ ಆಯೋಗವೇ 2019ರ ಲೋಕಸಭಾ ಚುನಾವಣೆಗಳಿಗೆ ಇದೇ ಸಾಮಾಜಿಕ ಮಾಧ್ಯಮ ಏಜೆನ್ಸಿಯನ್ನು ನೇಮಿಸಿಕೊಳ್ಳಲು ಅಧಿಕಾರ ನೀಡಿದೆ ಎಂಬುದೂ ಪ್ರಕಟಗೊಂಡಿದೆ. ಈ ವಿಷಯದಲ್ಲಿ ಈಗ ಸಾಕಷ್ಟು ಮಾಹಿತಿಗಳು ಸಾರ್ವಜನಿಕವಾಗಿ ಲಭ್ಯ ಇವೆ. ಚುನಾವಣಾ ಆಯೋಗಕ್ಕೆ ಸ್ವತಂತ್ರ ಸಂವಿಧಾನಿಕ ಸ್ಥಾನಮಾನವಿದೆ, ಸಂವಿಧಾನದ ಕಲಮು 324 ನ್ಯಾಯ ವರ್ತನೆಯನ್ನು ಖಾತ್ರಿಪಡಿಸಬೇಕಾದ ಚುನಾವಣಾ ಆಯೋಗದ ಹೊಣೆಗಾರಿಕೆಯನ್ನು ಗುರುತಿಸಿದೆ. ಆದ್ದರಿಂದ ಭಾರತದ ಚುನಾವಣಾ ಆಯೋಗ ನ್ಯಾಯಯುತವಾಗಿರಬೇಕಷ್ಟೇ ಅಲ್ಲ, ಹಾಗೆಂದು ಸ್ಪಷ್ಟವಾಗಿ ಕಾಣುವಂತೆಯೂ ಇರಬೇಕಾದ್ದು ಅಗತ್ಯವಾಗಿದೆ.

ಇಂತಿ ನಿಮ್ಮ
ಸೀತಾರಾಂ ಯೆಚುರಿ
ಪ್ರಧಾನ ಕಾರ್ಯದರ್ಶಿ, ಸಿಪಿಐ(ಎಂ)

ಲೆಬನಾನ್: ಎಚ್ಚರಿಕೆಯ ಗಂಟೆ!



ಲೆಬನಾನ್ ದೇಶದ ವಿದ್ಯಮಾನಗಳು ಇಡೀ ಮೂರನೇ ಜಗತ್ತಿನ ದೇಶಗಳಿಗೆ ಎಚ್ಚರಿಕೆಯ ಗಂಟೆಯನ್ನು ಬಾರಿಸುತ್ತಿವೆ. ಆರ್ಥಿಕ ಬಿಕ್ಕಟ್ಟಿನಿಂದ ಪೀಡಿತವಾಗಿರುವ ಮೂರನೇ ಜಗತ್ತಿನ ದೇಶಗಳಲ್ಲಿ ಬಿಕ್ಕಟ್ಟು ಮುಂದುವರಿಯುತ್ತಲೇ ಹೋಗುವ ಕಾರಣದ ಮೇಲೆ ಸಾಮ್ರಾಜ್ಯಶಾಹಿಯು ಒಂದು ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುತ್ತದೆ. ಆರ್ಥಿಕ ಬಿಕ್ಕಟ್ಟಿಗೆ ಮೂರನೆಯ ಜಗತ್ತಿನ ದೇಶಗಳ ಸರ್ಕಾರಗಳ ಭ್ರಷ್ಟಾಚಾರವೇ ಕಾರಣವೆಂದು ದೂಷಿಸುವುದು, ನವ ಉದಾರವಾದವೇ ಸೃಷ್ಟಿಸಿದ ಬಿಕ್ಕಟ್ಟನ್ನು ಜಯಿಸುವ ಹೆಸರಿನಲ್ಲಿ, ಮೂರನೆಯ ಜಗತ್ತಿನ ದೇಶಗಳ ಅರ್ಥವ್ಯವಸ್ಥೆಗಳ ಮೇಲೆ ನವ ಉದಾರವಾದವು ಹೊಂದಿರುವ ಹಿಡಿತವು ಮತ್ತಷ್ಟು ಬಿಗಿಯಾಗುವಂತೆ ನೋಡಿಕೊಳ್ಳುವುದು ಮತ್ತು ಮೂರನೇ ಜಗತ್ತಿನ ದೇಶಗಳ ಬಿಕ್ಕಟ್ಟುಗಳನ್ನೇ ಬಳಸಿಕೊಂಡು ಆ ದೇಶಗಳ ಮೇಲೆ ತನ್ನ ಹಿಡಿತವನ್ನು ಮತ್ತಷ್ಟು ಬಲಪಡಿಸಿಕೊಳ್ಳುವುದು.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಮೆಡಿಟರೇನಿಯನ್ ಸಮುದ್ರ ತೀರದಲ್ಲಿರುವ ಲೆಬನಾನ್, ಪಶ್ಚಿಮ ಏಷಿಯಾದ ಒಂದು ಪುಟ್ಟ ದೇಶ. ಆಮದುಗಳನ್ನೇ ಹೆಚ್ಚಾಗಿ ಆಶ್ರಯಿಸಿರುವ ಆ ದೇಶದ ರಾಜಧಾನಿ ಬೈರೂತ್‌ನಲ್ಲಿ ಒಂದು ರಾಸಾಯನಿಕ ವಸ್ತುವನ್ನು ಸಂಗ್ರಹಿಸಿಟ್ಟಿದ್ದ ಸ್ಥಳದಲ್ಲಿ ಆಗಸ್ಟ್ 4ರಂದು ಒಂದು ಭಾರೀ ಸ್ಫೋಟ ಸಂಭವಿಸಿತು. ಈ ದುರಂತಮಯ ಅಪಘಾತದ ನಂತರ ಆ ದೇಶದಲ್ಲಿ ಅನಾವರಣಗೊಳ್ಳುತ್ತಿರುವ ಘಟನೆಗಳು ಇಡೀ ಮೂರನೇ ಜಗತ್ತಿಗೆ ಒಂದು ಎಚ್ಚರಿಕೆ ನೀಡುತ್ತವೆ. ಪ್ರಸಕ್ತ ಜಾಗತಿಕ ಆರ್ಥಿಕ ಹಿಂಜರಿತದ ಪರಿಣಾಮಗಳು ತೀವ್ರವಾಗಿ ತಟ್ಟಿರುವ ಕಾರಣದಿಂದಾಗಿ, ಕೊರೋನಾ ಸಾಂಕ್ರಾಮಿಕವು ಅಪ್ಪಳಿಸುವ ಬಹಳ ದಿನಗಳ ಮುನ್ನವೇ ಲೆಬನಾನ್ ಆರ್ಥಿಕ ಸಂಕಷ್ಟದಲ್ಲಿತ್ತು. ಕರೋನಾದಿಂದಾಗಿ ಆ ಸಂಕಷ್ಟಗಳು ಮತ್ತಷ್ಟು ಹೆಚ್ಚಿದ ಪರಿಣಾಮವಾಗಿ ಲೆಬನಾನ್‌ನ ಅರ್ಥವ್ಯವಸ್ಥೆಯು ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ. ಲೆಬನಾನಿನ ದುಡಿಮೆಗಾರರು ಕೊಲ್ಲಿ ದೇಶಗಳಿಂದ ಸಂಪಾದಿಸಿ ಕಳಿಸುತ್ತಿದ್ದ ಹಣ ಮತ್ತು ಪ್ರವಾಸೋದ್ಯಮ, ಈ ಎರಡೂ ಮೂಲಗಳಿಂದ ಆ ದೇಶವು ಸಾಕಷ್ಟು ವಿದೇಶಿ ವಿನಿಮಯವನ್ನು ಗಳಿಸುತ್ತಿತ್ತು. ಕರೋನಾದಿಂದಾಗಿ ಹೊರ ದೇಶಗಳಿಂದ ಈ ಎರಡೂ ಬಾಬ್ತಿನಿಂದ ಬರುತ್ತಿದ್ದ ವಿದೇಶಿ ವಿನಿಮಯವು ನಿಂತು ಹೋದ ಕಾರಣದಿಂದಾಗಿ ಲೆಬನಾನಿನ ಕರೆನ್ಸಿಯ ಮೌಲ್ಯವು ಅಪಾರವಾಗಿ ಅಪಮೌಲ್ಯಗೊಂಡಿದೆ. ಹಾಗಾಗಿ, ಲೆಬನಾನ್ ಹೊರ ದೇಶಗಳಿಂದ ಪಡೆದ ಸಾಲವನ್ನು ತೀರಿಸುವುದು (ಸಾಲದ ಕಂತು ಕಟ್ಟುವುದು) ಅಸಾಧ್ಯವಾಯಿತು. ಇಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಜೀವನಾವಶ್ಯಕ ವಸ್ತುಗಳ ಆಮದುಗಳನ್ನೂ ತೀವ್ರವಾಗಿ ಕಡಿತಮಾಡಿತು. ಪರಿಣಾಮವಾಗಿ ಸರಕು-ಸರಂಜಾಮುಗಳ ಅಭಾವ ಉಂಟಾಯಿತು. ಅದರಿಂದಾಗಿ ಹಣದುಬ್ಬರವು ಶೇ.56ರ ಮಟ್ಟಕ್ಕೆ ಏರಿತು.

ಕೊರೊನಾ ಹರಡುವ ಮೊದಲೇ ಸಂಕಷ್ಟಕ್ಕೊಳಗಾಗಿದ್ದ ಲೆಬನಾನಿನ ಸಮಸ್ಯೆಗಳು ಕೊರೊನಾದಿಂದಾಗಿ ಮತ್ತಷ್ಟು ಉಲ್ಬಣಗೊಂಡವು. ಇದೇ ರೀತಿಯ ವಿದ್ಯಮಾನಗಳನ್ನು ತೃತೀಯ ಜಗತ್ತಿನ ಸುಮಾರು ಎಲ್ಲ ದೇಶಗಳಲ್ಲೂ ಕಾಣಬಹುದು. ಈ ಸಂಕಷ್ಟಗಳು ನವ ಉದಾರ ನೀತಿಗಳನ್ನು ಅನುಸರಿಸುವ ಎಲ್ಲ ದೇಶಗಳನ್ನೂ ತಪ್ಪದೆ ಕಾಡುತ್ತವೆ. ಹಾಗಾಗಿ ಈ ದೇಶಗಳ ಹಣೆಬರಹವು ಜಾಗತಿಕ ಅರ್ಥವ್ಯವಸ್ಥೆಯ ಏಳು-ಬೀಳಿನೊಂದಿಗೆ ಬಿಗಿಯಾಗಿ ಗಂಟು ಹಾಕಿಕೊಂಡಿದೆ.

ಇಂತಹ ಆಘಾತದಿಂದ ಹೊರಬರಲು ಲೆಬನಾನ್ ಸರ್ಕಾರವು ಕನಿಷ್ಠ 10-15 ಶತಕೋಟಿ ಡಾಲರ್ ಸಾಲವನ್ನು ತಕ್ಷಣವೇ ಹೊರ ದೇಶಗಳಿಂದ ಪಡೆಯಲು ಪರದಾಡುತ್ತಿದೆ. ಆದರೆ, ಹಿಂದೆ ಹೊರ ದೇಶಗಳಿಂದ ಪಡೆದ ಸಾಲದ ಕಂತು ಕಟ್ಟುವ ಜವಾಬ್ದಾರಿಯನ್ನು ನಿರ್ವಹಿಸಲು ಮಾರ್ಚ್ ತಿಂಗಳಿನಲ್ಲೇ ವಿಫಲವಾದ ಕಾರಣದಿಂದಾಗಿ, ಹೊಸದಾಗಿ ಸಾಲ ಕೊಡಲು ಯಾವ ದೇಶವೂ ಮುಂದೆ ಬರುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಲೆಬನಾನಿನ ಸರ್ಕಾರವು ಜನರ ವಿಶ್ವಾಸಾರ್ಹತೆ ಕಳೆದುಕೊಂಡಿರುವ ಸಂಗತಿಯಲ್ಲಿ ಆಶ್ಚರ್ಯವೇನಿಲ್ಲ. ಆದರೆ, ಸರ್ಕಾರವು ಜನರ ವಿಶ್ವಾಸಾರ್ಹತೆ ಉಳಿಸಿಕೊಳ್ಳುವ ಅರ್ಹತೆ ಹೊಂದಿಲ್ಲ ಎಂಬ ಅಂಶವನ್ನು ಸಮರ್ಥಿಸುವ ಸಲುವಾಗಿ "ಭ್ರಷ್ಟಾಚಾರ"ದ ಕಥನವನ್ನು ಉಣಬಡಿಸಲಾಗುತ್ತಿದೆ. ಅನಿಷ್ಟಗಳಿಗೆಲ್ಲ ಶನೀಶ್ವರನೇ ಹೊಣೆ ಎಂಬಂತೆ ಲೆಬನಾನಿನ ಆರ್ಥಿಕ ಸಂಕಷ್ಟಗಳಿಗೆ ' ಸರಕಾರವನ್ನು ಮತ್ತು ಇಡೀ ರಾಜಕೀಯ ವರ್ಗವನ್ನೇ ಬಾಧಿಸುತ್ತಿರುವ "ಭ್ರಷ್ಟಾಚಾರ"ವೇ ಕಾರಣ ಎಂದು ದೂಷಿಸಲಾಗುತ್ತಿದೆ.

ಈ ಭ್ರಷ್ಟಾಚಾರದ ಕಥನವು ಹೊಸದೇನೂ ಅಲ್ಲ. ಅದರಲ್ಲಿ ಸುಳ್ಳೂ ಇಲ್ಲ. ಅದು ಆಶ್ಚರ್ಯವನ್ನೂ ಉಂಟುಮಾಡುವುದಿಲ್ಲ. ಆದರೆ, ಜಾಗತಿಕ ಅರ್ಥ ವ್ಯವಸ್ಥೆಯು ಹಿಂಜರಿತದತ್ತ ಜಾರುತ್ತಿರುವ ಸನ್ನಿವೇಶದಲ್ಲಿ, ನವ ಉದಾರವಾದಿ ನೀತಿಗಳ ಬೆನ್ನುಹತ್ತಿದ ದೇಶಗಳು ಎದುರಿಸುತ್ತಿರುವ ಬಿಕ್ಕಟ್ಟಿನಿಂದ ನರಳುತ್ತಿರುವ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಉದ್ದೇಶವನ್ನು ಈ ಭ್ರಷ್ಟಾಚಾರದ ಕಥನವು ಈಡೇರಿಸುತ್ತದೆ.

ಮೂರನೆಯ ಜಗತ್ತಿನ ದೇಶಗಳ ಬಹುತೇಕ ಸರ್ಕಾರಗಳು ಭ್ರಷ್ಟಾಚಾರದಲ್ಲಿ ಮುಳುಗಿವೆ ಎಂಬುದು ನಿಜವೇ. ಆದರೆ, ಭ್ರಷ್ಟಾಚಾರದಿಂದಾಗಿಯೇ ಆರ್ಥಿಕ ಬಿಕ್ಕಟ್ಟು ಉಂಟಾಗಿದೆ ಎನ್ನುವ ರೀತಿಯಲ್ಲಿ ಈ ಭ್ರಷ್ಟಾಚಾರದ ಕಥನವನ್ನು ನಿರೂಪಿಸಲಾಗುತ್ತಿದೆ. ಎರಡು ಸ್ಪಷ್ಟ ಕಾರಣಗಳಿಂದಾಗಿ ಈ ನಿರೂಪಣೆಯಲ್ಲಿ ದೋಷವಿದೆ. ಮೊದಲನೆಯದಾಗಿ, ಇಡೀ ಜಗತ್ತನ್ನೇ ವ್ಯಾಪಿಸಿರುವ ಈ ಬಿಕ್ಕಟ್ಟಿನ ಸ್ವರೂಪದ ಬಗ್ಗೆ ಕೊಡುವ ವಿವರಣೆಗಳು ಅಪೂರ್ಣವಾಗಿವೆ. ಏಕೆಂದರೆ, ಈ ಬಿಕ್ಕಟ್ಟು ಕೇವಲ ತೃತೀಯ ಜಗತ್ತಿನ ದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ. ಜಗತ್ತಿನ ಮುಂದುವರಿದ ಬಹುತೇಕ ಬಂಡವಾಳಶಾಹಿ ದೇಶಗಳೂ ಈ ಬಿಕ್ಕಟ್ಟಿಗೆ ಒಳಗಾಗಿವೆ. ಎರಡನೆಯದಾಗಿ, ಎಲ್ಲೆಲ್ಲೂ ತಾಂಡವವಾಡುತ್ತಿರುವ ಭ್ರಷ್ಟಾಚಾರವು ನವ ಉದಾರ ಆರ್ಥಿಕ ಆಡಳಿತದ ಒಂದು ಜಾಯಮಾನವೇ ಆಗಿದೆ. ಈ ಹಿಂದೆಯೂ ಭ್ರಷ್ಟಾಚಾರವಿತ್ತು ಎಂಬುದು ನಿಜವೇ. ಹಿಂದೆ ಅಸ್ತಿತ್ವದಲ್ಲಿದ್ದ ನಿಯಂತ್ರಣ-ಪ್ರಧಾನ ಆಡಳಿತವು ಭ್ರಷ್ಟಾಚಾರಕ್ಕೆ ಹೇಳಿ ಮಾಡಿಸಿದಂತೆಯೇ ಇತ್ತು ಎಂಬುದೂ ನಿಜವೇ. ಆದರೆ, ಬಹು ದೊಡ್ಡ ಪ್ರಮಾಣದ ಖಾಸಗೀಕರಣದ ಮೂಲಕ ಗುರುತಿಸಿಕೊಂಡ ಆಡಳಿತವೂ ಭ್ರಷ್ಟಾಚಾರದಲ್ಲಿ ತೊಡಗುತ್ತದೆ ಮತ್ತು ಸರ್ಕಾರದ ಖಜಾನೆಯಿಂದ ಸಾಕಷ್ಟು ಪ್ರಮಾಣದ ಕಾಣಿಕೆ/ಭಕ್ಷೀಸು ಪಡೆದ ಬಂಡವಾಳಿಗರೂ ಸಹ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂಬುದೂ ನಿಜವೇ. ವಾಸ್ತವವಾಗಿ, ನಿಯಂತ್ರಣ ಮುಕ್ತ ಎಂದೇ ಹೇಳಿಕೊಳ್ಳುವ ಆಡಳಿತದಲ್ಲೇ, ಅಂದರೆ ನವ ಉದಾರ ಆಳ್ವಿಕೆಯಲ್ಲೇ ಮಿತಿ ಮೀರಿದ ಪ್ರಮಾಣದ ಭ್ರಷ್ಟಾಚಾರವಿದೆ.

ಭ್ರಷ್ಟಾಚಾರವು ವ್ಯಾಪಕವಾಗಿ ಹರಡುತ್ತಿದ್ದ ಸಂದರ್ಭದಲ್ಲಿ, ಸರ್ಕಾರದ ವಿರುದ್ಧ ಜನರ ಆಕ್ರೋಶವು ಭುಗಿಲೇಳುವ ಹಿನ್ನೆಲೆಯಲ್ಲಿ, ಬೈರೂತ್‌ನಲ್ಲಿ ಒಂದು ಸ್ಫೋಟ ಸಂಭವಿಸಿದೆ. ಬೈರೂತ್ ಬಂದರಿನ ಬಳಿ ಅಮೋನಿಯಂ ನೈಟ್ರೇಟ್‌ನ ಅಪಾಯಕಾರಿ ಸಂಗ್ರಹವೊಂದರ ಸ್ಫೋಟಕ್ಕೆ 200 ಮಂದಿ ಬಲಿಯಾಗಿದ್ದು, 5000 ಜನರು ಗಾಯಗೊಂಡಿದ್ದು ಅಪಾರ ಸಂಖ್ಯೆಯ ಜನರು ನಿರಾಶ್ರಿತರಾಗಿದ್ದಾರೆ. ಅಪಾರ ಆಸ್ತಿ ಹಾನಿಗೊಳಗಾಗಿದೆ. ಜನರಿಗೆ ಸೂಕ್ತ ಪರಿಹಾರ ಒದಗಿಸುವಲ್ಲಿ ಸರ್ಕಾರ ವಿಫಲವಾಗಿದೆ. ಇದು ಸರ್ಕಾರ ಮತ್ತು ರಾಜಕೀಯ ವರ್ಗದ ವಿರುದ್ಧ ಜನರ ಭುಗಿಲೆದ್ದ ಆಕ್ರೋಶವನ್ನು ಮತ್ತಷ್ಟು ಹೆಚ್ಚಿಸಿದೆ. ಆಡಳಿತದ ಬದಲಾವಣೆಯನ್ನು ಒತ್ತಾಯಿಸಿ ಬೀದಿಗಿಳಿದು ಪ್ರತಿಭಟಿಸುತ್ತಿರುವ ಜನರು ಪೊಲೀಸರೊಂದಿಗೆ ಘರ್ಷಣೆಗೂ ಇಳಿದಿದ್ದಾರೆ. ಘರ್ಷಣೆಗಳಲ್ಲಿ ಈ ವರೆಗೆ ಸುಮಾರು 500 ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಒಂದು ಬಿಕ್ಕಟ್ಟು ಪೀಡಿತ ದೇಶದಲ್ಲಿ ಆಡಳಿತದ ಬದಲಾವಣೆಯನ್ನು ಆಗ್ರಹಿಸಿ ಪ್ರತಿಭಟನೆ ಮಾಡುವುದು ಆಶ್ಚರ್ಯದ ಘಟನೆಯೂ ಅಲ್ಲ, ಅಭೂತಪೂರ್ವ ಘಟನೆಯೂ ಅಲ್ಲ. ಆದರೆ, ಈ ಸನ್ನಿವೇಶವನ್ನು ಸಾಮ್ರಾಜ್ಯಶಾಹಿಯು ಬಳಸಿಕೊಳ್ಳುತ್ತಿರುವ ರೀತಿಯು ಮಹತ್ವ ಪಡೆಯುತ್ತದೆ. ಸ್ಫೋಟ ಘಟಿಸಿದ ನಂತರ ಬೈರೂತ್‌ಗೆ ಬಂದಿಳಿದ ಮೊದಲ ನಾಯಕನೆಂದರೆ, ಫ್ರಾನ್ಸಿನ ಅಧ್ಯಕ್ಷ ಇಮ್ಯಾನುಯಲ್ ಮ್ಯಕ್ರಾನ್. ಈ ವ್ಯಕ್ತಿಯ ಹೆಗ್ಗಳಿಕೆ ಎಂದರೆ, ಆತ, ಮರೈನ್ ಲೆ ಪೆನ್ ಗಿಂತ ಲೇಸು. (ಮ್ಯಕ್ರಾನ್ ಒಬ್ಬ ಫ್ಯಾಸಿಸ್ಟ್ ಅಲ್ಲ ಎಂಬ ನೆಲೆಯಲ್ಲಿ, ಫ್ಯಾಸಿಸ್ಟ್ ನಾಯಕಿ ಲೆ ಪೆನ್ ಗಿಂತ ಆತ ವಾಸಿ ಎಂದು ಭಾವಿಸಿದ ಫ್ರೆಂಚ್ ಮತದಾರರು ಆತನನ್ನು ಅಧ್ಯಕ್ಷಗಿರಿಗೆ ಆಯ್ಕೆ ಮಾಡಿದ್ದು ಸರಿಯಾಗಿಯೇ ಇದೆ). ಎರಡನೇ ಮಹಾಯುದ್ಧಕ್ಕಿಂತ ಹಿಂದೆ ಲೆಬನಾನ್ ದೇಶವು ಫ್ರೆಂಚ್ ವಸಾಹತುಶಾಹಿ ಸಾಮ್ರಾಜ್ಯದ ಭಾಗವಾಗಿತ್ತು. ಸಾಮ್ರಾಜ್ಯಶಾಹಿ ದಿನಗಳನ್ನು ನೆನಪಿಸಿ ಕೊಡುವ ರೀತಿಯಲ್ಲಿ, ಸಾಮ್ರಾಜ್ಯಶಾಹಿಯ ದರ್ಪದ ಶೈಲಿಯಲ್ಲಿ, "ರಾಜಕೀಯ ಮತ್ತು ಆರ್ಥಿಕ ಸುಧಾರಣೆ"ಗಳನ್ನು ಕೈಗೊಂಡರೆ ಲೆಬನಾನ್ ಜನರಿಗೆ ನೆರವು ನೀಡುವುದಾಗಿ ಮ್ಯಕ್ರಾನ್ ಘೋಷಣೆ ಮಾಡಿದರು. ಆನಂತರ, "ಲೆಬನಾನ್ ಜನರು ತುಂಬಾ ತೊಂದರೆ ಅನುಭವಿಸಿದ್ದಾರೆ" ಮತ್ತು "ಲೆಬನಾನಿನ ಆರ್ಥಿಕ ಸಮೃದ್ಧಿಯನ್ನು ಹಾಗೂ ವಿದೇಶಿ ಒತ್ತಡಗಳಿಂದ ಮುಕ್ತವಾದ, ಭ್ರಷ್ಟಾಚಾರ-ರಹಿತ, ಪಾರದರ್ಶಕ ಹಾಗೂ ಉತ್ತರದಾಯಿತ್ವದ ಒಂದು ಆಡಳಿತವನ್ನು ಪಡೆಯಲು ಹಾತೊರೆಯುತ್ತಿರುವ ಲೆಬನಾನ್ ಜನರನ್ನು ಅಮೇರಿಕಾ ದೀರ್ಘಕಾಲದಿಂದಲೂ ಬೆಂಬಲಿಸುತ್ತಾ ಬಂದಿದೆ" ಎಂಬ ಹೇಳಿಕೆಗಳೊಂದಿಗೆ ಪ್ರದರ್ಶನಕಾರರ ಬೆಂಬಲಕ್ಕೆ ಅಮೇರಿಕಾ ಧುಮುಕಿತು.

ಮ್ಯಕ್ರಾನ್ ಯಾವುದನ್ನು "ರಾಜಕೀಯ ಸುಧಾರಣೆಗಳು" ಎಂದು ಎಣಿಸುತ್ತಾರೋ ಮತ್ತು ಯಾವುದನ್ನು "ಲೆಬನಾನಿನ ಆರ್ಥಿಕ ಸಮೃದ್ಧಿ ಹಾಗೂ ವಿದೇಶಿ ಒತ್ತಡಗಳಿಂದ ಮುಕ್ತವಾದ, ಭ್ರಷ್ಟಾಚಾರ-ರಹಿತ, ಪಾರದರ್ಶಕ ಹಾಗೂ ಉತ್ತರದಾಯಿತ್ವದ ಒಂದು ಆಡಳಿತವನ್ನು" ಬೆಂಬಲಿಸುವುದಾಗಿ ಅಮೇರಿಕಾ ಹೇಳುತ್ತದೆಯೋ ಅದರ ಅರ್ಥವೆಂದರೆ, ಲೆಬನಾನಿನಲ್ಲಿ ಪಾಶ್ಚಿಮಾತ್ಯ ದೇಶಗಳ ಪರವಾಗಿರುವ ಒಂದು ಆಡಳಿತವನ್ನು ಸ್ಥಾಪಿಸುವುದು. ಲೆಬನಾನಿನಲ್ಲಿ ಸ್ಥಾಪಿಸಲು ಬಯಸುವ ಈ ಸರ್ಕಾರವು ಇಸ್ರೇಲ್‌ನೊಂದಿಗೆ ಸ್ನೇಹದಿಂದಿರಬೇಕು, ಹೇಗೆಂದರೆ, ಈಗಿರುವ ಇರಾನ್ ಬೆಂಬಲಿತ ಹೆಜ್ಬೊಲ್ಲಾ ಬೆಂಬಲವನ್ನು ಹೊಂದಿರುವ ಪ್ರಸ್ತುತ ಆಡಳಿತದಂತಲ್ಲದೆ. ಅದೇ ರೀತಿಯಲ್ಲಿ ಮ್ಯಕ್ರಾನ್ ಯಾವುದನ್ನು "ಆರ್ಥಿಕ ಸುಧಾರಣೆಗಳು" ಎಂದು ಎಣಿಸುತ್ತಾರೋ ಮತ್ತು ಯಾವುದನ್ನು "ಲೆಬನಾನ್ ಜನರ ಆರ್ಥಿಕ ಸಮೃದ್ಧಿಯ ಅನ್ವೇಷಣೆಯನ್ನು ಬೆಂಬಲಿಸುವುದು" ಎಂದು ಅಮೇರಿಕಾ ಹೇಳುತ್ತದೆಯೋ ಅದು ನವ ಉದಾರವಾದದ ತೊರೆಯುವಿಕೆಯಲ್ಲ. ಅದು, ನವ ಉದಾರವಾದದ ಮುಂದುವರಿಕೆಯ ಬದ್ಧತೆ ಎಂದು ಅರ್ಥೈಸುತ್ತದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಒಂದು ವೇಳೆ, ಹೆಜ್ಬೊಲ್ಲಾ ಬೆಂಬಲಿತ ಸರ್ಕಾರವನ್ನು ಕಿತ್ತೊಗೆದು, ಅದರ ಸ್ಥಾನದಲ್ಲಿ ನವ ಉದಾರವಾದಕ್ಕೆ ಬದ್ಧವಾದ, ಪಾಶ್ಚಾತ್ಯ ದೇಶಗಳ ಪರವಾದ ಮತ್ತು ಇಸ್ರೇಲ್ ಪರ ಸರ್ಕಾರವನ್ನು ಸ್ಥಾಪಿಸಿದರೆ, ಸಾಮ್ರಾಜ್ಯಶಾಹಿ ರಾಷ್ಟ್ರಗಳು ಲೆಬನಾನ್‌ಗೆ ಸಾಲ ಕೊಡುತ್ತವೆ.

ಸಾಮ್ರಾಜ್ಯಶಾಹಿ ದೇಶಗಳ ಈ ಇಷ್ಟಾರ್ಥವು ಕೈಗೂಡುತ್ತದೆ ಎಂದೇ ಒಂದು ಕ್ಷಣ ಭಾವಿಸೋಣ. ಈ ದೇಶಗಳು ಒದಗಿಸುವ ಸಾಲವನ್ನು ಸ್ವಲ್ಪ ಸಮಯದ ನಂತರ ಲೆಬನಾನ್ ಮರುಪಾವತಿಸಲೇ ಬೇಕಾಗುತ್ತದೆ. ಅಂತಹ ಮರುಪಾವತಿಗೆ/ ಸಾಲದ ಕಂತು ಕಟ್ಟಲು ಹಣ ಬರುವುದಾದರೂ ಎಲ್ಲಿಂದ? ಈ ಸಾಂಕ್ರಾಮಿಕ ರೋಗವು ಒಂದಲ್ಲಾ ಒಂದು ದಿನ ಕೊನೆಗೊಂಡು, ಪ್ರವಾಸೋದ್ಯಮದ ಮತ್ತು ಉದ್ಯೋಗ ಅರಸಿ ಕೊಲ್ಲಿ ದೇಶಗಳಿಗೆ ಹೋದವರಿಂದ ವಿದೇಶಿ ವಿನಿಮಯ ಲಭ್ಯವಾಗುತ್ತದೆ ಎಂಬುದು ನಿಜವೇ. ಅಷ್ಟು ಹಣ ಸಾಲದ ಮರುಪಾವತಿಗೆ ಸಾಲದು. ಆದರೆ, ಇಲ್ಲಿರುವ ಮುಖ್ಯವಾದ ಅಂಶ ಏನೆಂದರೆ, ಲೆಬನಾನ್‌ನ ಬಿಕ್ಕಟ್ಟು ಕೊರೊನಾದಿಂದಲೇ ಉಂಟಾದದ್ದಲ್ಲ. ಈ ಸಾಂಕ್ರಾಮಿಕವು ಹರಡುವುದಕ್ಕೂ ಮೊದಲೇ ಲೆಬನಾನ್ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿತ್ತು. ಸಾಂಕ್ರಾಮಿಕವು ಆರ್ಥಿಕ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿತ್ತು, ಅಷ್ಟೇ. ಈ ವರ್ಷದ ಮಾರ್ಚ್ ತಿಂಗಳಿನಲ್ಲೇ ಲೆಬನಾನ್ ಹೊರ ದೇಶಗಳ ಸಾಲ ಮರುಪಾವತಿ ಮಾಡುವಲ್ಲಿ ವಚನಭ್ರಷ್ಟವಾಗಿತ್ತು (ಸಾಲದ ಕಂತು ಕಟ್ಟುವಲ್ಲಿ ವಿಫಲವಾಗಿತ್ತು). ಈ ವಿದ್ಯಮಾನದಿಂದ ನಮಗೆ ತಿಳಿದುಬರುವುದು ಏನೆಂದರೆ, ಮೂರನೆಯ ಜಗತ್ತಿನ ಇತರ ದೇಶಗಳಲ್ಲಿ ಆಗಿರುವಂತೆಯೇ, ಲೆಬನಾನಿನ ಆರ್ಥಿಕ ಸಂಕಷ್ಟದ ಮೂಲವೂ ಜಾಗತಿಕ ಅರ್ಥ ವ್ಯವಸ್ಥೆಯ ಮಂದಗತಿಯೊಂದಿಗೇ ಸೇರಿಕೊಂಡಿದೆ. ಮಂದಗತಿಯಲ್ಲಿ ಒದ್ದಾಡುತ್ತಿರುವ ಜಾಗತಿಕ ಅರ್ಥ ವ್ಯವಸ್ಥೆಯು ಮುಂಬರುವ ಒಂದೆರಡು ವರ್ಷಗಳಲ್ಲಿ ಚೇತರಿಸಿಕೊಳ್ಳುವ ಯಾವ ಲಕ್ಷಣಗಳೂ ಗೋಚರಿಸುತ್ತಿಲ್ಲ. ಆದ್ದರಿಂದ, ಸಾಲ

ಪುಟ 14 ನೋಡಿ





ಲೆಬನಾನ್: ಎಚ್ಚರಿಕೆಯ ಗಂಟೆ!

ಪುಟ 13 ರಿಂದ

ಮರುಪಾವತಿಯನ್ನು ಖಾತ್ರಿಪಡಿಸಿಕೊಳ್ಳಲು ಜನರ ಕೈಯಲ್ಲಿರುವ ಆದಾಯವನ್ನು ಹಿಂಡುವ "ಮಿತವ್ಯಯ" ಕ್ರಮಗಳನ್ನು ಜಾರಿಗೊಳಿಸುವಂತೆ ಸಾಲದಾತರು ಒತ್ತಾಯ ಹೇರುವುದು ಖಚಿತ.

ಹೊರ ದೇಶಗಳಿಂದ ಸಾಲ ದೊರೆತ ಕೂಡಲೇ ಲೆಬನಾನಿನ ಪಾವತಿ ಶೇಷದ (ವಿದೇಶ ವ್ಯಾಪಾರದ ಬಾಕಿ ಚುಕ್ತಾ) ಸಮಸ್ಯೆ ಸ್ವಲ್ಪ ಮಟ್ಟಿಗೆ ತಗ್ಗುತ್ತದೆ. ಹಣದುಬ್ಬರದ ದರವೂ ಸ್ವಲ್ಪ ಮಟ್ಟಿಗೆ ತಗ್ಗುತ್ತದೆ. ಆದರೆ, ಜನರ ಆದಾಯವನ್ನು ಹಿಂಡುವ "ಮಿತವ್ಯಯ" ಕ್ರಮಗಳನ್ನು ಹೇರಲೇಬೇಕಾಗುತ್ತದೆ. ಈ "ಮಿತವ್ಯಯ" ನೀತಿಯ ಪಾಲನೆಯು ಬೇರೊಂದು ರೀತಿಯಲ್ಲಿ ಜನರಿಗೆ ನೋವುಂಟು ಮಾಡುತ್ತದೆ. ಅದೇ ಸಮಯದಲ್ಲಿ, ವಿದೇಶಿ ಸಾಲಗಳ ತಕ್ಷಣದ ಲಭ್ಯತೆಯು ನವ ಉದಾರವಾದಿ ನೀತಿಗಳನ್ನು ಅನುಸರಿಸುವುದನ್ನು ಹೊರತುಪಡಿಸಿ, ಬೇರೆ ಯಾವುದೇ ಆಯ್ಕೆಯ ಅನ್ವೇಷಣೆಯಲ್ಲಿ ತೊಡಗದಂತೆ ತಡೆಯುತ್ತದೆ. "ಆರ್ಥಿಕ ಸಮೃದ್ಧಿ" ಎನ್ನುವುದು ಬಿಸಿಲ್ಗುದುರೆಯ ಬೆನ್ನಟ್ಟಿದಂತಾಗುತ್ತದೆ. ಆದ್ದರಿಂದ, ಲೆಬನಾನಿನ ಆರ್ಥಿಕ ಬಿಕ್ಕಟ್ಟು ಮುಂದುವರಿಯುತ್ತಲೇ ಹೋಗುತ್ತದೆ.

ಲೆಬನಾನಿನ ಐತಿಹಾಸಿಕ ಮತ್ತು ಭೌಗೋಳಿಕ ನಿರ್ದಿಷ್ಟತೆಗಳ ಹೊರತಾಗಿಯೂ, ಲೆಬನಾನ್ ಪ್ರಕರಣವು ಮೂರನೇ ಜಗತ್ತಿನ ದೇಶಗಳಿಗೆ ಬಹಳ ಮುಖ್ಯವಾಗುತ್ತದೆ. ಏಕೆಂದರೆ, ಆ ದೇಶದ ವಿದ್ಯಮಾನಗಳು ಇಡೀ ಮೂರನೇ ಜಗತ್ತಿನ ದೇಶಗಳಿಗೆ ಎಚ್ಚರಿಕೆಯ ಗಂಟೆಯನ್ನು ಬಾರಿಸುತ್ತಿವೆ. ಆರ್ಥಿಕ ಬಿಕ್ಕಟ್ಟಿನಿಂದ ಪೀಡಿತವಾಗಿರುವ ಮೂರನೇ ಜಗತ್ತಿನ ದೇಶಗಳಲ್ಲಿ ಬಿಕ್ಕಟ್ಟು ಮುಂದುವರಿಯುತ್ತಲೇ ಹೋಗುವ ಕಾರಣದ ಮೇಲೆ ಸಾಮ್ರಾಜ್ಯಶಾಹಿಯು ಒಂದು ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುತ್ತದೆ. ಆ ಕಾರ್ಯತಂತ್ರದ ಆಕಾರರೇಖೆಗಳು ಈಗಾಗಲೇ ಲೆಬನಾನ್‌ನಲ್ಲಿ ಗೋಚರಿಸುತ್ತಿವೆ.

ಮೊದಲನೆಯದಾಗಿ, ಈ ಆರ್ಥಿಕ ಬಿಕ್ಕಟ್ಟಿಗೆ ಮೂರನೆಯ ಜಗತ್ತಿನ ದೇಶಗಳ ಸರ್ಕಾರಗಳ ಭ್ರಷ್ಟಾಚಾರವೇ ಕಾರಣವೆಂದು ಸಾಮ್ರಾಜ್ಯಶಾಹಿಯು ಈ ಸರ್ಕಾರಗಳನ್ನು ದೂಷಿಸುತ್ತದೆ. ಇದೊಂದು ದಿಕ್ಕು ತಪ್ಪಿಸುವ ತಂತ್ರ. ಈ ತಂತ್ರದ ಮೂಲಕ ಸೋತು ಸುಣ್ಣವಾಗಿರುವ ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯು ದೂಷಣೆಯಿಂದ ತಪ್ಪಿಸಿಕೊಳ್ಳುತ್ತದೆ. ಸಾಮ್ರಾಜ್ಯಶಾಹಿಯ ಈ ತಂತ್ರವು ಸ್ವಲ್ಪ ಮಟ್ಟಿನ ವಿಶ್ವಾಸಾರ್ಹತೆಯನ್ನು ಹೊಂದಿದೆ. ಹೇಗೆಂದರೆ, ತೃತೀಯ ಜಗತ್ತಿನ ಅನೇಕ ಸರ್ಕಾರಗಳು ಭ್ರಷ್ಟಾಚಾರದಲ್ಲಿ ತೊಡಗಿವೆ ಎಂಬುದನ್ನು ನಿರಾಕರಿಸುವಂತಿಲ್ಲ.

ಎರಡನೆಯದಾಗಿ, ಆರ್ಥಿಕ ಬಿಕ್ಕಟ್ಟು ಪೀಡಿತ ದೇಶಗಳಿಗೆ ಅವರ ತಕ್ಷಣದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅನುವಾಗುವಂತೆ ಅವರಿಗೆ ಸಾಲ ಒದಗಿಸುವ ಮೂಲಕ ಸಾಮ್ರಾಜ್ಯಶಾಹಿಗೆ ಆ ದೇಶಗಳ ಅರ್ಥವ್ಯವಸ್ಥೆಯನ್ನು ನವ ಉದಾರ ಬಂಡವಾಳಶಾಹಿ ವ್ಯವಸ್ಥೆಯೊಂದಿಗೆ ಇನ್ನಷ್ಟು ಬಿಗಿಯಾಗಿ ಗಂಟುಹಾಕಲು ಸಾಧ್ಯವಾಗುತ್ತದೆ. ಹೇಗೆಂದರೆ, ಸಾಲ ಕೊಡುವಾಗ ಕೆಲವು "ಷರತ್ತುಗಳು" ಗಳನ್ನು ಹೇರಲಾಗುತ್ತದೆ. ಈ "ಷರತ್ತುಗಳು" ಮೂರನೆಯ ಜಗತ್ತಿನ ದೇಶಗಳನ್ನು ನವ ಉದಾರವಾದದೊಂದಿಗೆ ಇನ್ನಷ್ಟು ಬಿಗಿಯಾಗಿ ಕಟ್ಟಿಹಾಕುತ್ತವೆ. ಈ ರೀತಿಯಲ್ಲಿ ನವ ಉದಾರವಾದವೇ ಸೃಷ್ಟಿಸಿದ ಬಿಕ್ಕಟ್ಟನ್ನು ಜಯಿಸುವ ಹೆಸರಿನಲ್ಲಿ, ಮೂರನೆಯ ಜಗತ್ತಿನ ದೇಶಗಳ ಅರ್ಥವ್ಯವಸ್ಥೆಗಳ ಮೇಲೆ ನವ ಉದಾರವಾದವು ಹೊಂದಿರುವ ಹಿಡಿತವು ಮತ್ತಷ್ಟು ಬಿಗಿಯಾಗುವಂತೆ ಸಾಮ್ರಾಜ್ಯಶಾಹಿಯು ನೋಡಿಕೊಳ್ಳುತ್ತದೆ.

ಮೂರನೆಯದಾಗಿ, ತೃತೀಯ ಜಗತ್ತಿನ ದೇಶಗಳಲ್ಲಿ, ಆರ್ಥಿಕ ಬಿಕ್ಕಟ್ಟನ್ನು ಮತ್ತು ಅದರ ಪರಿಣಾಮವಾಗಿ ಜನಪ್ರಿಯತೆಯನ್ನು ಕಳೆದುಕೊಂಡ ಸರ್ಕಾರದ ಪರಿಸ್ಥಿತಿಯನ್ನು ಸಾಮ್ರಾಜ್ಯಶಾಹಿಯು ಬಳಕೆ ಮಾಡಿಕೊಳ್ಳುತ್ತದೆ: ಹೇಗೆಂದರೆ, ಅಂತಹ ಸರ್ಕಾರದ ಸ್ಥಾನದಲ್ಲಿ ಅದಕ್ಕಿಂತಲೂ ಯಾವ ರೀತಿಯಲ್ಲಿಯೂ ಕಡಿಮೆ ನವ ಉದಾರವಾದಿಯಲ್ಲದ, ಪಶ್ಚಿಮದ ದೇಶಗಳತ್ತ ಇನ್ನೂ ಹೆಚ್ಚು ವಾಲುವ ಮತ್ತು ನವ ಉದಾರವಾದವೇ ಬಿಕ್ಕಟ್ಟನ್ನು ಸೃಷ್ಟಿಸಿದರೂ ಅದನ್ನೇ ಇನ್ನಷ್ಟು ಬಿಗಿಯಾಗಿ ಅಪ್ಪಿಕೊಳ್ಳುವ ಇನ್ನೊಂದು ಸರ್ಕಾರವನ್ನು ಸ್ಥಾಪಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಉಂಡೂ ಹೋದ, ಕೊಂಡೂ ಹೋದ ಎನ್ನುವ ರೀತಿಯಲ್ಲಿ ಸಾಮ್ರಾಜ್ಯಶಾಹಿಯು ಮೂರನೇ ಜಗತ್ತಿನ ದೇಶಗಳ ಬಿಕ್ಕಟ್ಟುಗಳನ್ನೇ ಬಳಸಿಕೊಂಡು ಆ ದೇಶಗಳ ಮೇಲೆ ತನ್ನ ಹಿಡಿತವನ್ನು ಮತ್ತಷ್ಟು ಬಲಪಡಿಸಿಕೊಳ್ಳುತ್ತದೆ.

ಜನರ ಸ್ಥಿತಿ–ಗತಿಗಳು ಉತ್ತಮಗೊಳ್ಳದ ಹೊರತು ಇಂತಹ ಕಾರ್ಯತಂತ್ರವು ದೀರ್ಘಕಾಲ ಬಾಳುವುದಿಲ್ಲ ಎಂದು ಯಾರಾದರೂ ಭಾವಿಸಬಹುದು. ಆದರೆ, ಜನರ ಸ್ಥಿತಿ–ಗತಿಗಳನ್ನು ಸುಧಾರಿಸುವುದಾಗಲಿ ಅಥವಾ ದೀರ್ಘಾವಧಿಯಲ್ಲಿ ಏನಾಗುತ್ತದೆ ಎಂಬುದರ ಬಗ್ಗೆಯೇ ಆಗಲಿ, ಬಂಡವಾಳಶಾಹಿಯ ಕಾಳಜಿಯೇ ಅಲ್ಲ. ಅದಕ್ಕಿರುವ ಕಾಳಜಿ ಯಾವುದು ಎಂದರೆ, ನವ ಉದಾರವಾದಿ ವ್ಯವಸ್ಥೆಗೆ ಎದುರಾಗುವ ತಕ್ಷಣದ ಬೆದರಿಕೆ ಮಾತ್ರ. ಈ ಬೆದರಿಕೆಯನ್ನು ಅದು ಎದುರಿಸುವ ರೀತಿಯಲ್ಲಿ ಜನರಿಗೆ ಹಾನಿಯಾಗುವುದಾದರೆ, ಹಾಗೆಯೇ ಆಗಲಿ. ಅದಕ್ಕೇನಂತೆ?

ಕೇರಳ–ಮೊದಲ ಚುನಾಯಿತ ಕಮ್ಯುನಿಸ್ಟ್ ಸರ್ಕಾರ

ಪುಟ 11 ರಿಂದ

ಬಿಂಬಿಸಿದರು. ಖಾಸಗಿ ಶಿಕ್ಷಣ ಸಂಸ್ಥೆಗಳ ಎರಡು ಪ್ರಧಾನ ಕಾರ್ಪೊರೇಟ್ ಆಡಳಿತಗಳಾದ ಕ್ರಿಶ್ಚಿಯನ್ ಚರ್ಚುಗಳು ಮತ್ತು ನಾಯರ್ ಸರ್ವಿಸ್ ಸೊಸೈಟಿ ನೇತೃತ್ವದಲ್ಲಿ ಸುಳ್ಳುಗಳ ವ್ಯಾಪಕ ಪ್ರಚಾರವನ್ನು ಹರಿಬಿಡಲಾಯಿತು; ಆ ಮಸೂದೆಯು ತಮ್ಮ ಆಸ್ತಿ ಹಕ್ಕುಗಳ ಮೇಲಿನ ದಾಳಿ ಮತ್ತು ಅದು ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡುವ ಕ್ರಮವಾಗಿದೆ ಎಂಬ ದೊಡ್ಡ ಗುಲ್ಲೆಬ್ಬಿಸಿದವು.

ಕೃಷಿ ಸಂಬಂಧದ ಮಸೂದೆ ಮತ್ತು ಶಿಕ್ಷಣ ಮಸೂದೆಯ ವಿರೋಧಿಗಳು ಈ ಕಾಳಗವನ್ನು ಕೇಂದ್ರ ಸರ್ಕಾರಕ್ಕೆ ಕೊಂಡೊಯ್ದರು ಮತ್ತು ಆ ಮಸೂದೆಗಳಿಗೆ ಸಮ್ಮತಿ ನೀಡುವುದನ್ನು ತಡೆಹಿಡಿಯಬೇಕೆಂದು ಮನವಿ ಮಾಡಿದರು. ಕಮ್ಯುನಿಸ್ಟ್ ವಿರೋಧಿ ಧೋರಣೆಯ ಕಾಂಗ್ರೆಸ್ ನೇತೃತ್ವದ ಸರ್ಕಾರವು ಅವರ ಮನವಿಗೆ ಮಣಿದು ಆ ಎರಡು ಮಸೂದೆಗಳನ್ನು ವಿಧಾನ ಸಭೆಗೆ ಹಿಂತಿರುಗಿಸಿತು.

ಕಾಂಗ್ರೆಸ್, ಮುಸ್ಲಿಂ ಲೀಗ್, ಪಿಎಸ್‌ಪಿ, ಕ್ಯಾಥೊಲಿಕ್ ಚರ್ಚ್ ಮತ್ತು ನಾಯರ್ ಸರ್ವಿಸ್ ಸೊಸೈಟಿಗಳ ಪ್ರತಿನಿಧಿಗಳನ್ನು ಒಳಗೊಂಡ ಒಂದು ಕಮ್ಯುನಿಸ್ಟ್–ವಿರೋಧಿ ರಂಗವನ್ನು ರಚಿಸಲಾಯಿತು. ಅವರು 'ವಿಮೋಚನಾ ಸಮರಂ' ಶುರುಮಾಡಿದರು. ಹಿಂಸಾತ್ಮಕ ರೂಪಕ್ಕೆ ತಿರುಗಿದ ಈ ಚಳುವಳಿಯಿಂದಾಗಿ ಸರ್ಕಾರಿ ಕಛೇರಿಗಳು ಮತ್ತು ಪೋಲಿಸ್ ಠಾಣೆಗಳ ಮೇಲೆ ದಾಳಿಗಳು ನಡೆದವು. ಸರ್ಕಾರದ ಕಾರ್ಯ ನಿರ್ವಹಣೆಯನ್ನು ನಿಶ್ಯಕ್ತಗೊಳಿಸುವುದು ಅದರ ಒಟ್ಟು ಉದ್ದೇಶವಾಗಿತ್ತು ಮತ್ತು ಆ ನೆಪ ಮಾಡಿ ಕೇಂದ್ರ ಸರ್ಕಾರದ ಮಧ್ಯಪ್ರವೇಶವನ್ನು ಅದು ಬಯಸಿತ್ತು. ಅಂದಿನ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಇಂದಿರಾ ಗಾಂಧಿಯವರ ಒತ್ತಡಕ್ಕೆ ಮಣಿದು ನೆಹರೂ ನೇತೃತ್ವದ ಕಾಂಗ್ರೆಸ್ ಸರ್ಕಾರವು ಸಂವಿಧಾನದ 356ನೇ ವಿಧಿಯನ್ನು ಬಳಸಿ ರಾಜ್ಯ ಸರ್ಕಾರವನ್ನು ವಜಾಗೊಳಿಸಿತು. ಕಮ್ಯುನಿಸ್ಟ್ ಸರ್ಕಾರವನ್ನು ಉರುಳಿಸುವ ಸಲುವಾಗಿ ಚಳುವಳಿ ನಡೆಸಲು ಕಾಂಗ್ರೆಸ್ ಪಕ್ಷಕ್ಕೆ ಅಮೆರಿಕದ ಬೇಹುಗಾರ ಸಂಸ್ಥೆ ಸಿಐಎ ಹಣ ಪೂರೈಕೆ ಮಾಡಿತ್ತು ಎನ್ನುವುದು, ಆ ನಂತರದಲ್ಲಿ ತಿಳಿದು ಬಂದ ಸಂಗತಿಯಾಗಿತ್ತು, ಅದನ್ನು ಭಾರತದಲ್ಲಿನ ಅಂದಿನ ಅಮೆರಿಕಾ ರಾಯಭಾರಿ ಎಲ್ಸ್‌ವರ್ತ್ ಬಂಕರ್ ಒಪ್ಪಿಕೊಂಡಿದ್ದರು.

ಶತ–ಶತಮಾನಗಳ ಕಾಲ ಜಾತಿಯಾಧಾರದಲ್ಲಿ ದಮನಕ್ಕೊಳಗಾಗಿದ್ದ ದಲಿತರು ಮತ್ತು ಇತರ ಹಿಂದುಳಿದ ವರ್ಗಗಳ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಕೇರಳದ ಕಮ್ಯುನಿಸ್ಟ್ ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿತು. ಶಿಕ್ಷಣ ಸಂಸ್ಥೆಗಳಲ್ಲಿ, ಸರ್ಕಾರಿ ಸೇವೆಗಳಿಗೆ ಪ್ರವೇಶ ಪಡೆಯುವಾಗ ಮೀಸಲಾತಿಯ ವ್ಯಾಪ್ತಿಯನ್ನು ವಿಸ್ತರಿಸಲಾಯಿತು ಮತ್ತು ಹಿಂದುಳಿದ ವರ್ಗಗಳ ಸದಸ್ಯರಿಗೆ ಇನ್ನಿತರ ರೀತಿಯಲ್ಲಿ ಸಹಾಯ ಆಗಬಹುದಾದಂಥವುಗಳನ್ನು ಕೂಡ ಯೋಜಿಸಲಾಯಿತು. 'ಮುಂದುವರಿದ' ಜಾತಿಗಳು ಎಂದು ಕರೆದುಕೊಳ್ಳುವ ಜಾತಿ ಹಾಗೂ ಕೋಮುವಾದಿ ಮುಖಂಡರು ಸಹಜವಾಗಿಯೇ ಇದನ್ನು ಕಮ್ಯುನಿಸ್ಟ್ ಪಕ್ಷ ಹಾಗೂ ಸರ್ಕಾರದ ವಿರುದ್ಧ ಆ ಜಾತಿಗಳ ಜನಸಮುದಾಯವನ್ನು ಎತ್ತಿಕಟ್ಟುವ ಅವಕಾಶವನ್ನಾಗಿ ಬಳಸಿಕೊಂಡರು.

ಕಮ್ಯುನಿಸ್ಟ್ ಸರ್ಕಾರದ ಮತ್ತೊಂದು ಆರಂಭಿಕ ಕೊಡುಗೆಯೆಂದರೆ ದೃಢವಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸ್ಥಾಪನೆ. ರಾಜ್ಯದೊಳಗಡೆ ಪಡೆದ ಮತ್ತು ಹೊರಗಡೆಯಿಂದ ಸಂಗ್ರಹಿಸಿದ ಅಕ್ಕಿಯನ್ನು ನ್ಯಾಯಯುತವಾಗಿ ವಿತರಿಸುವುದನ್ನು ಖಾತ್ರಿಪಡಿಸಲು ಪ್ರಬಲವಾದ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. 'ನ್ಯಾಯಬೆಲೆ ಅಂಗಡಿ'ಗಳನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲಾಯಿತು, ಮುಂಚೆ ಇದ್ದ 1000 ಅಂಗಡಿಗಳನ್ನು 6000 ಕ್ಕೆ ಹೆಚ್ಚಿಸಲಾಯಿತು.

ಜನರಿಗೆ ಅಕ್ಕಿ ಮತ್ತಿತರ ಅಗತ್ಯ ವಸ್ತುಗಳನ್ನು ನ್ಯಾಯಯುತವಾಗಿ ಪೂರೈಸುವುದನ್ನು ಖಾತ್ರಿಪಡಿಸುವ ಸಲುವಾಗಿ ಜನರ ಆಹಾರ ಸಮಿತಿಗಳನ್ನು ರಚಿಸಲು ಸರ್ಕಾರವು ಮುತುವರ್ಜಿ ವಹಿಸಿತು. ಈ ಸಮಿತಿಗಳು ಎಲ್ಲಾ ಪಕ್ಷಗಳ ಪ್ರತಿನಿಧಿಗಳನ್ನು ಒಳಗೊಂಡು, ಯಾವ್ಯಾವ ಪ್ರದೇಶಗಳಲ್ಲಿ ಎಷ್ಟು ನ್ಯಾಯ ಬೆಲೆ ಅಂಗಡಿಗಳ ಅಗತ್ಯವಿದೆ, ಯಾವ ಸ್ಥಳದಲ್ಲಿ ಅದನ್ನು ಸ್ಥಾಪಿಸಬೇಕು ಮತ್ತು ಅವುಗಳನ್ನು ನಡೆಸುವವರು ಯಾರು ಮುಂತಾದವುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲಹೆ ನೀಡಬೇಕಾಗಿತ್ತು. ಕಡಿಮೆ ಆದಾಯದ ಕುಟುಂಬಗಳನ್ನು ಗುರುತಿಸಿ ಅವರಿಗೆ ಪೂರೈಕೆ ಮಾಡುವುದು ಮತ್ತು ಅವರಿಗೆ ಗುರುತಿನ ಚೀಟಿಯನ್ನು ನೀಡುವುದು ಹಾಗೂ ಭ್ರಷ್ಟಾಚಾರವನ್ನು ನಿಲ್ಲಿಸುವ ಕೆಲಸವನ್ನು ಈ ಸಮಿತಿಗಳಿಗೆ ವಹಿಸಲಾಯಿತು. ಈ ಸಮಿತಿಗಳನ್ನು ಪಂಚಾಯತ್, ತಾಲೂಕು ಹಾಗೂ ಸ್ಥಳೀಯ ಮಟ್ಟದಲ್ಲಿ ರಚಿಸಲಾಯಿತು. ರಾಜ್ಯ ಮಟ್ಟದಲ್ಲಿ ಎಲ್ಲಾ ಪಕ್ಷಗಳ ಒಂದು ರಾಜ್ಯ ಆಹಾರ ಸಲಹಾ ಸಮಿತಿ ರಚಿಸಲಾಯಿತು. ಈ ಇಡೀ ವ್ಯವಸ್ಥೆಯನ್ನು ನಡೆಸುವಲ್ಲಿ ಎದುರಾಗಬಹುದಾದ ಸಮಸ್ಯೆಗಳನ್ನು ಗುರುತಿಸಲು ಹಾಗೂ ಅವುಗಳನ್ನು ಪರಿಹರಿಸಲು ಸಲಹೆ ನೀಡುವ ಕಾರ್ಯಭಾರವನ್ನು ರಾಜ್ಯ ಮಟ್ಟದ ಸಮಿತಿಗೆ ವಹಿಸಲಾಯಿತು.

1957ರಲ್ಲಿ ದೊರೆತ ವಿಜಯವು ಕಮ್ಯುನಿಸ್ಟರಿಗೆ ಕೇರಳದಲ್ಲಿ ಒಂದು ಅವಕಾಶ ಒದಗಿಸಿತು, ಹಿಂದೆಂದೂ ಅಂತಹ ಅವಕಾಶಗಳು ಸಿಕ್ಕ ಉದಾಹರಣೆಗಳು ಇಲ್ಲ. ಸಂವಿಧಾನದ ಮಿತಿಗಳ ನಿರ್ಬಂಧಗಳಿಂದಾಗಿ, ಇಂತಹ ಸಂವಿಧಾನದ ಪರಿಮಿತಿಯಲ್ಲಿ ಏನನ್ನೂ ಮಾಡಲು ಸಾಧ್ಯವಿಲ್ಲ ಎಂಬ ತನ್ನ ಅಸಹಾಯಕತೆಯನ್ನು ಕಮ್ಯುನಿಸ್ಟ್ ಪಕ್ಷವು ವ್ಯಕ್ತಪಡಿಸಲಿಲ್ಲ, ಅಥವಾ ಸಂವಿಧಾನದ ಮೂಲಕವೇ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಹುಡುಕಲು ಸಾಧ್ಯ ಎಂಬ ತಪ್ಪು ಕಲ್ಪನೆಯನ್ನೂ ಇಟ್ಟುಕೊಂಡಿರಲಿಲ್ಲ. ಅದರ ಬದಲು, ಸಂವಿಧಾನಿಕ ಸಾಧನಗಳಿಂದ ಎಲ್ಲಿ ಸಾಧ್ಯವೋ ಅದನ್ನು ಬಳಸಿ ಆ ಮೂಲಕ ಜನರ ಬದುಕನ್ನು ಉತ್ತಮಪಡಿಸಲು ಅದು ಕೆಲಸ ಮಾಡಿತು ಮತ್ತು ಜನರ ಹೋರಾಟಗಳೊಂದಿಗೆ ಗಟ್ಟಿಯಾಗಿ ನಿಂತಿತು.

ಕಮ್ಯುನಿಸ್ಟರ ಮುನ್ನಡೆಯನ್ನು ತಡೆಯಲು ಅಸಮರ್ಥವಾದ ಕೇಂದ್ರ ಸರ್ಕಾರವು 356 ನೇ ವಿಧಿ ಬಳಸಿತು ಮತ್ತು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರವನ್ನು 1959ರಲ್ಲಿ ವಜಾ ಮಾಡಿತು. ಅದು ಭಾರತದ ಪ್ರಜಾಪ್ರಭುತ್ವಕ್ಕೆ ಒಂದು ಕರಾಳ ದಿನವಾಗಿತ್ತು. ಕೇರಳ ಸರ್ಕಾರವನ್ನು ವಜಾ ಮಾಡಿದ್ದರ ವಿರುದ್ಧ ಆಗಸ್ಟ್ 3 ರಂದು ದೇಶಾದ್ಯಂತ ಪಕ್ಷವು ಪ್ರತಿಭಟನೆಗಳನ್ನು ಸಂಘಟಿಸಿತು. ಅಂದು, ದೆಹಲಿಯ ಸಂಸತ್ ಭವನದ ಎದುರು 30,000 ಜನ ಮೆರವಣಿಗೆ ನಡೆಸಿದರು.

ನ್ಯಾಯಾಂಗ ನಿಂದನೆಯ ತೀರ್ಪಿನ ಕುರಿತು...

ಪುಟ 2 ರಿಂದ

ಟ್ವೀಟ್ ಮಾಡಿರುವುದು ಕೂಡ ಒಂದು ಅಭಿಪ್ರಾಯ ಮಾತ್ರ. ಇದಕ್ಕೆ ಸಂವಿಧಾನದ ಕಲಮು 19(1)ರ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಅಡಿಯಲ್ಲಿ ರಕ್ಷಣೆ ಇದೆ.

ನ್ಯಾಯಾಧೀಶರ ಹುದ್ದೆಗೆ ಘನತೆ ಮತ್ತು ಗೌರವವನ್ನು ಉಳಿಸಿಕೊಳ್ಳುವ ಅತ್ಯುತ್ತಮ ದಾರಿಯೆಂದರೆ ತನ್ನ ತೀರ್ಪಿಗೆ ಬರುವ ಪ್ರಶ್ನೆಗಳ ಬಗ್ಗೆ ನಿರ್ಭೀತಿ ಮತ್ತು ವಸ್ತುನಿಷ್ಠತೆಯ ಮೂಲಕ, ತೀರ್ಪಿನ ಗುಣಮಟ್ಟ, ಸಂಯಮ ಮತ್ತು ಘನತೆಯ ವರ್ತನೆಯ ಮೂಲಕ ಸಾರ್ವಜನಿಕರ ಗೌರವ ಪಡೆಯುವುದು ಎಂದು ಎಐಎಲ್‌ಯು ಅಭಿಪ್ರಾಯಪಟ್ಟಿದೆ.

ಈ ತೀರ್ಪು ನ್ಯಾಯಾಂಗದ ಪ್ರಾಮಾಣಿಕ ವಿಮರ್ಶೆಯ ಮೇಲೆ ಬೀರಬಹುದಾದ ನಕಾರಾತ್ಮಕ ಮತ್ತು ಮೈನಡುಗಿಸುವ ಪರಿಣಾಮದ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಅದು ಈ ಸ್ವಾತಂತ್ರ್ಯ ದಿನದಂದು ಇದು ನ್ಯಾಯಾಂಗ ನಿಂದನೆಯ ಬಗ್ಗೆ ವಿಚಾರಪೂರ್ಣ ಚರ್ಚೆಯನ್ನು ಆರಂಭಿಸುತ್ತದೆ ಎಂದು ನಿರೀಕ್ಷಿಸುತ್ತ ಎಐಎಲ್‌ಯು ಸುಪ್ರಿಂ ಕೋರ್ಟ್ ತಾನೇ ಒಂದು ಗುಣಪಡಿಸುವ ಪ್ರಕ್ರಿಯೆ, ಮರುವಿಮರ್ಶೆ ಅಥವ ಬೇರೆ ಯಾವುದೇ ರೀತಿಯಲ್ಲಿ ಹಿಂತೆಗೆದುಕೊಳ್ಳುತ್ತದೆ ಎಂಧು ಆಶಿಸಿದೆ.

ಭಾರತದ ನಿವೃತ್ತ ಮುಖ್ಯ ನ್ಯಾಯಾಧೀಶರು, ನ್ಯಾಯಮೂರ್ತಿ ಆರ್.ಎಂ.ಲೋಧ ಅವರು ಪತ್ರಿಕ್ರಯಿಸುತ್ತ ಇಂತಹ ಒಂದು ವಿಷಯವನ್ನು ನ್ಯಾಯಾಲಯ ಕೊವಿಡ್ ಸೋಂಕಿನಿಂದಾಗಿ ಭೌತಿಕವಾಗಿ ವಿಚಾರಣೆಗಳನ್ನು ನಡೆಸದಿರುವ ಸಮಯದಲ್ಲಿ ಕೈಗೆತ್ತಿಕೊಂಡಿರುವುದು ನಿಜಕ್ಕೂ ಆಶ್ಚರ್ಯಕಾರಿ ಎನ್ನುತ್ತ "ಇದು ನನಗೆ ತುಸು ಆತಂಕ ಉಂಟುಮಾಡಿದೆ" ಎಂದಿದ್ದಾರೆ.

"ಒಂದು ಕ್ರಿಮಿನಲ್ ನಿಂದನೆ ಪ್ರಕರಣದಲ್ಲಿ ವರ್ಚುವಲ್ ವಿಚಾರಣೆ ನ್ಯಾಯನೀಡಿಕೆಗೆ ಒಂದು ಸರಿಯಾದ ವ್ಯವಸ್ಥೆ ಅಲ್ಲ. ನ್ಯಾಯಾಲಯದ ಅಪನಿಂದನೆ ಅಥವ ಘನತೆಯನ್ನು ಇಳಿಸುವುದು ಚರ್ವಿತಚರ್ವಣ ಪದಗಳಲ್ಲ. ಅವು ಬಹಳಷ್ಟು ಅರ್ಥಗರ್ಭಿತವಾದ ಮತ್ತು ಸತ್ವವುಳ್ಳ, ಆಳವಾಗಿ ಯೋಚಿಸಬೇಕಾದ ಪದಗಳು. ಅವನ್ನು ರೂಢ ಮಾದರಿಯಲ್ಲಿ ಅಥವ ಒಬ್ಬ ವ್ಯಕ್ತಿಯ ಘನತೆಗೆ ಕುಂದುಂಟಾಗಿದೆ ಎಂದು ಯಾರಿಗೋ ಅನಿಸಿದೆ ಎಂಬ ಕಾರಣಕ್ಕಷ್ಟೇ ಅನ್ವಯಿಸಬಾರದು" ಎಂದು ಮುಂದುವರೆದು ಅವರು ಹೇಳಿದ್ದಾರೆ.

ನ್ಯಾಯಾಂಗ ಜವಾಬುದಾರಿಕೆ ಮತ್ತು ಸುಧಾರಣಾ ಪ್ರಚಾರಾಂದೋಲನ(ಸಿಜೆಎಆರ್), ಈ ತೀರ್ಪಿನ ಮೂಲಕ ಸುಪ್ರಿಂ ಕೋರ್ಟ್ ಸಾಮಾನ್ಯ ಜನರ ಕಣ್ಣುಗಳಲ್ಲಿ ತನ್ನ ಘನತೆಗೆ ಕುಂದು ತಂದುಕೊಂಡಿದೆ ಎಂದು ಖೇದ ವ್ಯಕ್ತಪಡಿಸಿದೆ.

"ಒಂದೊಮ್ಮೆ ಜಗತ್ತಿನ ಅತ್ಯಂತ ಶಕ್ತಿಶಾಲಿ ನ್ಯಾಯಾಲಯ ಎಂದೆನಿಸಿಕೊಂಡಿರುವ ಒಂದು ನ್ಯಾಯಾಲಯ ಅತ್ಯಂತ ಸಂಯಮ ಮತ್ತು ಸದುದ್ದೇಶದ ವಿಮರ್ಶೆಯ ಬಗ್ಗೆ ಅಸಹಿಷ್ಣುತೆ ತೋರಿರುವುದು ದುರದೃಷ್ಟಕರ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರತಿಯೊಬ್ಬ ಹಾಲಿ ನ್ಯಾಯಾಧೀಶರು ಎಲ್ಲಕ್ಕಿಂತ ಹೆಚ್ಚಾಗಿ ಸಾರ್ವಜನಿಕರ ಕಂಗಳಲ್ಲಿ ತನ್ನದೇ ಪ್ರತಿಷ್ಠೆಗೆ ಮತ್ತು ಘನತೆಗೆ ಕುಂದು ತಂದಿರುವ ಈ ನಿರ್ಣಯವನ್ನು ಮರುಪರಿಶೀಲಿಸಬೇಕು" ಎಂದಿರುವ ಸಿಜೆಎಆರ್ ನ್ಯಾಯಾಂಗದ ಟೀಕಾಕಾರರಿಗೆ ಕಠಿಣ ಕ್ರಮದ ಸಂದೇಶ ನೀಡಲೆಂದು ಈ ತೀರ್ಪನ್ನು ನೀಡಲಾಗಿದೆ, ಆದರೆ ನ್ಯಾಯಾಂಗ ಗೌರವ ಗಳಿಸಬೇಕು, ಕೇಳಬಾರದು, ನಿಂದನೆಯ ಬೆದರಿಕೆಯೊಡ್ಡಿ ನಾಗರಿಕರಿಂದ ಗೌರವ ಮತ್ತು ಘನತೆಯನ್ನು ಕೇಳಲಾಗದು ಎಂದು ಟಿಪ್ಪಣಿ ಮಾಡಿದೆ.

ಕಮಲಾ ಹ್ಯಾರಿಸ್ ಅಮೇರಿಕನ್ ಉಪಾಧ್ಯಕ್ಷ ಅಭ್ಯರ್ಥಿ



ಯು.ಎಸ್. ಅಧ್ಯಕ್ಷೀಯ ಚುನಾವಣೆ ನವೆಂಬರ್ 3 ರಂದು ನಡೆಯಲಿದೆ. ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ, ಹಾಲಿ ಅಧ್ಯಕ್ಷರಾದ, ಡೊನಾಲ್ಡ್ ಟ್ರಂಪ್ ರವರು ಮತ್ತೆ ಸ್ಪರ್ಧೆಯ ಕಣದಲ್ಲಿದ್ದಾರೆ. ಇವರಿಗೆ ಪ್ರಬಲ ಪ್ರತಿಸ್ಪರ್ಧಿಯಾಗಿ ಡೆಮಾಕ್ರಟಿಕ್ ನ ಜೋ ಬಿಡನ್ ರು ಚುನಾವಣಾ ಕಣದಲ್ಲಿದ್ದಾರೆ. ಭಾರತೀಯ ಮೂಲದ ಕಮಲಾ ಹ್ಯಾರಿಸ್ ರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಬಿಡನ್ ರು ಆಯ್ಕೆ ಮಾಡಿಕೊಂಡಿದ್ದಾರೆ. ಇದರಿಂದ ಚುನಾವಣಾ ಪ್ರಚಾರ ಹೊಸ ಸ್ವರೂಪವನ್ನು ಪಡೆದುಕೊಂಡಿದೆ.

ಬಿಡನ್ (78) ಸೆನೆಟರ್ ಕಮಲಾ ಹ್ಯಾರಿಸ್ (55)ರನ್ನು ತಮ್ಮ ಉಪಾಧ್ಯಕ್ಷ ಸ್ಥಾನಕ್ಕೆಆಯ್ಕೆ ಮಾಡಿದ್ದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಕಮಲಾ ಭಾರತೀಯ ಮೂಲದ ತಾಯಿ ಶ್ಯಾಮಲಾ ಗೋಪಾಲನ್ ಮತ್ತು ಆಫ್ರಿಕನ್ ಜಮೈಕ ನ್ ತಂದೆ ಹ್ಯಾರಿಸ್ ದಂಪತಿಗಳ ಮಗಳು. ಇದರಿಂದಾಗಿ ಭಾರತ-ಅಮೇರಿಕನ್ನರಮತ್ತು ಆಫ್ರಿಕನ್ ಅಮೇರಿಕನ್ನರ ನಡುವೆ ಅಧ್ಯಕ್ಷೀಯ ಚುನಾವಣೆಯ ಅಭಿಯಾನದಲ್ಲಿ ಹೊಸ ಉತ್ಸಾಹ ತಂದಿದೆ. ಇದು ಯುವ ಮತದಾರರನ್ನೂ ಆಕರ್ಷಿಸಿದೆ ಮತ್ತು ಅಧ್ಯಕ್ಷೀಯ ಚುನಾವಣೆಗೆ ಮಹತ್ವದ ತಿರುವು ತಂದಿದೆ ಎನ್ನಲಾಗಿದೆ. ಇದರಿಂದ ಟ್ರಂಪ್ ಸ್ವಲ್ಪಮಟ್ಟಿಗೆ ಗಾಬರಿಯಾಗಿದ್ದಾರೆ ಎಂದೂ ಹೇಳಲಾಗುತ್ತಿದೆ.

ಈ ನಿಟ್ಟಿನಲ್ಲಿ ಬಿಡನ್ ಭಾರತೀಯ ಮೂಲದ ಕಮಲಾ ಹ್ಯಾರಿಸ್ ರವರನ್ನು ಆಯ್ಕೆ ಮಾಡಿಕೊಂಡ ಪ್ರಮುಖ ಅಂಶಗಳನ್ನು ಸಿ.ಎನ್.ಎನ್ ವರದಿಯು ಈ ರೀತಿ ಪಟ್ಟಿ ಮಾಡಿದೆ.

* ಕಮಲಾ ಹ್ಯಾರಿಸ್ ರು ಡೆಮೊಕ್ರಾಟಿಕ್ ಅಭ್ಯರ್ಥಿಯಾಗಲು ಸ್ಪರ್ಧಿಸಿದ್ದರಿಂದಅಮೇರಿಕಾದ ರಾಷ್ಟ್ರೀಯ ವೇದಿಕೆಯಲ್ಲಿ ತಮ್ಮದೇ ಆದ ವರ್ಚಸ್ಸು ಬೆಳೆಸಿಕೊಂಡಿದ್ದಾರೆ.
* ಕಮಲಾ ರವರು, 2016 ರಿಂದ ಕ್ಯಾಲಿಫೋರ್ನಿಯಾದ ಅಟಾರ್ನಿ ಜನರಲ್ ಆಗಿ ಮತ್ತು ಯು.ಎಸ್ ಸೆನೆಟರ್ ಆಗಿ ಅಪಾರ ರಾಜಕೀಯ ಅನುಭವ ಹೊಂದಿದ್ದಾರೆ.
* ಪ್ರಮುಖ ರಾಷ್ಟ್ರೀಯ ಪಕ್ಷದ ಟಿಕೆಟ್ ಪಡೆದು ಅಮೇರಿಕದ ಉಪಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮ ನಿರ್ದೇಶನ ಗೊಂಡ ಮೊದಲ ಕರಿಯಮತ್ತು ದಕ್ಷಿಣ ಏಶ್ಯಾ ಮೂಲದ ಮಹಿಳೆ ಎಂಬ ಹೆಗ್ಗಳಿಕೆಗೆ ಕಮಲಾ ರವರು ಭಾಜನರಾಗುತ್ತಾರೆ. ಈ ಎರಡೂ ವಿಭಾಗಗಳಲ್ಲಿ ಡೆಮೊಕ್ರಾಟಿಕ್ ನೆಲೆ ಆಗಲೇ ಪ್ರಬಲವಾಗಿದ್ದು, ಅದು ಸ್ಪಷ್ಟವಾಗಿ ಕ್ರೋಢೀಕರಣಗೊಳ್ಳಬಹುದು.
* ಕಮಲಾ ಡೆಮಾಕ್ರಟಿಕ್ ಮತಗಳು ಮತ್ತು ಡೆಮಾಕ್ರಟಿಕ್ ದಾನಿಗಳ ದೊಡ್ಡ ಮೂಲವಾಗಿರುವ ಕ್ಯಾಲಿಫೋರ್ನಿಯಾ ರಾಜ್ಯದವರು
* ಮೇ ತಿಂಗಳಲ್ಲಿ ಜಾರ್ಜ್ ಫ್ಲಾಯ್ಡ್ ರವರ ಮರಣದ ನಂತರ ದೇಶದಾದ್ಯಂತ ಹುಟ್ಟಿಕೊಂಡ ಭಾರಿ ಪ್ರತಿಭಟನೆಗಳಲ್ಲಿ ಭಾಗವಹಿಸಿ, ಜನಾಂಗದ ಬಗ್ಗೆ ಮತ್ತು ಪೊಲೀಸ್ ನೀತಿಗಳ ಬದಲಾವಣೆಗಳ ಅಗತ್ಯತೆಯ ಕುರಿತಂತೆ ಬಹಿರಂಗವಾಗಿ ಧ್ವನಿ ಎತ್ತಿ ಹೊರಹೊಮ್ಮಿದರು. ಬಿಡನ್ ಕೂಡ ಪ್ರತಿಭಟನೆಕಾರರನ್ನು ಹಲವು ಕಡೆ ಬೆಂಬಲಿಸಿದ್ದರು.

ಹಾಗಾಗಿ ಸರಳವಾಗಿ ಹೇಳುವುದಾದರೆ, ಬಿಡನ್ ರವರು ಕಮಲಾರನ್ನು ಗೆಲುವಿನ ಟಿಕೆಟ್ ಎಂದು ಪರಿಗಣಿಸಿದ್ದಾರೆ. ಇದೊಂದು ಐತಿಹಾಸಿಕ ಮುನ್ನಡೆ ಮತ್ತು ಇದು ಪ್ರಗತಿಪರ ನೀತಿಗಳಿಗೆ ವಿಶಾಲವಾದ ಸ್ಥಳಾವಕಾಶವನ್ನು ತೆರೆದಿದೆ. ಬಿಡನ್ ಉಮೇದುವಾರಿಕೆಗೆ ಇದು ಅಗತ್ಯವಾಗಿತ್ತು. ಇದೊಂದು ಒಳ್ಳೆಯ ಬೆಳವಣಿಗೆ ಎನ್ನಲಾಗಿದೆ.

ಟ್ರಂಪ್ ರ ಕೆಟ್ಟ ಪ್ರತಿಕ್ರಿಯೆ

ಜೋ ಬಿಡನ್ ರ ಚುನಾವಣಾ ತಂತ್ರಗಾರಿಕೆಗೆ ಬೆಚ್ಚಿ ಬಿದ್ದಿರುವ ಟ್ರಂಪ್ ರು, ಡೆಮಾಕ್ರಟಿಕ್ ಪಕ್ಷದ ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿ ಯಾಗಿರುವ ಕಮಲಾ ಹ್ಯಾರಿಸ್ ರನ್ನು, ಕೆಟ್ಟದಾಗಿ ಬಿಂಬಿಸಲು ಹೊರಟಿದ್ದಾರೆ. ಕಮಲಾ ಹ್ಯಾರಿಸ್ ರವರ ಜನ್ಮ ಸ್ಥಳವನ್ನು ಕೆದಕಿ ಪ್ರಶ್ನಿಸಿದ್ದಾರೆ. ನನಗೆ ಲಭ್ಯವಿರುವ ಮಾಹಿತಿ ಪ್ರಕಾರ ಕಮಲಾ ಶ್ವೇತ ಭವನದಲ್ಲಿ ಕಾರ್ಯನಿರ್ವಹಿಸಲು ಬೇಕಾದ ಅಗತ್ಯ ಅರ್ಹತೆಗಳನ್ನು ಹೊಂದಿಲ್ಲ ವೆಂಬ ಕೆಟ್ಟದಾದ ಟೀಕೆಯನ್ನು ವ್ಯಕ್ತಪಡಿಸಿದ್ದಾರೆ. ಈ ಹಿಂದೆ, ಅಮೇರಿಕಾದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ವಿರುದ್ಧವೂ ಅವರ, ವಿರೋಧಿಗಳು ಇಂಥದ್ದೇ ಕೆಟ್ಟದಾದ ಆಂದೋಲನ ನಡೆಸಿದ್ದರು, ಆಗಲೂ ವಿರೋಧಿಗಳು ಒಬಾಮಾ ಅವರ ಜನ್ಮ ಸ್ಥಳವನ್ನು ಕೆದಕಿದ್ದರು. ಆದಾಗ್ಯೂ ಒಬಾಮಾ ಎರಡು ಬಾರಿ ಅಧ್ಯಕ್ಷರಾಗಿ ಯಶಸ್ಸು ಕಂಡಿದ್ದರು ಎಂಬುದನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳ ಬೇಕು. ಅಮೇರಿಕದ ಸಂವಿಧಾನದ ಪ್ರಕಾರ ಅಧ್ಯಕ್ಷ ಅಭ್ಯರ್ಥಿಯಾಗಲು ದೇಶದ ನಾಗರಿಕರಾಗಿರಬೇಕು ಮಾತ್ರವಲ್ಲ, ಅಮೇರಿಕದಲ್ಲಿ ಹುಟ್ಟಿರಬೇಕು. ಒಬಾಮ ಮತ್ತು ಕಮಲಾ ಇಬ್ಬರೂ ವಲಸೆಗಾರರ ಮಕ್ಕಳಾಗಿದ್ದರೂ ಹುಟ್ಟಿದ್ದು ಅಮೇರಿಕದಲ್ಲಿಯೇ. ಆದರೆ ಅವರ ಜನ್ಮಸ್ಥಳದ ಬಗ್ಗೆ ವಿವಾದ ಎಬ್ಬಿಸಿ ಗೊಂದಲ ಉಂಟು ಮಾಡುವುದು ರಿಪಬ್ಲಿಕನರ ಮತ್ತು ಟ್ರಂಪ್ ಅವರ ತಂತ್ರ,

ವೆಸ್ಟ್ ಇಂಡೀಸ್ ದ್ವೀಪಸಮೂಹದ ಜಮೈಕಾ ಮೂಲದ ತಂದೆ, ಭಾರತದ ತಮಿಳು ಮೂಲದ ತಾಯಿ ದಂಪತಿಗಳಿಗೆ ಜನಿಸಿರುವ ಕಮಲಾ ಹ್ಯಾರಿಸ್ ರನ್ನು ಟ್ರಂಪ್ ಹೀಗೆ ಹೀಯಾಳಿಸಿದ್ದಾರೆ. ಇದು ಅಮೇರಿಕನ್ ಮಹಿಳೆಯರನ್ನು ಬೇಸರಗೊಳಿಸಿದೆ. ಹೀಗಾಗಿ ಕಮಲಾ ವಿರುದ್ಧ ಚುನಾವಣಾ ಪ್ರಚಾರ ಮಾಡಲು, ಟ್ರಂಪ್ ಗೆ ಇದೊಂದು ದೊಡ್ಡ ತಲೆ ನೋವಾಗಿ ಪರಿಣಮಿಸಿದೆ. ಈ ಬಗ್ಗೆ ಟ್ರಂಪ್ ತಮ್ಮ ನಿಲುವನ್ನು ಹೆಚ್ಚಿಗೆ ತಿಳಿಸದೆ, ತಮ್ಮ ಮಾತಿನ ದಾಟಿಯನ್ನು ಸ್ವಲ್ಪ ಬದಲಾಯಿಸಿ ಕೊಂಡಂತೆ ಕಾಣುತ್ತದೆ.

ನ್ಯೂಸ್ ವೀಕ್ ಪತ್ರಿಕೆಯಲ್ಲಿ ಡಾ.ಜಾನ್ ಈಸ್ಟಮನ್ ಕಮಲಾರ ಜನ್ಮಸ್ಥಳದ ಕುರಿತಂತೆ ಬರೆದಿರುವ ಲೇಖನವನ್ನು ಉಲ್ಲೇಖ ಮಾಡಿದೆ ಅಷ್ಟೇ. ಇದು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಕಮಲಾ ರವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಸಾಮಾನ್ಯ ಅರ್ಹತೆಗಳಿಲ್ಲ' ಎಂದಷ್ಟೇ ಕೇಳಿದ್ದೇನೆ ಎಂದು ಪತ್ರಿಕಾಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ್ದಾರೆ. ಇದರ ಅರ್ಥ ಕಮಲಾ ಹ್ಯಾರಿಸ್ ಕುರಿತಾದ ಜನ್ಮ ಮೂಲ ಕೆದಕಿದ್ದು ಟ್ರಂಪ್ ಗೆ ಗಾಬರಿ ಮೂಡಿಸಿ, ಪ್ರಚಾರದ ವೈಖರಿ ಯನ್ನು ಬದಲಾಯಿಸುವ ಅಲೋಚನೆಯಲ್ಲಿ ಟ್ರಂಪ್ ತೊಡಗಿದ್ದಾರೆ.

'ಹೌಡಿ ಮೋದಿ' ಟ್ರಂಪ್ ಶೋ ಕೊಚ್ಚಿ ಹೋಗುವುದೇ?

'ಜೋ ಬಿಡನ್ ಅವರು ಅಮೇರಿಕಾದ ಅಧ್ಯಕ್ಷರಾಗಿ ಆಯ್ಕೆಯಾದರೆ ದೇಶದ ವರ್ಚಸ್ಸು ಕುಗ್ಗಲಿದೆ ಹಾಗೂ ಜಾಗತಿಕ ಮಟ್ಟದಲ್ಲಿ ನಗೆಪಾಟಲಿಗೆ ಗುರಿಯಾಗಲಿದೆ' ಎಂದು ಟ್ರಂಪ್ ಅಮೇರಿಕನ್ನರಿಗೆ ಎಚ್ಚರಿಸಿದ್ದಾರೆ. ಕಮಲಾ ರವರು ಎಡ ಪಂಥೀಯ ಚಿಂತನೆಯುಳ್ಳವರು. ಇವರಿಬ್ಬರು ಪ್ರಸ್ತಾಪಿಸುವ ನೀತಿ-ಚಿಂತನೆಗಳಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ.

ನಾಗರಾಜ ನಂಜುಂಡಯ್ಯ

ಜೋ ಬಿಡನ್ ಅಧ್ಯಕ್ಷ ರಾದರೆ, ಜಗತ್ತು ನಗಲಿದೆ. ಇದರ ಪೂರ್ಣ ಲಾಭವನ್ನು ನಮ್ಮ ಎದುರಾಳಿಗಳು ಪಡೆಯಲಿದ್ದಾರೆ. ನಮ್ಮದೇಶ ಎಲ್ಲದರಲ್ಲೂ ಕುಸಿಯಲಿದೆ ಎಂದು ಟ್ವೀಟ್ ಮತ್ತು ಫಾಕ್ಸ್ ನ್ಯೂಸ್ ನಲ್ಲಿ ಟ್ರಂಪ್ ಹೇಳಿದ್ದಾರೆ.

ಕಮಲಾ ಹ್ಯಾರಿಸ್ ರ ಸ್ಪರ್ಧೆ ಭಾರತೀಯರಿಗೆ ಹೆಮ್ಮೆ ತರುವಂತದ್ದೇ. ಆದರೂ ಪ್ರಧಾನಿ ಮೋದಿ ಮತ್ತು ಸಂಘ ಪರಿವಾರಕ್ಕೆ ಹೆಚ್ಚು ಬೇಸರ ತರುವಂತಹ ಸಂಗತಿಯಾಗಿದೆ ಎನ್ನಬಹುದು. ಏಕೆಂದರೆ, ಭಾರತ ದೇಶದ 'ಜಾತ್ಯಾತೀತ-ಪ್ರಜಾಸತ್ತಾತ್ಮಕತೆ' ಪರಿಕಲ್ಪನೆಯನ್ನು ಇವರ ಆಡಳಿತದಲ್ಲಿ, 2014 ರಿಂದೀಚೆಗೆ ರೂಪಿಸಿರುವ ಹಿಂದೂ ಪರಿಕಲ್ಪನೆ' ಯ ಭಾರತ' ದ ಪರಿವರ್ತನೆಗೆ ವಿಧಿಸುವ ವಿನಾಶಕಾರಿ ಸಂಗತಿಗಳು ಅಮೇರಿಕದಲ್ಲಿ ಈ ಚುನಾವಣಾ ಪ್ರಚಾರದಲ್ಲಿ ಬಟ್ಟ ಬಯಲಾಗುತ್ತವೆ. ಕಮಲಾ ಹ್ಯಾರಿಸ್ ಕೇವಲ ಪ್ರಗತಿಪರರು ಮಾತ್ರವಲ್ಲದೆ, ಸಂಘ ಪರಿವಾರ ಅಸಹ್ಯಕರವಾಗಿ ಪರಿಗಣಿಸುವ 'ಹಿಂದು ರಾಷ್ಟ್ರದ' ಕಲ್ಪನೆಯ ಹಿಂದಿರುವ ವಿನಾಶಕಾರಿ ಸಂಗತಿಗಳನ್ನು ಅಮೇರಿಕಾದಲ್ಲಿ ಬಿಚ್ಚಿಡುವ ಸಾಮರ್ಥ್ಯ ಹೊಂದಿದ್ದಾರೆ.

ಕಳೆದ ವರ್ಷ ಸೆಪ್ಟೆಂಬರ್ ನಲ್ಲಿ ಟೆಕ್ಸಾಸ್ ನ ಹ್ಯೂಸ್ಟನ್ ನಲ್ಲಿ ಮೋದಿ-ಟ್ರಂಪ್ ನಡೆಸಿದ ಶೋ ನಲ್ಲಿ ಮೋದಿಯವರು'ಅಬ್ ಕೀ ಬಾರ್ ಟ್ರಂಪ್ ಸರ್ಕಾರ್' ಎನ್ನುವ ಘೋಷಣೆಯನ್ನು ನೀಡಿದ್ದರು. ಭಾರತೀಯ-ಮೂಲದ ಅಮೇರಿಕನ್ ರನ್ನು ಮೋದಿ ಉದ್ದೇಶಿಸಿ ಮಾತನಾಡಿದ್ದರು. ಭಾರತೀಯ-ಅಮೇರಿಕನ್ನರು ಸಾಮಾನ್ಯವಾಗಿ (ಹಾಗೆ ನೋಡಿದರೆ ಹೆಚ್ಚು ಕಡಿಮೆ ಎಲ್ಲ ವಲಸೆಗಾರರು) ಡೆಮೊಕ್ರಾಟಿಕ್ ಬೆಂಬಲಿಗರಾಗಿದ್ದು ಒಂದು ದೊಡ್ಡ ವಿಭಾಗವನ್ನು ರಿಪಬ್ಲಿಕನ್ ಟ್ರಂಪ್ ರತ್ತ ಸೆಳೆಯುವ ಪ್ರಯತ್ನ ಇದಾಗಿತ್ತು. ಅದರಲ್ಲಿ ಸಾಕಷ್ಟು ಯಶಸ್ವಿಯಾಗಿತ್ತು ಎಂದೂ ಹೇಳಲಾಗಿತ್ತು.

ಕಮಲಾ ಹ್ಯಾರಿಸ್ ಮತ್ತು ಇತರೆ ಎಲ್ಲಾ ಭಾರತೀಯ ಮೂಲದ ಡೆಮಾಕ್ರಟಿಕ್ ಗಳು ಟೆಕ್ಸಾಸ್ ನ ಹೌಡಿ ಮೋದಿ ಸಭೆಯನ್ನು ಬಹಿಷ್ಕರಿಸಿದ್ದರು. ಈ ಬಹಿಷ್ಕಾರದ ಹಿಂದಿನ ಕಾರಣವೆಂದರೆ, ಮೋದಿ ಯವರೊಂದಿಗೆ ವೇದಿಕೆಯಲ್ಲಿ ಟ್ರಂಪ್ ಇರುವುದು ಮತ್ತು ಜಮ್ಮು-ಕಾಶ್ಮೀರದಲ್ಲಿ ಈ ಕಾರ್ಯಕ್ರಮಕ್ಕೆ ಒಂದು ತಿಂಗಳ ಹಿಂದೆಯಷ್ಟೆ ಕಣಿವೆ ಪ್ರದೇಶಗಳಲ್ಲಿ ಸತತ ಲಾಕ್ ಡೌನ್, ಕಲಮು 370 ರದ್ದತಿ ಮತ್ತು ಸಂಪರ್ಕ ದಿಗ್ಬಂದನ ಮಾಡಿದ್ದು - ಇವೆರಡೂ ಬಹಿಷ್ಕಾರ ಕ್ಕೆ ಮೂಲ ಕಾರಣವಾಗಿದ್ದವು. ಹಿಂದುತ್ವ ಸಿದ್ಧಾಂತ ವನ್ನು ಜಾಗತಿಕವಾಗಿ ಅನುಮೋದಿಸುವ ಕಾರ್ಯಕ್ರಮ ಅದಾಗಿತ್ತು. ಈ ಕಾರ್ಯಕ್ರಮವನ್ನು ಭಾರತೀಯ ಮೂಲದ ಅಮೇರಿಕನ್ನರು ಮತ್ತು ಪ್ರಗತಿಪರರು ಪ್ರಜಾಪ್ರಭುತ್ವ ವಾದಿಗಳು ತಿರಸ್ಕರಿಸಿದ್ದರು. ಅರ್ಧ ಭಾರತೀಯ ಮೂಲ ಮಾತ್ರವಲ್ಲದೆ ಅವರ ಒಟ್ಟು ಪ್ರಗತಿಪರ ಧೋರಣೆಗಳು ಅದೂ ಟ್ರಂಪ್ ಅವರ ವಿಚ್ಛಿದ್ರಕಾರಕ ಮತ್ತು ವಿಫಲ ಕೋವಿಡ್ ನೀತಿಗಳಿಂದಾಗಿ ಮೋದಿಯ ಬೆಂಬಲಿಗರೂ ಟ್ರಂಪ್ ನ್ನು ಬೆಂಬಲಿಸುವ ಸಾಧ್ಯತೆ ಕಡಿಮೆಯಾಗಬಹುದು. ಇಂತಹವರೂ ಭಾರತೀಯ ಮೂಲದ ಆಕರ್ಷಣೆಯಿಂದ ಕಮಲಾ ಅವರನ್ನು ಸಾರಾಸಗಟಾಗಿ ಬೆಂಬಲಿಸಬಹುದು ಎನ್ನಲಾಗಿದೆ.

ಇದೀಗ ಕಮಲಾ ಹ್ಯಾರಿಸ್ ರ ಸ್ಪರ್ಧೆಯಿಂದ, ಹೌಡಿ ಮೋದಿಯ ಶೋ ದ ಇದ್ದ ಬದ್ದ ಪ್ರಭಾವ ಕೊಚ್ಚಿ ಹೋಗುವ ಸಂಭವ ಉಂಟಾಗಿದೆ. ಹಾಗಾಗಿ, ಬಿಡನ್-ಹ್ಯಾರಿಸ್ ಜೋಡಿ ಗೆದ್ದರೆ, ಮೋದಿ ಸರ್ಕಾರಕ್ಕೆ ಸಮಸ್ಯೆ ಎದುರಾಗ ಬಹುದು. ಜಮ್ಮು-ಕಾಶ್ಮೀರ ದಲ್ಲಿನ ಮಾನವ ಹಕ್ಕುಗಳ ಉಲ್ಲಂಘನೆ, ಮುಸ್ಲಿಂ-ವಿರೋಧಿ ಬಹುಸಂಖ್ಯಾತವಾದಿ ವರ್ತನೆಗಳು ಮತ್ತು ಸಿಎಎ, ಎನ್.ಆರ್.ಸಿ ಮತ್ತು ಈಶಾನ್ಯ ಭಾರತದ ಕುರಿತು ನೀತಿಗಳು- ಇವೆಲ್ಲವೂ ಭಾರತ ಮತ್ತು ಯುಎಸ್ ನಡುವಿನ '21 ನೇ ಶತಮಾನದ ಪಾಲುದಾರಿಕೆ'ಯನ್ನು ಸೂಕ್ತವಾಗಿ ವ್ಯಾಖ್ಯಾನಿಸಲು ಪ್ರಮುಖ ಸ್ಥಾನವನ್ನು ಭಾರತಪಡೆಯಲು ಅನುಕೂಲವಾಗಬಹುದು.

ಕಮಲಾ ಅವರ ಸ್ಪರ್ಧೆ ಯ ಮಹತ್ವ ಇರುವುದು ಅವರ ಅರ್ಧ ಭಾರತೀಯ-ಅಮೇರಿಕನ್ ಗುರುತಿನಿಂದ ಅಲ್ಲ. ಅದು ಅವರ ಇನ್ನರ್ಧದ ಆಫ್ರಿಕನ್-ಅಮೇರಿಕನ್ ಗುರುತಿನಿಂದ. ಎರಡೂ ಗುರುತುಗಳು ಮತ್ತು ಅವರ ಪ್ರಜಾಸತ್ತಾತ್ಮಕ ಪ್ರಗತಿಪರ ಧೋರಣೆಗಳ ಒಟ್ಟು ಪರಿಣಾಮವಾಗಿ ಅವರ ವರ್ಚಸ್ಸು ಹೆಚ್ಚಿದೆ. ಬಿಡನ್ ಅವರ ಇಳಿವಯಸ್ಸಿನಿಂದಾಗಿ ಅವರನ್ನು ಬೆಂಬಲಿಸಲು ಅನುಮಾನಿಸುತ್ತಿದ್ದ ವಿಭಾಗ ಕಮಲಾ ಸ್ಪರ್ಧೆಯಿಂದಾಗಿ ಬೆಂಬಲಿಸಬಹುದು. ಅಲ್ಲದೆ ಉಪಾಧ್ಯಕ್ಷರಾದರೆ ಅವರು 2024 ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಮೊದಲ ಮಹಿಳಾ ಅಧ್ಯಕ್ಷರಾಗುವ ಸಾಧ್ಯತೆ ಸಹ ಇರುವುದರಿಂದ ಅವರ ಸ್ಪರ್ಧೆ ಸಂಚಲನ ಉಂಟು ಮಾಡಿದೆ. ●



JANASHAKTHI KANNADA VARA PATRIKE August 24-30, 2020 Price: Rs. 10/- Date of Publication: 21 August 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಸಚಿವರ ಮನೆಮುಂದೆ ಬಿಸಿಯೂಟ ನೌಕಕರ ಪ್ರತಿಭಟನೆ: ಬಿಸಿಯೂಟ ನೌಕಕರ ಬಂಧನ, ವ್ಯಾಪಕ ಆಕ್ರೋಶ







ಬೆಂಗಳೂರು: ಅಕ್ಷರ ದಾಸೋಹ ನೌಕರರು ಕಳೆದ ಐದು ತಿಂಗಳಿಂದ ತಮ್ಮ ಬೇಡಿಕೆಗಳ ಈಡೇರಿಕೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಗಮನ ಸೆಳೆಯಲು ಅನೇಕ ಮನವಿ ಪತ್ರಗಳನ್ನು ನೀಡಿದ್ದಾರೆ.

ರಾಜ್ಯದ ಆಯಾ ಜಿಲ್ಲೆ ಮತ್ತು ತಾಲೂಕಿನಲ್ಲಿ ಸ್ವಾತಂತ್ರ್ಯ ಉತ್ಸವದ ದಿನದ ತನಕ ಐದು ದಿನ ಉಪವಾಸ ಸತ್ಯಾಗ್ರಹ, ಧರಣ ಇತ್ಯಾದಿ ಹೋರಾಟ ಮಾಡಿದ್ದಾರೆ. ಆದರೆ ಇದೂವರೆಗೂ ಯಾವುದೇ ಸಕಾರಾತ್ಮಕ ಸ್ಪಂದನೆ ಇಲ್ಲದ ಪ್ರಯುಕ್ತ, ಇಂದು ಬೆಳಿಗ್ಗೆ ಬೆಂಗಳೂರಿನಲ್ಲಿ ಮಾನ್ಯ ಶಿಕ್ಷಣ ಸಚಿವರನ್ನು ಭೇಟಿಯಾಗಲು ದೈಹಿಕ ಅಂತರ ಕಾಯ್ದುಕೊಂಡು ಅವರ ಮನೆ ಮುಂದೆ ಪ್ರತಿಭಟನೆ ನಡೆಸುತ್ತಿದ್ದಾಗ ಪೋಲಿಸರು ಅಲ್ಲಿದ್ದ ಹೋರಾಟಗಾರರನ್ನು ಬಂಧನ ಮಾಡಿದ್ದಾರೆ.

ಇದು ಅತ್ಯಂತ ಖಂಡನೀಯ ಮತ್ತು ಅಸಾಂವಿಧಾನಿಕ ಹಾಗೂ ಅಪ್ರಜಾಸತ್ತಾತ್ಮಕ ಕ್ರಿಯೆಯಾಗಿದೆ. ಬೇಡಿಕೆ ಕೇಳಿದರೆ ಬಂಧಿಸುವ ಸರ್ಕಾರದ ನೀತಿಯನ್ನು ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಅಕ್ಷರದಾಸೋಹ ನೌಕರರ ಸಂಘ ತೀವ್ರವಾಗಿ ಖಂಡಿಸುತ್ತದೆ. ಬಂಧಿತರನ್ನು ಈ ಕೂಡಲೇ ಬೇಷರತ್ ಬಿಡುಗಡೆಗೆ ಮಾಡಬೇಕೆಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕಕರರ ರಾಜ್ಯ ಮುಖಂಡರಾದ ಯಮುನಾ ಗಾಂವ್ಕರ್ ಒತ್ತಾಯಿಸಿದ್ದಾರೆ.

ಕೊರೋನಾ ಹಾಗೂ ಲಾಕ್ ಡೌನ್ ನಿಂದ ಸಾಕಷ್ಟು ಸಂಕಷ್ಟಗಳನ್ನು ಎದುರಿಸುತ್ತಿರುವ ಬಿಸಿಯೂಟ ನೌಕರರಿಗೆ ವೇತನ ಇಲ್ಲದೆ ಕುಟುಂಬ ನಿರ್ವಹಿಸಲು ಸಾಕಷ್ಟು ಸಮಸ್ಯೆಗಳನ್ನು ಅನುಭವಿಸಿದ್ದಾರೆ. ಅಲ್ಲಲ್ಲಿ ಬಡ್ಡಿಗೆ ಸಾಲ ಪಡೆದು ಜೀವನ ನಿರ್ವಹಿಸುತ್ತಿರುವ ಇವರ ಬಗ್ಗೆ ಸರ್ಕಾರ ಯಾವುದೇ ಗಮನ ಹರಿಸಿಲ್ಲ, ಪೋಲಿಸರು ಅಮಾನುಶವಾಗಿ ಹೋರಾಟಗಾರರನ್ನು ಎಳೆದಾಡಿದಲ್ಲದೆ, ದೌರ್ಜನ್ಯ ನಡೆಸಿದ್ದಕ್ಕೆ ರಾಜ್ಯದಂತ್ಯ ಆಕ್ರೋಶ ವ್ಯಕ್ತವಾಗಿದೆ. ನಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೂ ಹೋರಾಟ ನಿಲ್ಲುವುದಿಲ್ಲವೆಂದು ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತಾ ತಿಳಿಸಿದ್ದಾರೆ.

ಕಳೆದ 5 ತಿಂಗಳಿನಿಂದಲೂ ರಾಜ್ತದ ಅಕ್ಷರದಾಸೋಹ ನೌಕರರಿಗೆ ರಾಜ್ಯ ಸರಕಾರ ವೇತನ ನೀಡಿಲ್ಲ. ಕೋವಿಡ್‌ನಿಂದಾಗಿ ಅವರಿಗೆ ಶಾಲೆಯಲ್ಲಿ ಬಿಸಿಯೂಟ ಸಿದ್ಧಪಡಿಸುವ ಕೆಲಸವೂ ಇಲ್ಲ, ವೇತನವೂ ಇಲ್ಲವೆಂಬಂತಾಗಿದೆ. ಸರಕಾರಗಳು ಬಡ ಕಾರ್ಮಿಕ ವರ್ಗಕ್ಕೆ ಕೋವಿಡ್ ಪರಿಹಾರವಾಗಿಯೂ ಆರ್ಥಿಕ ನೆರವು ನೀಡುತ್ತೇವೆಂದು ಹೇಳಿದ್ದಾರಾದರೂ, ಈ ಐದು ತಿಂಗಳಲ್ಲಿ ಯಾವ ಪರಿಹಾರಗಳೂ ಸಿಗಲಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯದ ಅಕ್ಷರದಾಸೋಹ ನೌಕರರ ಸಂಘಟನೆ ಆಗಸ್ಟ್ 17 ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ ನೀಡಿತ್ತು.

ಮಂಗಳೂರಿನಲ್ಲಿ ದ.ಕ.ಜಿಲ್ಲಾ ಅಕ್ಷರದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಮಿನಿ ವಿಧಾನಸೌಧದ ಮುಂದೆ ಪ್ರತಿಭಟನೆಯನ್ನು ನಡೆಸಲಾಯಿತು. ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ, ಸಂಘದ ಅಧ್ಯಕ್ಷೆ ಪದ್ಮಾವತಿ ಶೆಟ್ಟಿ, ಖಜಾಂಚಿ ಭವ್ಯಾ ಮುಚ್ಚೂರು ಪ್ರದರ್ಶನವನ್ನುದ್ದೇಶಿಸಿ ಮಾತನಾಡಿದರು. ಸುರಿಯುತ್ತಿರುವ ಮಳೆಯ ನಡುವೆಯೂ ಈ ಪ್ರದರ್ಶನ ನಡೆಸಲಾಯಿತು. ಜಿಲ್ಲಾ ಸಂಘದ ಮುಖಂಡರಾದ ರೇಖಲತಾ ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಮೂಡಬಿದ್ರಿ ತಾಲೂಕು ಕಚೇರಿ ಮುಂದೆ ಮೂಡಬಿದ್ರೆ ತಾಲೂಕು ಅಕ್ಷರದಾಸೋಹ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ದ.ಕ.ಜಿಲ್ಲಾ ಅಕ್ಷರದಾಸೋಹ ನೌಕರರ ಸಂಘದ ಕಾರ್ಯದರ್ಶಿ ಗಿರಿಜಾ ಮೂಡಬಿದ್ರಿ ಮಾತನಾಡಿದರು. ಸಿಐಟಿಯು ಮುಖಂಡರಾದ ರಾಧಾ ಮೂಡಬಿದ್ರಿ ಹಾಗೂ ಸಂಘದ ತಾಲೂಕು ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.





ಮೈಕ್ರೋ ಫೈನಾನ್ಸ್ ಕಿರುಕುಳ ವಿರುದ್ಧ ಬಂಟ್ವಾಳದಲ್ಲಿ ಪ್ರತಿಭಟನೆ:

ಋಣಮುಕ್ತ ಹೋರಾಟ ಸಮಿತಿ ಕರ್ನಾಟಕ, ದ.ಕ. ಜಿಲ್ಲಾ ಜನವಾದಿ ಮಹಿಳಾ ಸಂಘಟನೆ ಮತ್ತು ಸಿಐಟಿಯು ಬಂಟ್ವಾಳ ತಾಲೂಕು ಸಮಿತಿಗಳ ಜಂಟಿ ನೇತೃತ್ವದಲ್ಲಿ ಆಗಸ್ಟ್ 18 ರಂದು ಮೈಕ್ರೋ ಫೈನಾನ್ಸ್ ಸಂಸ್ಥೆ ಮಹಿಳೆಯರಿಗೆ ಕಿರುಕುಳ ನೀಡುವುದರ ವಿರುದ್ಧ, ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲು ಮತ್ತು ಇತರೇ ಬೇಡಿಕೆ ಈಡೇರಿಸಲು ಒತ್ತಾಯಿಸಿ ಬಂಟ್ವಾಳ ಮಿನಿ ವಿಧಾನಸೌಧದ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದವು.

ಮೈಕ್ರೋ ಫೈನಾನ್ಸ್‌ನ ಸಾಲ ವಸೂಲಿ ದೌರ್ಜನ್ಯಗಳಿಂದ ಬಾಧಿತರಾದ ಬಂಟ್ವಾಳ ತಾಲೂಕಿನ ಮತ್ತು ಬೆಳ್ತಂಗಡಿ ತಾಲೂಕಿನ ಸಾಲಗಾರರು ಅದರಲ್ಲೂ ವಿಶೇಷವಾಗಿ ಬಾಧಿತ ಮಹಿಳೆಯರು ಈ ಪ್ರತಿಭಟನಾ ಪ್ರದರ್ಶನದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ ಅವರು ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು. ಬಡ ಮಹಿಳೆಯರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಸ್ವ ಉದ್ಯೋಗದ ಹೆಸರಿನಲ್ಲಿ ಪ್ರಾರಂಭಿಸಿದ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದು ಮಹಿಳೆಯರನ್ನು ಅಧಿಕ ಪ್ರಮಾಣದ ಬಡ್ಡಿ ವಿಧಿಸುವ ಮೂಲಕ ವಸೂಲಿಗಾಗಿ ದೌರ್ಜನ್ಯ ಹಿಂಸೆ ನಡೆಸುತ್ತಿದೆ. ರಾಜ್ಯಾದ್ಯಂತ ಮೈಕ್ರೋ ಫೈನಾನ್ಸ್ ದೌರ್ಜನ್ಯದಿಂದ ಬಡ ಮಹಿಳೆಯರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ರಾಜ್ಯ, ಕೇಂದ್ರ ಸರಕಾರಗಳು ಮೌನವಹಿಸುತ್ತಿವೆ ಎಂದವರು ಟೀಕಿಸಿದರು.



ಪ್ರತಿಭಟನೆಯನ್ನುದ್ದೇಶಿಸಿ ಕರ್ನಾಟಕ ರಾಜ್ಯ ಋಣಮುಕ್ತಿಗಾಗಿ ಹೋರಾಟ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ನ್ಯಾಯವಾದಿ ಎಸ್. ಎಂ.ಶಿವಕುಮಾರ್ ಮಾತನಾಡಿ, ಮೈಕ್ರೋಫೈನಾನ್ಸ್ ಸಂಸ್ಥೆಗಳು ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಗಳನ್ನು ಗಾಳಿಗೆ ತೂರಿ ಕಾರ್ಯಾಚರಿಸುತ್ತಿದ್ದರೂ, ದ.ಕ.ಜಿಲ್ಲೆಯ ಶಾಸಕ, ಸಂಸದರು ಮಾತನಾಡುತ್ತಿಲ್ಲ. ಇನ್ನು ಋಣಮುಕ್ತ ಹೋರಾಟ ಸಮಿತಿ ಹೆಸರಲ್ಲಿ ಕೆಲವರು ಮಹಿಳೆಯರ ದಾರಿ ತಪ್ಪಿಸುತ್ತಿದ್ದಾರೆ ಎಂದು ಎಚ್ಚರಿಸಿದರು.

ಜನವಾದಿ ಮಹಿಳಾ ಸಂಘಟನೆಯ ದ.ಕ. ಜಿಲ್ಲಾಧ್ಯಕ್ಷೆ ಜಯಂತಿ ಬಿ.ಶೆಟ್ಟಿ, ಬಂಟ್ವಾಳ ತಾಲೂಕು ಅಧ್ಯಕ್ಷ ರಾಮಣ್ಣ ವಿಟ್ಲ, ಋಣಮುಕ್ತ ಹೋರಾಟ ಸಮಿತಿಯ ಬಂಟ್ವಾಳ ತಾಲೂಕು ಅಧ್ಯಕ್ಷೆ ಶೋಭಾ ಕೊಯಿಲ, ಸಮಿತಿಯ ಬೆಳ್ತಂಗಡಿ ಸ್ಥಾಪಕ ಕೊರಗಪ್ಪ ಪೂಜಾರಿ ಅಳದಂಗಡಿ, ಬೆಳ್ತಂಗಡಿ ತಾಲೂಕು ಕಾರ್ಮಿಕ ಮುಖಂಡರಾದ ಶೇಖರ ಲಾಯಿಲ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಡಿವೈಎಫ್‌ಐ ಬಂಟ್ವಾಳ ತಾಲೂಕು ಕಾರ್ಯದರ್ಶಿ ತುಳಸೀದಾಸ್ ವಿಟ್ಲ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನೆಯ ಬಳಿಕ ಬಂಟ್ವಾಳ ತಹಶೀಲ್ದಾರರ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**